
# ಹಿಂದು ವಾಣಿ

ಸಂಪುಟ – 22
ಸಂಚಿಕೆ – 09
ಮಾಘ–ಫಾಲ್ಗುಣ
ಮಾರ್ಚ್ 2024
ಬೆಲೆ ರೂ. 15.00

HINDU VANI
KANNADA MONTHLY

VOL - 22 ISSUE-09 MARCH 2024 BENGALURU PAGES-44 Rs:15/-



## ರಾಷ್ಟ್ರ–ಋಷಿ ಶ್ರೀಗುರೂಜಿ

# ಕರ್ನಾಟಕ ದಕ್ಷಿಣ ಕಾರ್ಯಕರ್ತ/ಕರಸೇವಕ ಭಕ್ತರ ಅಯೋಧ್ಯಾ ಯಾತ್ರೆ



ಹಿಂದುವಾಣಿ
hinduvani@yahoo.com
ಶ್ರೀ ಶೋಭಕೃತು ಸಂವತ್ಸರ
ಮಾಘ–ಫಾಲ್ಗುಣ

ಮಾರ್ಚ್ 2024

**ಗೌರವ ಸಂಪಾದಕ**
ಟಿ.ಎ.ಪಿ. ಶೆಣೈ

**ಪ್ರಕಾಶಕರು**
ಎನ್.ಪಿ. ಮುನಿರಾಜು
ವಿಶ್ವ ಹಿಂದು ಪರಿಷದ್, ಕರ್ನಾಟಕ
'ಧರ್ಮಶ್ರೀ', 91 ಶಂಕರಪುರಂ
ಶಂಕರಮಠ ಸಮಾನಾಂತರ ರಸ್ತೆ
ಬೆಂಗಳೂರು – 560 004.
ದೂ. 080–26604641

**ಪ್ರಸಾರ ಸಲಹೆ**
ಹೆಚ್.ಎಸ್. ಸೀತಾರಾಮು
ರಮೇಶ ಡಿ.
ಶಿವಕುಮಾರ ಮೇಲ್ನಾಡ್
ಶಿವಕುಮಾರ ಬೋಳ್‌ಶೆಟ್ಟಿ
ಎಸ್. ಜಯರಾಮ್

**ಚಂದಾವಿವರ**
ಬಿಡಿಪ್ರತಿ ರೂ. 15/–
ವಾರ್ಷಿಕ ಚಂದಾ ರೂ. 130/–
ದ್ವೈವಾರ್ಷಿಕ ಚಂದಾ ರೂ. 250/–

**ಮುದ್ರಕರು**
ರಾಷ್ಟ್ರೋತ್ಥಾನ ಮುದ್ರಣಾಲಯ
ನಂ.8 & 8/1, ಸತ್ಯಪ್ರಮೋದತೀರ್ಥ ಬಿಲ್ಡಿಂಗ್
3ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ
ಚಾಮರಾಜಪೇಟೆ, ಬೆಂಗಳೂರು – 560 018.
rmudrana@gmail.com

**ಸೂಕ್ತಿಶ್ರೀ**

# ರಾಜ ಮತ್ತು ನಯವಂತಿಕೆ

– **ಬಿ.ಈ. ಸುರೇಶ,** ಬೆಂಗಳೂರು

ರಾಮಾಯಣದ ಸುಂದರಕಾಂಡದಲ್ಲಿ 'ನಯ'ವೆನ್ನುವ ಮಾತು ಬರುತ್ತದೆ. ಅದು ಅಶೋಕವನದಲ್ಲಿ ಬಂಧಿತಳಾಗಿದ್ದ ಸೀತೆಯು ರಾವಣನಿಗೆ ಹೇಳಿದ ಬುದ್ಧಿಮಾತಿನಲ್ಲಿದೆ.

**ಅಕೃತಾತ್ಮಾನಮಾಸಾದ್ಯ ರಾಜಾನಮನಯೇ ರತಮ್।**
**ಸಮೃದ್ಧಾನಿ ವಿನಶ್ಯಂತಿ ರಾಷ್ಟ್ರಾಣಿ ನಗರಾಣಿ ಚ॥**

– **ವಾಲ್ಮೀಕಿ ರಾಮಾಯಣ, ಸುಂದರಕಾಂಡ**

'ರಾಷ್ಟ್ರಗಳಾಗಲೀ ಅಥವಾ ನಗರಗಳಾಗಲೀ ಎಷ್ಟೇ ಸಮೃದ್ಧವಾಗಿದ್ದರೂ ಅದನ್ನು ಆಳುತ್ತಿರುವ ರಾಜನು ಇಂದ್ರಿಯ ಚಾಪಲ್ಯಕ್ಕೆ ತುತ್ತಾದವನಾಗಿದ್ದರೆ, ಯೋಗ್ಯವಾದ ರಾಜಧರ್ಮವನ್ನು ಪಾಲಿಸದೇ ಇದ್ದಲ್ಲಿ ಅವೆಲ್ಲವೂ ನಾಶವಾಗಿ ಹೋಗುತ್ತವೆ'.

"ರಾವಣ, ವೈಭವದಿಂದ ಮೆರೆಯುವ ಲಂಕಾ ರಾಜ್ಯದ ಸಮೃದ್ಧಿಯು ಬಹಳ ಕಾಲ ಉಳಿಯಲಾರದು. ಕಾಮುಕನಾದ ನಿನಗೆ ನಿನ್ನ ಮೇಲೆ ಯಾವುದೇ ನಿಯಂತ್ರಣವಿಲ್ಲ. ಶ್ರೀರಾಮನೊಡನೆ ವೈರದಿಂದಾಗಿ ನಿನ್ನ ರಾಜನೀತಿಯೂ ವಿಫಲವಾಗುತ್ತದೆ. ನೀನು ನಾಶವಾಗುವಿಯಾ" ಎಂದು ಸೀತಾದೇವಿಯು ಅವನಿಗೆ ಎಚ್ಚರಿಕೆಯನ್ನು ಕೊಡುತ್ತಾಳೆ.

ಧರ್ಮರಾಜ್ಯವೆನಿಸಿದ ಕೋಸಲ ದೇಶಕ್ಕೆ ವ್ಯತಿರಿಕ್ತವೆನಿಸುವಂತೆ ಲಂಕಾರಾಜ್ಯವಿದ್ದಿತು. ಎರಡೂ ಕಡೆಯೂ ವೈಭವ ಶ್ರೀಮಂತಿಕೆಗಳಿದ್ದವು ನಿಜ. ಆದರೆ ಹಿಂಸೆಯಿದ್ದುದು ಲಂಕಾರಾಜ್ಯದಲ್ಲಿ. ಶಾಂತಿ ಸಮಾಧಾನಗಳಿದ್ದುದು ಅಯೋಧ್ಯೆಯಲ್ಲಿ. ಈಗ ಕಾಣುವ; ಹಣದ ಬಲದಿಂದ, ಕುತಂತ್ರಗಳಿಂದ,


ಹಿಂಸೆಯ ಬಲದಿಂದ ರಾಜ್ಯವಾಳಬಹುದೆನ್ನುವುದು ಆಗ ಲಂಕೆಯ ನೀತಿಯಾಗಿದ್ದಿತು. ಧರ್ಮಮಾರ್ಗವನ್ನು ಅನುಸರಿಸಿ ನಡೆಯುವ ರಾಜ ನೀತಿಯಿದ್ದುದು ಕೋಸಲದಲ್ಲಿ. ಇಂತಹ ನೀತಿಯನ್ನೇ 'ನಯ'ವೆಂದು ಕರೆಯುವರು. ಈ ರಾಜನೀತಿಯು ಆ ಕಾಲದಲ್ಲಿ ಸಾರ್ವತ್ರಿಕವಾಗಿದ್ದಿತು. ಇದನ್ನು ಸರ್ವಶಕ್ತನೆನಿಸುವ ರಾಜನು ಕೂಡಾ ಪರಿಪಾಲಿಸಲೇ ಬೇಕಾಗಿದ್ದಿತು.

'ನಯ'ವೆನ್ನುವುದು ಗೋಚರವಾಗದ ರಾಜನೀತಿ. ಅದನ್ನು ಜನಸಾಮಾನ್ಯರೊಡನೆ ಅಧಿಕಾರಿಗಳೂ, ರಾಜನೂ, ಮಂತ್ರಿಗಳೂ ಮನ್ನಿಸಲೇಬೇಕಾಗಿದ್ದಿತು. ಈಗ ಬಹುತೇಕ ಕಾನೂನುಗಳನ್ನು ಗೌರವಿಸಬೇಕಾದವರು ಸಾಮಾನ್ಯ ನಾಗರಿಕರು ಮಾತ್ರ ಎನ್ನುವ ಪರಿಸ್ಥಿತಿ ಇದೆ. ಆಳುಗರ 'ಕಾನೂನು' ಎನ್ನುವುದೊಂದು ಬೇರೆಯೇ ಇದೆ. ಅದು 'ನಯ'ವೆನ್ನುವ ಆಚರಣೆಗಳನ್ನು ಉಲ್ಲಂಘಿಸಿ ನಡೆಯುವುದು, ಸಜ್ಜನ ಸಮ್ಮತವಾದುದೆಲ್ಲವನ್ನು ಮೀರಿ ನಿಲ್ಲುವುದು. ಸರ್ಕಾರಕ್ಕೊಂದು ನ್ಯಾಯ ಸಾಮಾನ್ಯರಿಗೊಂದು ನ್ಯಾಯವೆನ್ನುವ ಮಾತು ಬಂದುದೇ ಈ ಬೆಳವಣಿಗೆಯಿಂದ.

ಪ್ರಜಾಪ್ರಭುತ್ವವೆಂದು ಕರೆಯುವ ಇಂದಿನ ವ್ಯವಸ್ಥೆಯಲ್ಲಿ ರಾಜವೈಭವವನ್ನು ಭೋಗಿಸುವುದು ಮಂತ್ರಿಗಳಾಗಿರುವವರ ಅಧಿಕಾರವೆನ್ನುವುದು ಎಲ್ಲರೂ ಒಪ್ಪಿಕೊಳ್ಳಬೇಕಾದ ವಾಸ್ತವವಾಗಿ ಬಿಟ್ಟಿದೆ. ಅದಕ್ಕಾಗಿ ಎಲ್ಲರೂ ಮಂತ್ರಿಗಳಾಗಬೇಕು. ತಪ್ಪಿದರೆ ಮುಕ್ಕಿ ತಿನ್ನುವ ಅವಕಾಶವಿರುವ ಆಯೋಗಗಳಿಗೆ ಅಧ್ಯಕ್ಷರಾಗಬೇಕು. ಅದೂ ಸಿಗದಿದ್ದರೆ ವಾಹನ ವಸತಿ, ಟಿ.ಎ.ಡಿ.ಎ ಗಳು ದೊರಕುವ ಗಂಜಿ ಕೇಂದ್ರಗಳಾದರೂ ಸರಿಯೇ ಎನ್ನುವಂತಹ ಸ್ಥಿತಿಯನ್ನು ನಿರ್ಮಿಸುವುದು ಆಳುವ ಸರ್ಕಾರದ ಹೊಣೆ ಎನ್ನುವಂತಾಗಿದೆ. ಇಲ್ಲದಿದ್ದರೆ ಬೆಂಬಲವನ್ನು ಹಿಂಪಡೆಯುವ ತೂಗು ಕತ್ತಿಯನ್ನು ಝಳಪಿಸುವ ಬೆದರಿಕೆಯಂತೂ ಇದ್ದೇ ಇದೆ.

ಇಂತಹ ದುರ್ಭರ ಸ್ಥಿತಿಯಲ್ಲೂ ರಾಜಧರ್ಮವನ್ನು, ಸುಯೋಗ್ಯ ರಾಜ ನೀತಿಯನ್ನು ಉಳಿಸುವ ಆಶಾದಾಯಕ ಬೆಳವಣಿಗೆಯಾದ 'ನಯ'ವೆನ್ನುವ ಧರ್ಮ ಸೂತ್ರವನ್ನು ಅಳವಡಿಸಿಯೂ ರಾಜ್ಯವನ್ನು ಆಳಬಹುದು, ಹಾಗಿದ್ದೂ ಜನಬೆಂಬಲವನ್ನು ಪಡೆಯಬಹುದು ಎನ್ನುವುದೀಗ ಸಿದ್ಧಸೂತ್ರವಾಗುತ್ತಿದೆ. ಇದು ಸ್ಥಾಯಿ ರೂಪವನ್ನು ಗಳಿಸಬೇಕು. ಭಾರತಕ್ಕೆ ಈ ರೀತಿ ಬಾಳಿ ಬದುಕಿ ಬೆಳೆಯುವ ಅಂತಃಸತ್ತ್ವವಿದೆ. ಇತಿಹಾಸದಲ್ಲಿ ಲಂಕೆಯಂತೆ ಶ್ರೀಮಂತಿಕೆಯಿಂದ ಇದ್ದೂ 'ನಯ'ವಿಲ್ಲದ ರಾಜನೀತಿಯಿಂದ ನಾಶವಾದ ಉದಾಹರಣೆಗಳೂ ಇವೆ. ಅಯೋಧ್ಯೆಯನ್ನು ಆಳಿದ ಇಕ್ಷ್ವಾಕುವಂಶದ ರಾಜರುಗಳಿಂದ ಮಾದರಿ ಆಡಳಿತವನ್ನು ನೀಡಿದ ವೃತ್ತಾಂತಗಳೂ ಇವೆ. ಪ್ರಜಾಪ್ರಭುತ್ವದಲ್ಲಿರುವ ಒಂದು ಉತ್ತಮ ಅಂಶವೆಂದರೆ 'ನಯ'ವಿರುವ ಆಡಳಿತವನ್ನು ಮನ್ನಿಸುವ ಅವಕಾಶವಿರುವುದು. 'ಅನ್ಯಾಯ'ವೆನಿಸುವರನ್ನು ಆಡಳಿತದಿಂದ ದೂರವಿರಿಸುವ ಅಧಿಕಾರವಿರುವುದು. ಕೆಲವೇ ತಿಂಗಳಲ್ಲಿ ಇಂತಹ ಅವಕಾಶವು ಮತ್ತೆ ಬರುತ್ತಿದೆ.




## ಎಂದಿನಂತೆ


3 **ಸೂಕ್ತಿಶ್ರೀ** ರಾಜ ಮತ್ತು ನಯವಂತಿಕೆ

6 **ಪ್ರತಿಧ್ವನಿ**

7 **ಸಂಪಾದಕೀಯ** ಕಡಿವಾಣವಿಲ್ಲದ ಸರ್ಕಾರ

09 **ಕವನ** ಪೂಜ್ಯ ಗುರೂಜಿ ನಿಮಗೆ ಶತಶತ...

28 **ಕವನ** ಬುದ್ಧಿ ಬಂದಿತು

29 **ನಿಮಗೆಷ್ಟು ಗೊತ್ತು?**

30 **ಶಬ್ದಶೋಧ 195**

30 **ಕತೆಕತೆ ಕಾರಣ** ಉಪಕಾರ ಮಾಡಿದವನಿಗೆ...

36 **ಕ್ಷೇತ್ರದರ್ಶನ** ಬೆಳಗಾವಿಯ ಕಪಿಲೇಶ್ವರ ದೇಗುಲ

39 **ಪ್ರಸ್ತುತ** ಮತ್ತೆ ಬರುವಳೇ?


## ತಿಂಗಳ ವಿಶೇಷ


10 **ಮುಖಪುಟ ಲೇಖನ:** ರಾಷ್ಟ್ರ–ಋಷಿ ಶ್ರೀಗುರೂಜಿ

15 ಜೀವನದ ಅನನ್ಯ ಅನುಭವ

18 ಯಾನ್ ಮಿರಾ ಎನ್ನುವ ಹೊಸದನಿ

25 ಶಕ್ತಿಯಿದ್ದಾಗ ದೇಶದ್ರೋಹ

26 ಎನ್.ಜಿ.ಓ. ಮತ್ತು ವಿದೇಶಿ ದೇಣಿಗೆಗಳು

32 ದ್ವಾದಶ ಜ್ಯೋತಿರ್ಲಿಂಗಗಳು




## ನಮಗೂ ಹಾಗೆಯೇ ಅನಿಸಿತು

ಹಲವು ಶತಮಾನಗಳ ನಂತರ ಭಾರತವು ನಿರಮ್ಮಳವಾಗಿ ಸಂತೋಷದಿಂದ ಸುಖಿಸಿದ ದಿನ ಶೋಭಕೃತ್ ಸಂವತ್ಸರದ ಪುಷ್ಯ ಶುದ್ಧ ದ್ವಾದಶಿಯಂದು. ಸಂಪಾದಕೀಯವು ವ್ಯಕ್ತಪಡಿಸಿದ ಪ್ರತಿಯೊಂದು ಭಾವನೆಯೂ ನಮ್ಮದೇ ಅನುಭವವೆನಿಸಿತು.

– **ಅಚ್ಯುತ ಶೇಷಾದ್ರಿ,** ಅನಂತಪುರ

## ಹಿಂದುವಾಣಿ ಸರ್ವಾಂಗ ಸುಂದರ

ಉತ್ತಮ ಕಲ್ಪನೆಯ ಸುಸಂಬದ್ಧ ಮುಖಪುಟದಿಂದ ಹಿಡಿದು ಕೊನೆಯ ಪುಟದ ವರೆಗಿನ ಚಿತ್ರ ಸಂಯೋಜನೆಗಳು ಒಂದಕ್ಕೊಂದು ಪೂರಕವಾಗಿ ಉತ್ಕಟ ಅನುಭವವನ್ನು ನೀಡುವ ಮೂಲಮಾದರಿಗಳು.

– **ಚಿತ್ರಾ ಸಂತೋಷ,** ಬಳ್ಳಾರಿ

## ಮಂತ್ರಾಕ್ಷತೆಯನ್ನು ಕೊಳ್ಳಿರೋ

ಮಂತ್ರಾಕ್ಷತೆಯನ್ನು ಹಂಚುವಲ್ಲಿನ ಉತ್ಸಾಹ, ಅದರಲ್ಲಿ ಒಳಗೊಂಡ ವೈಚಾರಿಕತೆ. ಸಮಾಜದ ಭಾವುಕತೆ, ಇಷ್ಟೆಲ್ಲಾ ಆದ ಮೇಲೆ ಮುಂದೇನು ಎನ್ನುವ ಭವಿಷ್ಯದ ಚಿಂತನೆಗಳು ಒಳಗೊಂಡ ಎರಡು ಲೇಖನಗಳು ಸುಂದರವಾಗಿವೆ. 'ಕಲ್ಲು ಸಕ್ಕರೆಯ ಸವಿ ಬಲ್ಲವರೆ ಬಲ್ಲರು' ಎನ್ನುವ ದಾಸರ ಕೀರ್ತನೆಯ ನೆನಪಾಗುವ ಸಾಮಾಜಿಕ ಕಳಕಳಿಯ ಅಪರೂಪದ ಕಾರ್ಯಕ್ರಮ.

– **ಪೂರ್ಣತೇಜ,** ಹಿರಿಯೂರು

## ಕಾನೂನಿನ ಒಳಹೊರಗುಗಳು

ಮುಜರಾಯಿ ದೇವಸ್ಥಾನಗಳ ಸ್ಥಿತಿಗತಿಗಳಾಗಲೀ ಜ್ಞಾನವಾಪಿ ಮಂದಿರದ ವಾಸ್ತವ ಮತ್ತು ಈತ್ತೀಚಿನ ಬೆಳವಣಿಗೆಗಳನ್ನು ನೀಡಿದ ಹಿಂದುವಾಣಿಯು ಹಿಂದುಗಳ ಅಂತರ್ವಾಣಿಯಾಗಿದೆ.

– **ಪುರುಷೋತ್ತಮರಾವ್,** ಶಿವಮೊಗ್ಗಾ

## ಕ್ರೈಸ್ತರ ಅಮಾನವೀಯತೆ

ಮತಾಂತರವಾಗುವವರೆಗೆ ಮಾತ್ರವೇ ಕ್ರೈಸ್ತರ ಕಾಳಜಿ ಎನ್ನುವುದನ್ನು ಲೇಖನವು ಸ್ಫುಟವಾಗಿ ವಿವರಿಸಿದೆ. ಹಿಂದುಗಳು ಜಾಗ್ರತರಾಗಿರುವುದೊಂದೇ ದಾರಿ.

– **ವೆಂಕಟನರಸಯ್ಯ,** ಹೊಸಕೋಟೆ

# ಕಡಿವಾಣವಿಲ್ಲದ ಸರ್ಕಾರ

‘ದೇವರ ಭಯವೇ ಜ್ಞಾನದ ಆರಂಭ’ವೆನ್ನುವ ನಾಣ್ಣುಡಿಯನ್ನು ಕೇಳುತ್ತಾ ಬಾಲಕರು ಬೆಳೆಯುತ್ತಿದ್ದರು. ಕೆಲವು ಶಬ್ದಗಳ ಮಥಿತಾರ್ಥಗಳು ಅವುಗಳೊಡನೆ ಇರುವ ಉಳಿದ ಶಬ್ದಗಳಿಂದ ವಿಶೇಷಾರ್ಥಗಳನ್ನು ನೀಡುತ್ತವೆ. ಇಲ್ಲಿರುವ ‘ಭಯ’ವು ‘ದೇವರ’ ಸಾಮಿಪ್ಯದಿಂದ ಗೌರವ ವಿನಯಗಳು ಒಳಗೊಂಡ ಅನುಭವವನ್ನು ನೀಡುತ್ತದೆ. ಹೀಗಾಗಿ ಮುಂದಿನ ‘ಜ್ಞಾನ’ವು ಕೂಡಾ ಉತ್ತಮ ವರ್ತನೆ, ಉತ್ತಮ ಶಿಕ್ಷಣ, ಉತ್ತಮ ಮನಸ್ಸು ಎನ್ನುವ ವ್ಯಕ್ತಿತ್ವದ ರೂಪವಾಗಿ ಕಾಣುತ್ತದೆ. ಆದರೆ ಇವೆಲ್ಲವೂ ಇಂದಿನ ರಾಜಕೀಯ ವಾತಾವರಣದಲ್ಲಿ ಅಸಂಬದ್ಧ ವಿವರಗಳಾಗುತ್ತವೆ. ತಮ್ಮ ಸ್ವಚ್ಛಂದತೆಗೆ ಪ್ರತಿಬಂಧಗಳಿವು ಎಂದುಕೊಳ್ಳುವ ರಾಜಕಾರಣಿಗಳೂ ಇಂತಹ ಸಾತ್ವಿಕ ಶೈಲಿಯ ನಿರೂಪಣೆಗಳೆಲ್ಲವನ್ನೂ ಕಣ್ಮರೆಯಾಗಿಸುವಲ್ಲಿ ಹದ್ದುಮೀರಿ ಪ್ರಯತ್ನಿಸುತ್ತಲೇ ಇರುವರು. ಇಂಥವರಿಗೆ ಕುವೆಂಪು ಅಥವಾ ಠಾಗೋರ್ ಎಲ್ಲರೂ ಉಪಯೋಗಿಸಿ ಎಸೆಯುವ ಕಸಕ್ಕೆ ಸಮಾನರು.

‘ಜ್ಞಾನ ದೇಗುಲವಿದು ಕೈಮುಗಿದು ಬಾ’ ಎನ್ನುವಲ್ಲಿನ ವಿನಯವನ್ನು ಬದಲಾಯಿಸಿ ‘ಧೈರ್ಯದಿಂದ ಪ್ರಶ್ನಿಸು’ ಎನ್ನುವಲ್ಲಿನ ‘ಧೈರ್ಯ’ವೂ ಮತ್ತು ‘ಪ್ರಶ್ನಿಸು’ ಎನ್ನುವುದೂ ಧಾರ್ಷ್ಟ್ಯವನ್ನೂ ಒರಟು ಹುಂಬತನವನ್ನೂ ಧ್ವನಿಸುತ್ತಾ ಬಾಲಕರು ಉಳಿದವರನ್ನು ನೋಡುವ, ನಡೆಸಿಕೊಳ್ಳುವ ಬಗೆಯನ್ನು ಬದಲಾಯಿಸುತ್ತವೆ. ನಾಲ್ಕು ಅಕ್ಷರಗಳನ್ನು ತೆಗೆದು ಬೇರೆ ನಾಲ್ಕು ಅಕ್ಷರಗಳನ್ನು ಸೇರಿಸಿದರೆ ಅದೇನು ಮಹಾ ಬದಲಾವಣೆಯಾಗುತ್ತದೆ ಎನ್ನುವ ಅಕ್ಷರ ದರಿದ್ರರು ಶಾಲೆಗಳಲ್ಲಿ ಬರೆದ ಮಹಾಕವಿ ಕುವೆಂಪುರವರ ವಾಕ್ಯಗಳನ್ನು ಅಳಿಸುವಾಗ ಜಗತ್ತಿಗೆ ಅವರು ಪ್ರದರ್ಶಿಸುವುದು ತಮ್ಮ ಭಂಡ ದರ್ಪವನ್ನು ಮಾತ್ರ. ಪರಂಪರೆಯಿಂದ ಬಳುವಳಿಯಾಗಿ ಬಂದ ಸಜ್ಜನ ಭಾವನೆಗಳೆಲ್ಲವನ್ನೂ ಅಳಿಸಬೇಕೆನ್ನುವ ಅವಸರದಲ್ಲಿ ಸರ್ಕಾರವು ಹೊರಟಿರುವುದು ನಮ್ಮ ಕಾಲದ ದೌರ್ಭಾಗ್ಯ. ‘ಸರ್ಕಾರದ ಕೆಲಸ ದೇವರ ಕೆಲಸವೆಂದು ಬರೆದ ವಿಧಾನಸೌಧದ, ವಿಧಾನ ಸಭೆಯ ಹೆಬ್ಬಾಗಿಲನ್ನು ಒದ್ದು ಒಡೆದು ಒಳನುಗ್ಗಿ ಭದ್ರತೆಗಾಗಿ ನಿಂತ ಪೋಲಿಸ್ ಅಧಿಕಾರಿಗಳನ್ನು ಅವಮಾನಿಸಿ ಮೇಜುಗಳನ್ನು ಹತ್ತಿ ತೊಡೆತಟ್ಟುತ್ತಾ ಒಬ್ಬರನೊಬ್ಬರು ಮೀರಿಸುವಂತಹ ತಮ್ಮ ಅನಾಗರಿಕ ವರ್ತನೆಯನ್ನು ಜಗತ್ತಿಗೆ ತೋರಿಸಿದ ಮುಖ್ಯಮಂತ್ರಿಗಳಿಂದ ಇದಕ್ಕಿಂತ ಬೇರೆ ಏನನ್ನು ನಿರೀಕ್ಷಿಸಬಹುದು?

ರಾಜಕೀಯ ಪಕ್ಷವೊಂದು ಜನರಲ್ಲಿ ರಾಕ್ಷಸ ವರ್ತನೆಯನ್ನು ನೆಲೆಯೂರಿಸಿಬಿಟ್ಟರೇನೇ ತನಗೆ ಮುಂದಿನ ದಾರಿ ಪ್ರಶಸ್ತವಾಗಬಲ್ಲದು ಎಂದುಕೊಂಡೇ ತನ್ನ ರಾಜಕೀಯ ನಿಲುವನ್ನು ರೂಪಿಸುತ್ತದೆ. ಮೊದಲಬಾರಿಗೆ ದೇಶದ ರಾಷ್ಟ್ರವಾದಿಗಳ ಪಕ್ಷವೊಂದು ಕೇಂದ್ರ ಸರ್ಕಾರವನ್ನು ರಚಿಸಿಕೊಂಡಿತ್ತು. ಆಗ ಕೇಂದ್ರಸರ್ಕಾರದ ಶಿಕ್ಷಣ ಇಲಾಖೆಯ ಕಾರ್ಯಕ್ರಮವೊಂದನ್ನು ದೆಹಲಿಯಲ್ಲಿ ಆಯೋಜಿಸಲಾಗಿದ್ದಿತು. ಅದು ದೇಶದ ಎಲ್ಲಾ ರಾಜ್ಯಗಳ ಶಿಕ್ಷಣ ಸಚಿವರು ಭಾಗವಹಿಸಿದ ಕಾರ್ಯಕ್ರಮ. ಶಿಕ್ಷಣ ಇಲಾಖೆಯ ಕಾರ್ಯಕ್ರಮದಲ್ಲಿ ಸಹಜವಾಗಿಯೇ ವಿದ್ಯಾಧಿದೇವತೆ ಸರಸ್ವತಿಯನ್ನು ಸ್ತುತಿಸುವ ಗೀತೆಯನ್ನು ಹಾಡಲು ಸುಪ್ರಸಿದ್ಧ ಗಾಯಕಿಯೊಬ್ಬರು ವೇದಿಕೆಗೆ ಬಂದರು. ಆಗ ಅನಿರೀಕ್ಷಿತವಾದ ಪ್ರಸಂಗವೊಂದು ಘಟಿಸಿತು. ಭಾರತದಂತಹ ‘ಸೆಕ್ಯುಲರ್’ ದೇಶದಲ್ಲಿ ಸರಸ್ಪತಿ ವಂದನೆಯು ಮಹಾಪರಾಧವಾಗಿದ್ದು,

ಅದನ್ನು ವಿರೋಧಿಸಲು ಸಭಾತ್ಯಾಗ ಮಾಡುವೆವೆಂದು ಕೆಲವುರಾಜ್ಯಗಳ ಶಿಕ್ಷಣ ಮಂತ್ರಿಗಳು ಸಭಾತ್ಯಾಗವನ್ನು ಮಾಡಿದರು. ಆಶ್ಚರ್ಯವೆಂದರೆ ಅವರಲ್ಲಿ ಕರ್ನಾಟಕದ ಶಿಕ್ಷಣ ಮಂತ್ರಿಗಳೂ ಒಬ್ಬರಾಗಿದ್ದರು. ಅದರಲ್ಲಿ ಇನ್ನೂ ವಿಶೇಷವೆಂದರೆ ಅವರು ಶಿಕ್ಷಣದ ದೇವತೆ ಶಾರದೆಯ ಕ್ಷೇತ್ರವಾದ ಶೃಂಗೇರಿಯಿಂದ ಚುನಾಯಿತರಾಗಿದ್ದವರು. ಪಕ್ಕದ ಆಂಧ್ರಪ್ರದೇಶದ ಮಂತ್ರಿಗಳೂ ಸಭಾತ್ಯಾಗ ಮಾಡಿದ ಮಹಾತ್ಯಾಗಿಗಳಲ್ಲಿ ಒಬ್ಬರು. ಆಕೆಯ ಹೆಸರು ಪ್ರತಿಭಾ ಭಾರತಿ. ನಮಗೆಲ್ಲ ತಿಳಿದಿರುವಂತೆ ಭಾರತಿ ಎಂದರೆ ಸರಸ್ವತಿಯೆ. ಹೀಗೆ ಯಾವುದೇ ಮುಜುಗರವಿಲ್ಲದೆ ದುಷ್ಟತನವನ್ನು ಮಾತ್ರ ಪ್ರದರ್ಶಿಸುವ ಪರಂಪರೆಯು ಈಗ ಸ್ಥಾಪಿತವಾಗುತ್ತಿದೆ.


ಪಾರಂಪರಿಕವಾದ ಹಿಂದು ಶ್ರದ್ಧೆಯ ವಿಚಾರಗಳನ್ನು ಒದ್ದು ಬಿಸಾಡುವ ಉದ್ಧಟತನವು ಎಳೆಯ ಮನಸ್ಸಿನಲ್ಲಿ ಬೇರೂರಬೇಕೆಂಬುದು ಸೆಕ್ಯುಲರ್ ಜನರ ಉದ್ದೇಶವಾಗಿದೆ. ಅದಕ್ಕಾಗಿ ಮೃದುಭಾವನೆಗಳನ್ನು ಪಡಿಮೂಡಿಸುವ ಹಬ್ಬಗಳ ಮೇಲೂ ಈ ರಾಕ್ಷಸ ಸರ್ಕಾರದ ಕಣ್ಣು ಬಿದ್ದಿತು. ವಿದ್ಯಾರ್ಥಿನಿಲಯಗಳಲ್ಲಿ ಯಾವ ಹಬ್ಬಗಳನ್ನೂ ಆಚರಿಸಬಾರದೆನ್ನುವ ಅಪ್ಪಣೆಯ ಮೂಲಕ ಸಂಸ್ಕೃತಿಯ ಸೊಲ್ಲು ಕೂಡಾ ವಿದ್ಯಾರ್ಥಿಗಳ ಕಿವಿಗೆ ಬೀಳಬಾರದು ಚಿತ್ರಗಳ್ಯಾವುವೂ ಕಣ್ಣಿಗೆ ಕಾಣಬಾರದು ಎನ್ನುವ ಹಿರಣ್ಯಕಶಿಪುತನದ ಹೆಜ್ಜೆಗಳಿಂದು ಕಾಣತೊಡಗುತ್ತಿವೆ.

ನಾಡಗೀತೆಯನ್ನು ಹಂತಹಂತವಾಗಿ ನಿಲ್ಲಿಸುವ ಪ್ರಯತ್ನವೂ ಈಗ ಪ್ರಾರಂಭಗೊಂಡಿತು. ವಿದ್ಯಾರ್ಥಿಗಳಿಗೆ ದೇಶದ ಗೊಡವೆಯೂ ಬೇಡ. ದೇಶಕ್ಕಾಗಿ ದುಡಿದವರ ನೆನಪೂ ಬರದಿರಲಿ ಎಂಬುದು ಇದರ ಹಿಂದಿನ ಹುನ್ನಾರ. ನಾನಕ ರಾಮಾನುಜ ಚೈತನ್ಯರ ಹೆಸರುಗಳನ್ನು ಉಚ್ಚರಿಸಬಾರದು ಎನ್ನುವ ಸುತ್ತೋಲೆಗೆ ವ್ಯಾಪಕ ವಿರೋಧವು ವ್ಯಕ್ತವಾದಾಗ ಕಣ್ತಪ್ಪಿನಿಂದ ಆದ ತಪ್ಪು ಎಂದು ಸರ್ಕಾರದ ಮಂತ್ರಿ ಹೇಳಿದರು. ಕಛೇರಿಯಲ್ಲಿ ಕಣ್ತಪ್ಪಿನಿಂದ ಹೊಸ ನಿಯಮವೊಂದು ರೂಪುಗೊಂಡು ಬರುವುದು ಸಾಧ್ಯವಿಲ್ಲದ ಮಾತು ತಾನೇ?

ವಿದ್ಯಾರ್ಥಿಗಳನ್ನು ದೇಶದ ಪರಂಪರೆಯಿಂದ ದೂರ ಸರಿಸುವ ಪ್ರಯತ್ನದಲ್ಲೀಗ ಸರ್ಕಾರದ ಮಂತ್ರಿಗಳು ಮತ್ತು ಅಧಿಕಾರಿಗಳು ಸಕ್ರಿಯವಾಗಿ ತೊಡಗಿರುವರು. ಎಲ್ಲವನ್ನು ಎಲ್ಲರನ್ನೂ ಲಘುವಾಗಿ ಪರಿಗಣಿಸುವ ಅಹಂಕಾರವೀಗ ಮೇರೆ ಮೀರುತ್ತಿದೆ. ತನಗೆ ಪಾಠಕಲಿಸಿದ ಗುರುಗಳಿಂದ ಕಾಲು ಮುಟ್ಟಿಸಿಕೊಂಡು ಗೌರವವನ್ನು ಸ್ವೀಕರಿಸುವ ದೈತ್ಯತ್ವವು ಅನಾವರಣಗೊಳ್ಳುತ್ತಿದೆ. ಹಿರಿಯ ವಿದ್ವಾಂಸರ ನಿಯೋಗವೊಂದು ಕನ್ನಡದ ಉಳಿವಿನ ಬಗ್ಗೆ ಮಾತನಾಡಲು ಬಂದರೆ ಅವರೆಲ್ಲರನ್ನೂ ನಿಲ್ಲಿಸಿ ತಾನು ಕಾಲು ನೀಡಿ ಕುಳಿತ ಭಂಗಿಯನ್ನು ನೋಡಲೆಂದೇ ಆ ಚಿತ್ರವನ್ನು ಮಾಧ್ಯಮಗಳಿಗೆ ನೀಡುವ ಅಹಂಭಾವ ಪ್ರವೃತ್ತಿ ಹೆಚ್ಚುತ್ತಿದೆ. ಮುಂದಿನ ತಲೆಮಾರಿಗೆ ಅನುಸರಿಸಲು ಸದ್ವರ್ತನೆಗಳೇ ಕಾಣುತ್ತಿಲ್ಲವೆಂಬುದೇ ಖೇದಕರವಾದುದು.

ಇಂತಹ ದರ್ಪದುರಭಿಮಾನಗಳು ಹಿಂದೆಯೂ ಇದ್ದವು. ನಹುಷನು ಸಪ್ತರ್ಷಿಗಳಿಗೆ ತಾನು ಕುಳಿತ ಪಲ್ಲಕ್ಕಿಯನ್ನು ಹೊತ್ತುನಡೆಯಲು ಆಜ್ಞಾಪಿಸಿದನು. ಅಷ್ಟದಿಕ್ಪಾಲಕರನ್ನು ರಾವಣನು ತನ್ನ ಲಂಕೆಯನ್ನು ಕಾಯಲು ನೇಮಿಸಿದನಂತೆ. ಆದರೆ ನಂತರ ಆದುದೇನು ಎನ್ನುವುದು ಎಲ್ಲರಿಗೂ ಗೊತ್ತು. ಕಂಭದಿಂದಲೂ ನರಸಿಂಹನು ಅವತರಿಸುವುದು ನಡೆದೇ ನಡೆಯುತ್ತದೆ. ಆ ಕಂಭವೆಂದರೆ ಬರಲಿರುವ ಚುನಾವಣೆಯೇ?

# ಪೂಜ್ಯ ಗುರೂಜಿ,
## ನಿಮಗೆ ಶತಶತ ಪ್ರಣಾಮಗಳು!



ಗುರೂಜಿ ಎಂದರೆ ಮಾಧವ ಸದಾಶಿವರಾವ್ ಗೋಳವಲಕರ
ಅದೇ ನೀಳ ಕಾಂತಿಯುಕ್ತ ಗೌರಾಂಗ ಸಂತ
ದೇಶದ ಉದ್ದಗಲಕ್ಕೂ ಪ್ರವಹಿಸಿದ ಚೈತನ್ಯ ಸರಿತ,

ಗುರೂಜಿ ಅವರು ಬೆಳ್ಳಂಬೆಳಗಿನ ಬೆಳಕು,
ಆಕಾಶದೆಲ್ಲೆಡೆ ಹೊನ್ನ ನೇಸರ ಮೂಡಿಸಿದ ಮೋಡಿ,
ಕತ್ತಲು ಕಳೆದು ಬೀರಿದ ಜಾಗೃತ ಹೂಗಳ ಘಮಘಮ.

ಗುರೂಜಿ ಅದೊಂದು ಬೀಸು ಮಿಂಚಿನ ನಡಿಗೆ,
ಅಡಿಗಡಿಗೂ ತೋರಿದ ತ್ರಿವಿಕ್ರಮ ಭಾವ,
ಬದುಕು-ಗೆಲುವುಗಳನ್ನು ಒಂದುಮಾಡಿದ ದಿಗ್ವಿಜಯ!

ಗುರೂಜಿ ಎಂದರೆ ಅರ್ಥವೇ ಅರಸಿ ಬರುವ ಮಾತು,
ನುಡಿನುಡಿಗಳು ಹೆಣೆದು ಆಯಿತು ಮುತ್ತಿನಹಾರ,
ಜಗವೇ ಅಹುದಹುದೆಂದು ತಲೆದೂಗಿದ ಗುರುತ್ವ

ಗುರೂಜಿ - ಅವರು ಶರದದ ಬೆಳದಿಂಗಳು,
ಶುಭ್ರ ಸ್ವಚ್ಛ ಬೆಳ್ಳನೆ ಬೆಳಕಿನ ಹೊಳೆ,
ತರುಣರ ಆದರ್ಶಗಳ ಚಕೋರಂಗೆ ಚಂದ್ರಮ,

ಗುರೂಜಿ ಎಂದರೆ ಅಲ್ಲೊಂದು ನಿರ್ಮಲ ನಗು
ನಿಷ್ಕಲ್ಮಶ ಮಂದಾಕಿನಿಯಂತೆ ಅಕಳಂಕ
ಹಿಂದು ಜನಮಾನಸವನ್ನು ಗೆದ್ದ ಬಗೆ-ಗಂಗೋತ್ರಿಯ ಗಂಗೆ,

ಗುರೂಜಿ ಎಂದರೆ ಅದೊಂದು ದಿವ್ಯ ಸಂಗೀತ,
ಹಿಂದುತ್ವದ ಬಂಧುತ್ವದ ಸಿಂಧುತ್ವದ ರಾಗಮಾಲಿಕೆ,
ಶುದ್ಧ ಸುಬದ್ಧ ಭಾರತೀಯ ಅಭಂಗ ನಾದತರಂಗ

– ಟಿ.ಎ.ಪಿ.ಶೆಣೈ




# ರಾಷ್ಟ್ರಋಷಿ–ಶ್ರೀಗುರೂಜಿ

## ಅಸಮಾನ ವ್ಯಕ್ತಿತ್ವ, ಅನುಪಮ ಮಾರ್ಗದರ್ಶನ

– ಟಿ.ಎ.ಪಿ.ಶೆಣೈ

ಪೂಜ್ಯ ಶ್ರೀಗುರೂಜಿಯವರು ತಮ್ಮ ಕೈಬರಹದಲ್ಲೇ ಬರೆಯುತ್ತಿದ್ದ ಅಸಂಖ್ಯ ಪತ್ರಗಳಲ್ಲಿ ಒಂದು ಕಡೆಯೂ ಚಿತ್ತು ಇರುತ್ತಿರಲಿಲ್ಲ, ಒಂದು ಅಕ್ಷರಕ್ಕೂ ಕಾಟು ಹೊಡೆಯುತ್ತಿರಲಿಲ್ಲ ಎನ್ನುವ ಮಾತನ್ನು ಕೇಳಿದ್ದೇವೆ. ಅವರು ಕುಡಿಯುತ್ತಿದ್ದ ಚಹಾದ ಲೋಟದಿಂದ ಎಂದೂ ತೊಟ್ಟನ್ನು ಕೂಡಾ ತಮ್ಮ ಉಡುಪಿನ ಮೇಲೆ ತುಳುಕಿಸಲಿಲ್ಲ ಎನ್ನುವ ಇನ್ನೊಂದು ವಿವರಣೆಯೂ ಇದೆ. ಇದು ಅವರ ದಿನಚರಿಯ ವರ್ಣನೆಯಷ್ಟೆ ಆಗಿರಲು ಸಾಧ್ಯವಿಲ್ಲ. ಹಾಗೇನಾದರೂ ಅಂದುಕೊಂಡರೆ ಅದು ಮಹಾತ್ಮರ ಜೀವನವನ್ನು ವೈಭವೀಕರಿಸುವ ರಭಸ ಎಂದು ಭಾವಿಸಬೇಕಾದೀತು. ಆದರೆ ಇದು ಶ್ರೀಗುರೂಜಿಯವರ ಜೀವನದ ವ್ಯಾಖ್ಯಾನವಾಗಬಹುದೆನಿಸುತ್ತದೆ. ಶ್ರೀಗುರೂಜಿಯವರು ಎಂದೂ ಕೂಡ ತಾನು ನುಡಿದುದನ್ನು ಅಲ್ಲಗಳೆಯುವ ಪ್ರಸಂಗವನ್ನು ತಂದುಕೊಳ್ಳಲಿಲ್ಲ. ತಮ್ಮ ಅಚಾತುರ್ಯದಿಂದ ತಮ್ಮ ಶುಭ್ರಜೀವನಕ್ಕೆಂದೂ ಕಳಂಕವನ್ನು ತರಲಿಲ್ಲ – ಎನ್ನುವುದಂತೂ ನಾವು ಅವರ ಸಮಕಾಲೀನರಾಗಿ ಕಂಡು ಅನುಭವಿಸಿದ ನಿಚ್ಚಳ ಸತ್ಯ.

ಪೂಜ್ಯ ಪ್ರಭುದತ್ತ ಬ್ರಹ್ಮಚಾರಿಯವರ ಆಶ್ರಮದಲ್ಲಿ ಅವರ ಭಾಗವತ ಕಥಾನಕವನ್ನು ಕೇಳುತ್ತ ಆನಂದ ಭಾಷ್ಪವನ್ನು ಸುರಿಸುತ್ತಿದ್ದ ಭಾವುಕ ಶ್ರೀಗುರೂಜಿಯವರು; “ಸಂಘವನ್ನು ತುಳಿದುಹಾಕುತ್ತೇನೆ” ಎಂದ ಪ್ರಧಾನಿ ಜವಾಹರಲಾಲ್ ನೆಹರುರವರ ದರ್ಪದ ಮಾತಿಗೆ, “ಅಂತಹ ಮನೋಭಾವನೆಯನ್ನೇ ನಾವು ತುಳಿಯುತ್ತೇವೆ” ಎಂದು ಕೆಚ್ಚಿನ



*ವಿಶ್ವ ಹಿಂದು ಪರಿಷದ್ ಪ್ರಥಮ ಕೇಂದ್ರೀಯ ಅಧ್ಯಕ್ಷರಾದ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಮತ್ತು ಅವರ ಎಡ ಪಕ್ಕದಲ್ಲಿ ಶ್ರೀ ಗುರೂಜಿ ಮತ್ತು ಪರಿಷದ್ ಕಾರ್ಯಕರ್ತರು.*

ಉತ್ತರ ನೀಡಬಲ್ಲರು. ಪ್ರಧಾನಿ ಇಂದಿರಾಗಾಂಧಿಯವರು ತಿರುಪತಿ ವೆಂಕಟೇಶ್ವರನ ದರ್ಶನಕ್ಕೆ ಹೋದಾಗ, ಅದನ್ನು ನಾಟಕವೆಂದು ಗೇಲಿ ಮಾಡಿದ ತಮ್ಮ ಜೊತೆಗಾರರಿಗೆ ಅಧಿಕಾರ ಅಂತಸ್ತುಗಳ ಮೋಹದಿಂದ ಮೇಲೆದ್ದ ಘಳಿಗೆಗಳಲ್ಲಿ ಮನುಷ್ಯನಿಗೆ ಭಗವಂತನ ಸಾನ್ನಿಧ್ಯದ ಅಗತ್ಯವಿದೆ. ಅದಕ್ಕೆ ಟೀಕೆ ಸಲ್ಲದು" – ಎಂದವರು, ಪೂಜ್ಯ ಶ್ರೀಗುರೂಜಿಯವರು. "ಈ ಹೊತ್ತಿನಲ್ಲಿ ದೇಶಕ್ಕೆ ನಿಮ್ಮ ಮಾರ್ಗದರ್ಶನ ಬೇಕಾಗಿದೆ" ಎಂದು ಪ್ರಧಾನಿ ಲಾಲಬಹಾದುರ್ ಶಾಸ್ತ್ರಿಯವರು ಕೇಳಿಕೊಂಡೊಡನೆ ದೆಹಲಿಗೆ ಧಾವಿಸಿ ಅಲ್ಲಿ ಯುದ್ಧಸಿದ್ಧತೆಯ ಸಭೆಯಲ್ಲಿ ಅತಿ ಸಾಮಯಿಕವಾದ ಸಲಹೆಗಳನ್ನು ನೀಡಿದವರು ಶ್ರೀಗುರೂಜಿ. ಹೀಗೆ ದೇಶವು ಕಂಡ ಗೋಳ್ವಲಕರ್ ಮತ್ತು ನಾವು ಅರ್ಥೈಸಿಕೊಂಡ ಪೂಜ್ಯ ಶ್ರೀಗುರೂಜಿಯವರು ವಸ್ತುಸ್ಥಿತಿಗೆ ತತ್ತ್ವದ ಸಾಂಗತ್ಯವನ್ನು ಸಾಧಿಸಿದ ಸಂಘದ ದ್ವಿತೀಯ ಸರಸಂಘಚಾಲಕರು. "ಡಾಕ್ಟರ್‌ಜೀಯವರ ಬಲಗೈ ನಾನೆಂದು ನೀವು ಹೇಳುವುದಾದರೆ, ಶ್ರೀಗುರೂಜಿಯವರು ಅವರ ಹೃದಯವಾಗಿದ್ದರು ಎಂದು ನಾನು ಹೇಳುವೆ" ಎಂದಿದ್ದರು, ಡಾಕ್ಟರ್‌ಜೀಯವರ ಜೊತೆಯಲ್ಲೇ ಹಿರಿಯ ಕಾರ್ಯಕರ್ತರಾಗಿದ್ದು ಶ್ರೀಗುರೂಜಿಯವರನ್ನು ಹತ್ತಿರದಿಂದಲೇ ಕಂಡ ಮಾನ್ಯ ಅಪ್ಪಾಜಿ ಜೋಶಿಯವರು. ಡಾಕ್ಟರ್‌ಜೀಯವರ ಮುಂದಿನ ಸರಸಂಘಚಾಲಕರಾಗಿ ಅಪ್ಪಾಜಿ ಜೋಶಿಯವರು ಇರಬಹುದಿತ್ತು ಎಂದು ಅಪೇಕ್ಷಿಸಿದವರ ಭಾವನೆಯನ್ನು ಗೌರವಿಸುತ್ತ ಡಾಕ್ಟರ್‌ಜೀಯವರ ನಿರ್ಧಾರವನ್ನು ಪುಷ್ಟೀಕರಿಸಿದ ಆ ಹಿರಿಯರ ಮಾತಿದು. ಹಾಗಿದ್ದುದರಿಂದಲೇ ಶ್ರೀಗುರೂಜಿಯವರು ಸಂಘಸಂಸ್ಥಾಪಕರ ಮನಸ್ಸಿನ ತುಡಿತವನ್ನೇ ಉತ್ತರಮುಖಿಯನ್ನಾಗಿಸಿ ಹಿಂದು ಸಂಘಟನೆಯ ರೂಪರೇಷೆಗಳನ್ನು ಸ್ಪಷ್ಟಪಡಿಸಿದರು.

## ನಿರ್ಮಮತೆ

"ನಮ್ಮ ಮಕ್ಕಳೆಲ್ಲ ಮಡಿದು ಉಳಿದವನು ಮಧು ಮಾತ್ರ ಎಂದು ನನಗೆ ಅನಿಸಲೇ ಇಲ್ಲ. ಅವರ ಬದಲು ಈಗ ಸಾವಿರಾರು ಸ್ವಯಂಸೇವಕರ ರೂಪದಲ್ಲಿ ಮಕ್ಕಳು ಸಿಕ್ಕಿದರು" ಎಂದು ತನ್ನನ್ನು ತಾನೇ ಸಂತೈಸಿಕೊಂಡವರು ಶ್ರೀಗುರೂಜಿಯವರ ತಾಯಿ ಲಕ್ಷ್ಮೀಬಾಯಿ. ಒಡಹುಟ್ಟಿದ ನಾಲ್ವರು ಗಂಡುಮಕ್ಕಳಲ್ಲಿ ಉಳಿದ ಮಾಧವನನ್ನು ತಾಯಿ ಕರೆಯುತ್ತಿದ್ದುದು 'ಮಧು ಎಂದು. ಒಂದು ದಿನ ಈ ಬಾಲಕನು ಮನೆಯ ಅಂಗಳದಲ್ಲಿ ಮೊಳೆಯೊಂದನ್ನು ನೆಲದಲ್ಲಿ ನೆಡಲು ಹೊಡೆಯುತ್ತಿದ್ದಾಗ "ಭೂಮಿತಾಯಿ ಕಣೋ, ಆಕೆಗೆ ನೋವಾಗುತ್ತೆ' ಎಂದು ಹೆತ್ತ ತಾಯಿ ಹೇಳಿದ ಮಾತನ್ನು ಮನಸ್ಸಿನಾಳದಲ್ಲಿ ನೆಟ್ಟುಕೊಂಡ ಮಧು, ಶ್ರೀಗುರೂಜಿ ಗೋಳ್ವಲಕರರಾಗಿ ಬದುಕಿದ ಜೀವನದ ಕೊನೆಯಲ್ಲಿ ಉಸುರಿದ ಮಾತು ಸಂಘ ಪ್ರಾರ್ಥನೆಯ ಕೊನೆಯ ಸಾಲಾದ "ಭಾರತ್ ಮಾತಾ ಕೀ ಜೈ". ಎದೆಯಾಳದ ಭಾವನೆಯನ್ನು ತರ್ಕಶುದ್ಧಿಯ ಬೆಳಕಿನಲ್ಲಿ ಕಂಡುಕೊಂಡು ಗುರಿಯನ್ನು ಗುರುತಿಸಿ ನಡೆದು ಮೇಲ್ಪಂಕ್ತಿ ಹಾಕುವುದು ಸಾಧ್ಯವೇ ಎಂದರೆ, ಅದನ್ನು ಸಾಧ್ಯವಾಗಿಸಿ ತೋರಿಸಿದ ಜೀವನ ಪೂಜ್ಯ ಶ್ರೀಗುರೂಜಿಯವರದ್ದು. ತಾಯಿಯ ಶಾಶ್ವತ ಅಗಲಿಕೆಯ ನೋವಿನ ಸಮಯದಲ್ಲಿ ಶ್ರೀಗುರೂಜಿಯವರು ಹೇಳಿದ ಮಾತು: "ನನ್ನ ತಾಯಿ ಮತ್ತು ಈ ನಮ್ಮ ಈಶ್ವರೀಯ ಕಾರ್ಯ – ಇವೆರಡನ್ನು ಬಿಟ್ಟರೆ ಜಗತ್ತಿನಲ್ಲಿ ನನಗೆ ಬೇರಾವ ಸಂಬಂಧಿಗಳಿಲ್ಲ. ಈಗ ನಮ್ಮ ವಿಶಾಲ ಪರಿವಾರದ ಆತ್ಮೀಯತೆಯೊಂದೇ ಮನಸ್ಸಿಗೆ ಶಾಂತಿ ನೀಡುವಂತಹದಾಗಿದೆ" ಎಂದು. ತಾಯಿಗೆ ಸಂಘದ ವಿಶಾಲ ಪರಿವಾರವು ತನ್ನ ಮಕ್ಕಳಂತೆ ಕಂಡರೆ, ಮಗನಿಗೆ ಅದು ತನ್ನ ತಾಯಿಯ ಅನನ್ಯ ವಾತ್ಸಲ್ಯವಾಗಿ ಕಂಡಿತು.

ಶ್ರೀಗುರೂಜಿಯವರನ್ನು ಸದಾ ಸೆಳೆಯುತ್ತಿದ್ದುದು ಹಿಮಾಲಯದ ಭವ್ಯ ನಿಲವು ಮತ್ತು ಅಲ್ಲಿನ ನೀರವತೆ. ಶ್ರೀಗುರೂಜಿಯವರಿಗೆ ದೀಕ್ಷೆ ನೀಡಿದ ಸ್ವಾಮಿ ಅಖಂಡಾನಂದರು ತಮ್ಮ ಶಿಷ್ಯ ಅಮಿತಾಭರಿಗೆ ಪದೇ ಪದೇ 'ಗೋವಾಲ್ಕರನನ್ನು [ಅವರು ಹೀಗೆಯೇ ಕರೆಯುತ್ತಿದ್ದುದು] ಹಿಮಾಲಯದ ಆಕರ್ಷಣೆಯಿಂದ ತಪ್ಪಿಸು. ಅವನಿಗೆ ಬೇಕಾದುದು ಹಿಮಾಲಯದ ಏಕಾಂತವಲ್ಲ, ಜನಸ್ವರೂಪಿ ಭಗವಂತನ ಸಾನ್ನಿಧ್ಯ' ಎಂದು ಎಚ್ಚರಿಸುತ್ತಿದ್ದರು. ತಮ್ಮ ತಾಯಿಯ ವಿಯೋಗದ ದುಃಖದಲ್ಲಿ ಶ್ರೀಗುರೂಜಿ ಬಯಸಿದುದು ಹಿಮಾಲಯವನ್ನು. ಆಗ ಅಮಿತಾಭರು "ಸಂಘಕಾರ್ಯಾಲಯವೇ ಹಿಮಾಲಯ" ಎಂದು ಸಂತೈಸಿದ್ದರು. ಕಂಚಿಯ ಪರಮಾಚಾರ್ಯರು ಶ್ರೀಗುರೂಜಿಯವರಿಗೆ ಪತ್ರ ಬರೆದು "ನಿಮ್ಮ ಅಸ್ಥಿಚರ್ಮದ ತಾಯಿ ಅಗಲಿ ಹೋದರು. ಅನಾದಿಯಿಂದ ಅನಂತದವರೆಗೆ ಜನ್ಮಧಾತ್ರಿಯ ಸೇವೆಯನ್ನು ಕೈಗೊಂಡ ನಿಮಗೆ ಮಾತೃವಿಯೋಗ ಆಗುವುದಾದರೂ ಹೇಗೆ ?" ಎಂದು ಸಾಂತ್ವನ ನೀಡಿದರು.

ಬ್ರಾಹ್ಮಿಮುಹೂರ್ತದ ಸಮಯದಲ್ಲೆದ್ದು ಲಕ್ಷ್ಮೀಬಾಯಿಯವರು ಮನೆಗೆಲಸ ಮಾಡುತ್ತಿದ್ದಾಗ ತಮ್ಮ ಮಧುರಕಂಠದಲ್ಲಿ ಹಾಡುತ್ತಿದ್ದ ಸ್ತೋತ್ರಗಳು ಮತ್ತು ಅಭಂಗಗಳ ಸಾರಸರ್ವಸ್ವವನ್ನು ತಮ್ಮ ಬಾಲ್ಯದಲ್ಲೇ ಶ್ರೀ ಗುರೂಜಿಯವರು ಗ್ರಹಿಸಿದ್ದರು. ಅವನ್ನು ಮುಂದೆ ತಮ್ಮ ಚಿಂತನದ ಕುಲುಮೆಯಲ್ಲಿ ಕಾಸಿ ಸೋಸಿ ಜೀವನದ ಗುರಿಯಾಗಬಲ್ಲ ಅಪರಂಜಿ ತತ್ತ್ವವನ್ನಾಗಿಸಿದರು. ತಮ್ಮ ವಿರಕ್ತ ಜೀವನದ ವೇದಿಕೆಯನ್ನಾಗಿಸಿದರು. ಸಂಕ್ರಾಂತಿಯ ದಿನದಂದು ಸ್ವಾಮಿ ಅಖಂಡಾನಂದರು ಅವರಿಗೆ ದೀಕ್ಷೆಯನ್ನು ನೀಡಿದ ನಂತರ ಶ್ರೀಗುರೂಜಿ ತಮ್ಮ ಮಿತ್ರನಿಗೆ ಒಂದು ಪತ್ರವನ್ನು ಬರೆದರು: "ಸಂನ್ಯಾಸದ ಮನಃಸ್ಥಿತಿಯನ್ನು ನನ್ನ ಶರೀರದ ಕಣಕಣಗಳಲ್ಲಿ ಅನುಭವಿಸಲು ಪ್ರಯತ್ನಿಸುವೆ" ಎಂದು. ಆದುದರಿಂದ ತಾಯಿಯ ಮೇಲಿನ ಅತೀವ ಪ್ರೀತಿಯನ್ನು ಬೌದ್ಧಿಕಸ್ತರದಲ್ಲಿ ಮಾತೃಭೂಮಿಯನ್ನು ತಾಯಿಯಂತೆ ಪ್ರೀತಿಸುವ ಪ್ರೇರೇಪಿಸುವ ಮಟ್ಟಕ್ಕೆ ಏರಿಸಿಕೊಂಡರು. ತಾಯಿಯ ಅನಾರೋಗ್ಯದ ಕಾಲದಲ್ಲೂ ಶ್ರೀ ಗುರೂಜಿ ತಮ್ಮ ಪ್ರವಾಸವನ್ನು ಬದಲಾಯಿಸಲಿಲ್ಲ.

## ಅವಧೂತ ನಿಲವು

1942ರ ಯುಗಾದಿಯಂದು ಶ್ರೀಗುರೂಜಿಯವರು ಸ್ವಯಂಸೇವಕರಿಗೆ ನೀಡಿದ ಕರೆ ಸದಾ ಸ್ಮರಿಸುವಂತಹದು. "ದೇಶಕ್ಕೆ ಅಪಾಯಕಾರಿಯಾಗಿರುವ ದಿನಗಳಲ್ಲಿ ನಾವಿರುವುದೇ ನಮ್ಮ ಅದೃಷ್ಟ. ಈಗ ನಿದ್ದೆ ಮಾಡಿದವರಂತಹ ದುರದೃಷ್ಟರು ಬೇರೆ ಯಾರೂ ಇರಲಿಕ್ಕಿಲ್ಲ. ಚರಿತ್ರೆಯ ಬೀಸಿನ ಶತಶತಮಾನಗಳಲ್ಲಿ ಯಾವಾಗಲೋ ಒಮ್ಮೆ ಒದಗುವ ಕ್ಷಣಗಳಿವು. ನಿಮ್ಮಲ್ಲಿರುವ ಅತ್ಯುತ್ತಮ ಕೊಡುಗೆಯು ದೇಶಕ್ಕೆ ಈಗ ಬೇಕು. ನಿಮ್ಮ ಸ್ವಂತವೆನ್ನುವುದನ್ನೆಲ್ಲಾ ಪಕ್ಕಕ್ಕಿಟ್ಟು ಹಿಂದು ಸಮಾಜಕ್ಕಾಗಿ ಒಂದು ವರ್ಷಕಾಲವನ್ನು ನೀಡಿ ಬನ್ನಿ" – ಎಂದಾಕ್ಷಣ ನೂರಾರು ತರುಣರು 'ಪ್ರಚಾರಕ'ರಾಗಿ ಹೊರಟರು. ತಮ್ಮ ಉದ್ಯೋಗ, ಮದುವೆ, ಪ್ರೀತಿಯ ಸಂಬಂಧಗಳನ್ನೆಲ್ಲಾ ಮರೆತೇಬಿಟ್ಟರು. ತಮ್ಮ ಮಕ್ಕಳು 'ಪ್ರಚಾರಕ'ರಾಗಿ ಮನೆ ಬಿಟ್ಟು ಹೊರಟಾಗ ತಾಯಂದಿರ ಭಾವನೆಗಳು ಕಲಕುವುದು ಸಹಜವೇ. ಕೆಲವರು ಶ್ರೀಗುರೂಜಿಯವರ ಬಳಿಯೇ ಬಂದು ಅತ್ತುದ್ದೂ ಇತ್ತು. ಅಂತಹ ಸಂದರ್ಭಗಳಲ್ಲಿ ಶ್ರೀಗುರೂಜಿಯವರು ತಮ್ಮ ಹೃದಯದ ಮೃದುಲ ಭಾವನೆಗಳನ್ನು ಅದುಮಿಟ್ಟುಕೊಂಡ ಸಂಯಮವೂ ಅಪೂರ್ವವೇ. ಕಾರ್ಗಿಲ್ ಯುದ್ಧಕಾಲದಲ್ಲಿ ಹುತಾತ್ಮರಾದ ತಮ್ಮ ಸೈನಿಕ ಮಕ್ಕಳ ಶವಪೆಟ್ಟಿಗೆಯನ್ನು ಎದುರುಗೊಳ್ಳುವಾಗ ಆ ತಂದೆತಾಯಂದಿರು ನಡೆದುಕೊಂಡ

ರೀತಿ ನೆನಪಾಗುತ್ತದೆ. ಕಪೋಲಗಳಲ್ಲಿ ಹರಿಯುವ ಕಣ್ಣೀರಿನೊಂದಿಗೆ ಆ ಶವಪೆಟ್ಟಿಗೆಗೆ ಸೆಲ್ಯೂಟ್ ಹೊಡೆಯುವ ಆ ಧೀರೋದಾತ್ತ ದೃಶ್ಯ ಕಣ್ಣ ಮುಂದೆ ಸದಾ ಜೀವಂತ. ಮಗನ ಅಗಲಿಕೆಗೆ ದುಃಖವಿದೆ. ಆದರೆ ಅದರ ಕಾರಣಕ್ಕಾಗಿ ಮರುಕವಿಲ್ಲ. ಬದಲಾಗಿ ಆ ಕಾರಣದಿಂದ ಅಭಿಮಾನ ಉಂಟಾಗಿದೆ, ಅದಕ್ಕಾಗಿ ಅಗಲಿದ ಮಗನಿಗೆ ಸೆಲ್ಯೂಟ್. ಹೀಗೆಯೇ ಶ್ರೀಗುರೂಜಿ ಸಮಾಜದ ಅಗತ್ಯಕ್ಕಾಗಿ ಕಠೋರವಾದರು. ಸ್ವತಃ ತನ್ನ ಪ್ರಿಯ ತಾಯಿಯ ಅಗತ್ಯಗಳನ್ನು ಬದಿಗಿಟ್ಟು ತನ್ನದೇ ನೋವನ್ನು ಪರೀಕ್ಷೆಗೆ ಈಡು ಮಾಡಿದರು. ಇಂತಹ ಮಮಕಾರದ ನಿಗ್ರಹವೇ ಮುಂದೆ ಸ್ವಯಂಸೇವಕರ ಜೀವನದ ಆದರ್ಶವಾಗಿ ನಿಂತಿತು. ಒಮ್ಮೆ ಹಿರಿಯ ಪ್ರಚಾರಕರಾಗಿದ್ದ ಮಾನ್ಯ ಬಾಬಾಸಾಹೇಬ ಆಪ್ಟೆಯವರು ವಾರಣಾಸಿಯಲ್ಲಿ ಪ್ರವಾಸದಲ್ಲಿದ್ದರು. ಅಲ್ಲಿ ಭೇಟಿಯಾಗಲು ಬಂದ ತಮ್ಮ ತಂಗಿಯನ್ನು ಅವರು ಕಾಣಬಯಸಲಿಲ್ಲ! ಕಠೋರ ತಪಸ್ಸಿನಂತೆ ಸ್ವೀಕರಿಸಿದ ಸಂಘಪ್ರಚಾರಕನ ಜೀವನದಲ್ಲಿ ವೈಯಕ್ತಿಕ ಮಮಕಾರಗಳಿಗೆ ಅವಕಾಶವಿಲ್ಲ – ಎನ್ನುವ ಅವಧೂತ ನಿಲವು, ಇವೆಲ್ಲವುಗಳಿಂದ ಒಡಮೂಡಿದ್ದರೆ ಆಶ್ಚರ್ಯವಿಲ್ಲ.

## ಪ್ರಸಂಗಾವಧಾನ

ಪಂಜಾಬಿನ ಫಗವಾಡಾ ಮತ್ತು ಸಂಗ್ರೂರ್‌ಗಳಲ್ಲಿ 1946ರ ಜುಲೈ ತಿಂಗಳಲ್ಲಿ ಸಂಘಶಿಕ್ಷಾವರ್ಗಗಳು ನಡೆಯುತ್ತಿದ್ದವು. ಈ ಎರಡು ಶಿಬಿರಗಳಲ್ಲಿ 3700 ಶಿಕ್ಷಾರ್ಥಿಗಳಿದ್ದರು. ಆಗಲೇ ವಿಭಜನೆಯ ಬಿಸಿ ಹಾಗೂ ಮುಸಲ್ಮಾನ ದಂಗೆಯ ವಾರ್ತೆಗಳು ಬರಲಾರಂಭಿಸಿದ್ದವು. ಪರಿಸ್ಥಿತಿಯನ್ನು ಗಮನಿಸಿ ಶಿಬಿರವನ್ನು ನಡುವಿನಲ್ಲೇ ಮುಕ್ತಾಯಗೊಳಿಸಲಾಯಿತು. ಸ್ವಯಂಸೇವಕರಿಗೆ ನೀಡಬೇಕಾದ ಸೂಚನೆಗಳನ್ನು ನೀಡಿ ಅವರೆಲ್ಲರನ್ನೂ ಅವರವರ ಸ್ಥಾನಗಳಿಗೆ ಕಳುಹಿಸಿದ್ದಾಯಿತು. ಅವರಲ್ಲಿ ಬಹಳಷ್ಟು ಮಂದಿ ಮುಂದೆ ಕಾಣಸಿಗಲಿಲ್ಲ; ವಿಭಜನೆಯ ದಿನಗಳ ಮುಸ್ಲಿಂ ದಂಗೆಯನ್ನು ಎದುರಿಸಿದ ವೀರೋಚಿತ ಪಾತ್ರವನ್ನು ವಹಿಸುತ್ತಲೇ ಜಗತ್ತಿನಿಂದ ಕಣ್ಮರೆಯಾದರು. ಹಿಂದು ಸಮಾಜದ ಅಗತ್ಯಕ್ಕಾಗಿ ಜೀವನವನ್ನೇ ಮುಡುಪಾಗಿಡುವ ನಿಲವನ್ನು ತಳೆಯುವುದು ಸ್ವಯಂಸೇವಕರಿಗೆ ಮಾಮೂಲು ಕರ್ತವ್ಯವೆನ್ನಿಸುವಷ್ಟು ಸಹಜವಾಯಿತು.

ವಿಭಜನೆಯ ದಿನಗಳವು. ಕರಾಚಿಯ ಬಾಂಬ್ ಸ್ಫೋಟ ಪ್ರಕರಣದಲ್ಲಿ ಸಂಘಚಾಲಕರಾಗಿದ್ದ ಬ್ಯಾರಿಸ್ಟರ್ ಗೋಪಾಲಚಂದರೊಂದಿಗೆ ಹತ್ತೊಂಬತ್ತು ಸ್ವಯಂಸೇವಕರನ್ನು ಪಾಕಿಸ್ತಾನ ಸರ್ಕಾರ ಬಂಧಿಸಿತ್ತು. ಕೈದಿಗಳ ವಿನಿಮಯ ಒಪ್ಪಂದದಂತೆ ಖುರೇಶಿ ಎನ್ನುವವನ ಬದಲು ಈ ಸ್ವಯಂಸೇವಕರನ್ನು ಬಿಡುಗಡೆಗೊಳಿಸುವಂತಾಗಲು ಶ್ರೀಗುರೂಜಿಯವರು ಪ್ರಯತ್ನಿಸಿದರು. ಬಿಡುಗಡೆಯಾಗಬೇಕಾದ ದಿನ ಸ್ವಾಗತಿಸಲು ಸ್ವತಃ ಶ್ರೀಗುರೂಜಿ – ಫಿರೋಜ್‌ಪುರಕ್ಕೆ ಬಂದಿದ್ದರು. ಆದರೆ ಪಾಕಿಸ್ತಾನವು ಒಬ್ಬನ ಬದಲು ಒಬ್ಬ ಎನ್ನುವ ನಿಯಮವನ್ನು ಪಾಲಿಸುವಂತೆ ಸಂಘಚಾಲಕರನ್ನು ಮಾತ್ರ ಬಿಡುಗಡೆಗೊಳಿಸಿತ್ತು. ಸ್ವಯಂಸೇವಕರ ಸುರಕ್ಷತೆಯೊಂದನ್ನೇ ಚಿಂತಿಸುತ್ತಿದ್ದ ಶ್ರೀಗುರೂಜಿಯವರಿಗೆ ಈ ಅವಕಾಶವನ್ನು ಬಿಟ್ಟಲ್ಲಿ ಸ್ವಯಂಸೇವಕರು ಮರಳುವುದು ಅಸಾಧ್ಯವೆಂದೇ ತೋರಿತು. ಭಾರತ ಸರ್ಕಾರದ ಅತ್ಯುಚ್ಚ ವ್ಯಕ್ತಿಗಳನ್ನು ಅಲ್ಲಿಂದಲೇ ಸಂಪರ್ಕಿಸಿ ಖುರೇಶಿಯ ಬಿಡುಗಡೆಯನ್ನು ಹಿಂತೆಗೆದುಕೊಳ್ಳುವಂತೆ ಮಾಡಿದರು. ಆಗ ದಾರಿಗೆ ಬಂದ ಪಾಕಿಸ್ತಾನವು ಎಲ್ಲರನ್ನೂ ಬಿಡುಗಡೆಗೊಳಿಸಿತು. ಸರಸಂಘಚಾಲಕರ ಕಾಳಜಿ, ಪ್ರಸಂಗಾವಧಾನ, ಅಗಾಧ ಸಂಪರ್ಕ

– ಇವೆಲ್ಲವೂ ಕುಟುಂಬವೊಂದರ ಹಿರಿಯನ ರೀತಿಯಲ್ಲಿದ್ದುದು ಮುಂದಿನ ದಿನಗಳಲ್ಲಿ ಸಂಘದ ಅಧಿಕಾರಿಗಳು ಕ್ಲಿಷ್ಟ ಪರಿಸ್ಥಿತಿಯನ್ನು ನಿಭಾಯಿಸಬೇಕಾದ ರೀತಿಯನ್ನು ನಿರ್ಮಿಸಿತು.

## ಸಹಕಾರಿಗಳಲ್ಲಿ ಭರವಸೆ

ಶ್ರೀಗುರೂಜಿಯವರು ಕಾರ್ಯಾಲಯದಲ್ಲಿ ಮಧ್ಯಾಹ್ನ ಎಲ್ಲರೊಂದಿಗೆ ಚಹಾ ಸೇವಿಸುತ್ತಿದ್ದರು. ಅದೊಂದು ದಿನ ಅಲ್ಲಿ ಬಾಬಾಸಾಹೇಬ ಅಪ್ಟೆಯವರೂ ಇದ್ದರು. ಅವರು ಚಹಾ ಸೇವಿಸುತ್ತಿರಲಿಲ್ಲ. ಆ ದಿನ ಅಲ್ಲಿದ್ದ ಕಾರ್ಯಕರ್ತರೆಲ್ಲ ಚಹಾ ಸ್ವೀಕರಿಸುವಂತೆ ಅಪ್ಟೆಯವರಿಗೆ ದುಂಬಾಲುಬಿದ್ದರು. ಸುತರಾಂ ಒಪ್ಪದ ಅಪ್ಟೆಯವರನ್ನು "ನಾವು ಕೇಳಿದರೆ ನೀವು ಕುಡಿಯುವುದಿಲ್ಲ ಎನ್ನುತ್ತೀರಿ. ಶ್ರೀ ಗುರೂಜಿಯವರೇ ಕೇಳಿದರೆ ಕುಡಿಯುವಿರಾ ಅಥವಾ ಇಲ್ಲವೆ?" ಎಂದೊಬ್ಬರು ಕೇಳಿಯೇಬಿಟ್ಟರು. ಬಾಬಾಸಾಹೇಬರು ತಕ್ಷಣ; "ಗುರೂಜಿಯವರು ಹೇಳಿದರೆ ಚಹಾವೇ ಏನು? ವಿಷವನ್ನು ಬೇಕಾದರೆ ಕುಡಿಯುವೆ" ಎಂದರು. ಇಲ್ಲಿ ಹಿರಿಯ ಕಾರ್ಯಕರ್ತನೊಬ್ಬನ ಸಮರ್ಪಣೆಯು ವ್ಯಕ್ತವಾಗಿದೆಯೆನಿಸಬಹುದು. ಆದರೆ ಅದಕ್ಕಿಂತ ಹೆಚ್ಚಾಗಿ, ತಾತ್ವಿಕ ವಿಚಾರವಲ್ಲದಿದ್ದರೆ ಸಂಘಟನೆಯ ಹಿರಿಯರೊಬ್ಬರು ತನ್ನೆಲ್ಲ ಜೊತೆಯವರ ವೈಯಕ್ತಿಕ ಭಾವನೆಯನ್ನೂ, ಆಸಕ್ತಿಯನ್ನೂ, ಗೌರವಿಸುತ್ತಾರೆ. ಎನ್ನುವ ಅಪಾರ ಭರವಸೆ ಇಲ್ಲಿ ವ್ಯಕ್ತಗೊಂಡಿತ್ತು. ಇಂತಹ ಪರಸ್ಪರ ಗೌರವ ಹಾಗೂ ಭರವಸೆಯ ಸಂಬಂಧಗಳೇ ಮುಂದೆ ಸಂಘಟನೆಯ ಬುನಾದಿಯಾದವು. ಸಂಘನಿಷೇಧದ ದಿನಗಳಲ್ಲಿ ಶ್ರೀ ಗುರೂಜಿ ಸೆರೆಮನೆಯಲ್ಲಿದ್ದರು. ಗಾಂಧೀಜಿ ಹತ್ಯೆಯ ಗುರುತರ ಆಪಾದನೆಯಿಂದ ಕಳಗಿಳಿದು ಈಗ ಸಂಘಟನೆಗೆ ಲಿಖಿತ ಸಂವಿಧಾನವಿಲ್ಲ ಎನ್ನುವ ಕ್ಷುಲ್ಲಕ ಕಾರಣಕ್ಕೆ ಸರಕಾರ ಜೋತುಬಿದ್ದಿತ್ತು. ಮಧ್ಯವರ್ತಿ ಹಿರಿಯರ ಸಲಹೆಯಂತೆ ಶ್ರೀ ಗುರೂಜಿ ತಮ್ಮ ಕಿರಿಯ ಸಹಕಾರಿಗಳಿಗೆ ಸಂವಿಧಾನವನ್ನು ಲಿಖಿತಗೊಳಿಸಲು ಸೂಚಿಸಿದರು. ಸಂಧಾನಕಾರರಾಗಿದ್ದ ಹಿರಿಯ ವಕೀಲ ಟಿ. ಆರ್. ವೆಂಕಟರಾಮಶಾಸ್ತ್ರಿಗಳು ಲಿಖಿತ ಕರಡು ಸಂವಿಧಾನವನ್ನು ಶ್ರೀಗುರೂಜಿಯವರ ಒಪ್ಪಿಗೆ ಹಾಗೂ ಸಹಿಗಾಗಿ ಸೆರೆಮನೆಗೆ ಕೊಂಡೊಯ್ದರು. ಶ್ರೀಗುರೂಜಿಯವರು ಅದನ್ನು ಓದುವ ಗೊಡವೆಗೇ ಹೋಗದೆ ಅದಕ್ಕೆ ಸಹಿ ಹಾಕಿದರು! ಉದಾರವಾದಿ ಚಿಂತಕರೆನಿಸಿದ ಶಾಸ್ತ್ರಿಗಳಿಗೂ ಕೂಡಾ ಶ್ರೀಗುರೂಜಿಯವರು ತಮ್ಮ ಸಹಕಾರಿಗಳ ಬಗ್ಗೆ ಇಟ್ಟ ವಿಶ್ವಾಸವು ಆಶ್ಚರ್ಯವನ್ನು ಹುಟ್ಟಿಸಿತು.

ತಮ್ಮ ಪ್ರೌಢಶಾಲಾ ದಿನಗಳಲ್ಲೇ ಷೇಕ್ಸ್ಪಿಯರ್‌ನ ನಾಟಕಗಳನ್ನು ಶ್ರೀಗುರೂಜಿ ಓದಿದ್ದರು. ಹಾಗಿರುವಾಗ ಕಾಲೇಜು ದಿನಗಳಲ್ಲಿ ಓದಿದ ಬೈಬಲ್ಲಿನ ಸಾಲುಗಳನ್ನು ಅವರು ನೆನಪಿಟ್ಟುಕೊಂಡದ್ದು ಆಶ್ಚರ್ಯವೇನಲ್ಲ. ಆದರೆ ಸದಾ ಬೈಬಲನ್ನು ಸಂಗಾತಿಯಾಗಿಟ್ಟುಕೊಂಡ ಸ್ಕಾಟಿಷ್ ಪಾದ್ರಿ ಪ್ರಿನ್ಸಿಪಾಲ್ ಗಾರ್ಡಿನರ್‌ಗೆ ಆತನು ಹೇಳಿದ ಬೈಬಲಿನ ಉಲ್ಲೇಖವನ್ನು ಸರಿಪಡಿಸುವಂತೆ ಶ್ರೀಗುರೂಜಿ ಮಾಡಿದುದು ವಿಶೇಷ. ಅಲಹಾಬಾದ್ ವಿಶ್ವವಿದ್ಯಾನಿಲಯದ ವಿಜ್ಞಾನಶಾಖೆಯ ವಿಭಾಗಗಳಿಗೆ ಶ್ರೀಗುರೂಜಿಯವರು ಭೇಟಿಕೊಡುವ ಕಾರ್ಯಕ್ರಮವೊಂದಿತ್ತು. ಶ್ರೀಗುರೂಜಿಯವರು ವಿಜ್ಞಾನದಲ್ಲಿ ಸ್ನಾತಕೋತ್ತರ ಪದವೀಧರರೆಂದು ಎಲ್ಲರಿಗೂ ತಿಳಿದಿತ್ತು. ಆದರೆ ಅವರು ಯಾವ ವಿಭಾಗದ ವಿದ್ಯಾರ್ಥಿ ಎನ್ನುವುದು ಯಾರಿಗೂ ಗೊತ್ತಿರಲಿಲ್ಲ. ಶ್ರೀಗುರೂಜಿಯವರು ಬೇರೆ ಬೇರೆ ವಿಭಾಗಗಳ ಪ್ರಾಧ್ಯಾಪಕರೊಡನೆ ಮಾತನಾಡುತ್ತ ಸಾಗುತ್ತಿದ್ದಂತೆ ಎಲ್ಲರೂ ಅವರನ್ನು ತಮ್ಮ ವಿಭಾಗದ ವಿಷಯದಲ್ಲೇ ಅಭ್ಯಾಸ ಮಾಡಿಕೊಂಡಿದ್ದಿರಬೇಕೆಂದು ಭಾವಿಸಿದರಂತೆ!

*(ಮುಂದುವರೆಯುವುದು....)*

# ಜೀವನದ ಅನನ್ಯ ಅನುಭವ ಬಾಲರಾಮನ ದರ್ಶನ

– **ರಾಮು.ಪಿ,** ವಿಶ್ವ ಹಿಂದು ಪರಿಷದ್, ಬೆಂಗಳೂರು



ಐನೂರು ವರ್ಷಗಳ ಹೋರಾಟದ ನಂತರ ಅಯೋಧ್ಯೆಯ ಕಳಂಕಿತ ಮುರುಕು ಕಟ್ಟಡವು ನೆಲಸಮಗೊಂಡಿತು. ಅಲ್ಲಿ ಆ ಭವ್ಯ, ದಿವ್ಯ ಶ್ರೀರಾಮ ಜನ್ಮ ಭೂಮಿಯ ಸುಂದರ ಅತಿಸುಂದರ ಮಂದಿರದಲ್ಲಿ ಶ್ರೀರಾಮನು ಮನಮೋಹಕ ಬಾಲರಾಮನಾಗಿ ವಿರಾಜಮಾನ ನಾದುದು; ಅದಾಗಿ ಕೆಲವೇ ದಿನಗಳಲ್ಲಿ ಅವನ ದರ್ಶನ ಭಾಗ್ಯವು ನನಗೆ ದೊರಕಿದುದು; ಈ ಜನ್ಮದಷ್ಟೇ ಅಲ್ಲ ಹಲವು ಜನ್ಮಗಳಿಂದ ಕಾಯುತ್ತಿದ್ದ ಪಾವನ ಕ್ಷಣಗಳು.

ಯಾರು ಕರೆದರು ನಮ್ಮನ್ನು ಅಯೋಧ್ಯೆಗೆ? ಅದು ಸ್ವಯಂ ಶ್ರೀರಾಮನ ಕೃಪಾಹ್ವಾನ. ರಾಷ್ಟ್ರೀಯ ಸ್ವಯಂಸೇವಕ ಸಂಘ, ವಿಶ್ವ ಹಿಂದು ಪರಿಷದ್, ಸೇರಿದಂತೆ ಆರಿಸಿದ ಕಾರ್ಯಕರ್ತರು ಮತ್ತು ಶ್ರೀರಾಮನ ವೈಭವ ಪ್ರಾಪ್ತಿಗಾಗಿ ಹಲವು ಹಂತಗಳಲ್ಲಿ ಹೋರಾಡಿದ ಕರಸೇವಕರನ್ನು ಕರೆದೊಯ್ದ ವಿಶೇಷ ಆಸ್ತಾರೈಲು ಫೆಬ್ರವರಿ 17ರಂದು ಮೈಸೂರಿನಿಂದ ಬೆಂಗಳೂರು ಮಾರ್ಗವಾಗಿ ಹೊರಟಿತು. 22 ಬೋಗಿಗಳ ಆ ವಿಶೇಷ ರೈಲು ತುಮಕೂರು ಮತ್ತು ಚಿತ್ರದುರ್ಗದ ನಂತರ ನಾಗಪುರದಲ್ಲಿ ಮಾತ್ರ ನಿಂತು ನೇರವಾಗಿ ಅಯೋಧ್ಯೆಗೆ ತಲುಪುತ್ತಿತ್ತು. ಓಡುತ್ತಿದ್ದ ರೈಲಿನ ಉದ್ದಕ್ಕೂ ನಮ್ಮ ಗುಂಪು ಸಾಮೂಹಿಕ ಸತ್ಸಂಗದ ತಾಣವಾಗಿ ಮಾರ್ಪಟ್ಟಿತು. ಗೀತೆ, ಭಜನೆ, ಪುರಾಣ, ಕಥೆ, ಜಯಘೋಷಗಳ ಭಕ್ತಮೇಳವೇ ಆಗಿಬಿಟ್ಟಿತು. ಮೀರಾಳ ಭಕ್ತಿ, ಚೈತನ್ಯರ ಪರವಶತೆ ಎಲ್ಲವೂ ಒಂದಾಗಿ ಬೆರೆತ ಭಕ್ತಿಭಾವ ಎಲ್ಲರನ್ನು ಕವಿಯಿತು. ವ್ಯವಸ್ಥೆಯ ಭಾಗವಾಗಿದ್ದ ನಾವು ಕೆಲವರಿಗೆ ಸುರಕ್ಷತೆ, ಎಚ್ಚರಿಕೆ, ಭದ್ರತೆಗಳೆಲ್ಲಾ ಮರೆತೇ ಹೋಗುವಷ್ಟು. ರೈಲ್ವೇ ಸಿಬ್ಬಂದಿಯವರಾದ ರಾಘವನ್ ಹಾಗು ಕೇಶವ ಅವರ ತಂಡವು ನಮಗೆ ಯಾವುದೇ ರೀತಿ ಅನಾನುಕೂಲವು ಒದಗದಂತೆ ಊಟೋಪಚಾರ, ವೈದ್ಯಕೀಯ, ಆಸನ ವ್ಯವಸ್ಥೆ, ನೀರು ಹೀಗೆ ನಾನಾ ವಿಧಗಳಲ್ಲಿ ಸಮರ್ಪಕ ನಿರ್ವಹಣೆಯನ್ನು ತೋರಿದರು. ರೈಲ್ವೇ ವ್ಯವಸ್ಥೆಯು ಇಷ್ಟು



ಅಚ್ಚುಕಟ್ಟಾಗಿರಬಹುದೇ ಎಂದು ನಮ್ಮವರು ಉದ್ಗಾರ ತೆಗೆದುದೂ ಹೌದು. ಹೀಗೆ ರೈಲ್ವೆ ಸಿಬ್ಬಂದಿಗಳು ಉದ್ದಕ್ಕೂ ನಮ್ಮ ಮಿತ್ರರಾದರು. ಸಹವರ್ತಿಗಳಾದರು ನಂತರ ಬಿಡಲಾರದ ಸ್ನೇಹಿತರಾದರು.

ಹೀಗೆ ಬೆಳಗ್ಗೆ, ಮದ್ಯಾಹ್ನ ಮತ್ತು ರಾತ್ರಿ 3 ಜಾವಗಳಲ್ಲಿ ಭಜನೆ, ಕೀರ್ತನೆಗಳು ನಡೆಯುತ್ತಿದ್ದವು. ಮೈಸೂರು, ಬೆಂಗಳೂರು ನಿಲ್ದಾಣಗಳಲ್ಲಿ ಸಂಘ, ಪರಿಷದ್ ಅಧಿಕಾರಿಗಳು ನಮ್ಮನ್ನು ಬೀಳ್ಕೊಡಲು ಬಂದಾಗ ಮತ್ತು ಅಲ್ಲಲ್ಲಿ ರೈಲ್ವೇ ನಿಲ್ದಾಣದ ಒಳಗೆ ಸಂಘದ ಪ್ರಾರ್ಥನೆ ನಡೆಯುತ್ತಲೇ ಇದ್ದವು. ಸಿಕಂದರಾಬಾದ್ ನಿಲ್ದಾಣದಲ್ಲಿ ಎಲ್ಲ ಪ್ರಯಾಣಿಕರು ಕೆಳಗಿಳಿದು ಏಕಕಂಠದಿಂದ ಸಂಘ ಪ್ರಾರ್ಥನೆ ಮಾಡಿದಾಗ ತದೇಕರಾಗಿ ನೆರೆದ ಎಲ್ಲರೂ ದಿಗ್ಮೂಢರಾದುದು; ನಮ್ಮತ್ತಲೇ ನೋಡುತ್ತಿದ್ದ ಸನ್ನಿವೇಶ ಅತೀತವಾಗಿದ್ದಿತು. ನಾಗಪುರದ ನಿಲ್ದಾಣದಲ್ಲಂತೂ ಮಾಡಿದ ಪ್ರಾರ್ಥನಾ ಗಂಗೆಗೆ ಕೃತಾರ್ಥತೆ ಹೆಮ್ಮೆ ಮತ್ತು ಭಕ್ತಿಗಳ ಸುಂದರ ಸಂಗಮವು ಸೇರಿಕೊಂಡಿತು.

19ರ ಮಧ್ಯಾಹ್ನ ರೈಲು ನಿಗದಿತ ಸಮಯಕ್ಕೆ ಅಯೋಧ್ಯೆ ತಲುಪಿತು. ಅಲ್ಲಿನ ರೈಲ್ವೇ ಸಿಬ್ಬಂದಿ ಹಾಗು ನಮ್ಮ ಪ್ರಬಂಧಕರು ನಮಗೆ ವಸತಿಯ ಮಾರ್ಗದರ್ಶನ ಮಾಡಿದರು. ನಮ್ಮ ವಸತಿಗೆ ಗೊತ್ತಾದುದು ಸಮೀಪದ ತೀರ್ಥಕ್ಷೇತ್ರ ಪುರಮಿನ ವಸತಿ. ಸರಿಸುಮಾರು 30,000 ಜನ ತಂಗಬಹುದಾದ ಬೃಹದ್ ಟೆಂಟ್ ವ್ಯವಸ್ಥೆ ಅಲ್ಲಿದ್ದಿತು. ತೀರ್ಥಕ್ಷೇತ್ರ ಟ್ರಸ್ಟ್ ವತಿಯಿಂದ ಚಹಾ, ಭೋಜನ, ಬಿಸಿ ನೀರು, ಮಲಗಲು ಹಾಸಿಗೆ, ಹೊದಿಕೆ ಹೀಗೆ ಎಲ್ಲ ಸೌಲಭ್ಯಗಳು ಹೇರಳವಾಗಿ ದೊರಕಿದವು. ಪರಿಷದ್ ಕೇಂದ್ರಿಯ ಜಂಟಿ ಸಹ ಕಾರ್ಯದರ್ಶಿಗಳಾದ ಸ್ಥಾಣುಮಾಲಯನ್‌ಜಿ ನಮಗಾಗಿ ಅಲ್ಲಿ ವ್ಯವಸ್ಥೆಯ ಪರಿವೀಕ್ಷಣೆ ನಡೆಸಿ ನಮಗೆ ಸೂಕ್ತ ಮಾರ್ಗದರ್ಶನ ಮಾಡಿದರು.

ಸ್ನಾನ, ಊಟ ಮುಗಿಸಿ ಎಲ್ಲರೂ ಕಾತುರರಾಗಿ ಶ್ರೀರಾಮನ ದರ್ಶನಕ್ಕೆ ಹೊರಟೆವು. ಮಧ್ಯಾಹ್ನದಿಂದ ಆರಂಭವಾಗಿ ಎಲ್ಲರೂ ಬಿಡಿಬಿಡಿಯಾಗಿ ಅಯೋಧ್ಯೆಯಲ್ಲಿಡೀ ರಾಮ ಭಂಟ ವಾನರ ಸೇನೆಯಂತೆ ತುಂಬಿಬಿಟ್ಟೆವು. ಹನುಮಾನ್ ಘಡಿ ದರ್ಶನದ ನಂತರ ಯಾತ್ರೆಯ ಮುಖ್ಯ ಬಿಂದುವಾದ ರಾಮಲಲಾನ ದರ್ಶನಕ್ಕೆ ಎಲ್ಲರು ತೆರಳಿದವು.



ನಾನು ನಮ್ಮ ಯಾತ್ರೆಯ ಸಹ ವ್ಯವಸ್ಥಾ ಪ್ರಮುಖ್ ಯಲ್ಲಾರೆಡ್ಡಿ ಹಾಗು ನರಸಿಂಹಮೂರ್ತಿ ಜಿ ಅವರೊಡಗೂಡಿ ಬಾಲರಾಮನ ದರ್ಶನಕ್ಕೆ ಸಾಗಿದೆವು, ಹನುಮಾನ್ ಘಡಿಯಲ್ಲಿ ದರ್ಶನ ಪಡೆದು ರಾಮ ಪಥದಲ್ಲಿ ಸುಮಾರು 1.5 ಕಿ.ಮೀ. ನಡೆದರೆ 3ನೆ ದ್ವಾರದಲ್ಲಿ ರಾಮಮಂದಿರಕ್ಕೆ ತೆರಳುವ ದಾರಿ. ವಿಸ್ತಾರವಾದ ಪಾವಟಿಕೆಗಳು. ಸ್ವರ್ಗಕ್ಕೆ ಕಾಲಿಟ್ಟ ಅನುಭವ ನನಗಾಯಿತು. ನೂಕಾಟ ತಳ್ಳಾಟವಿಲ್ಲದೆ ಎಲ್ಲರು ರಾಮನಾಮ ಭಜಿಸುತ್ತ ಮುಂದೆ ಸಾಗುತ್ತಿದ್ದರು, 20 ನಿಮಿಷದಲ್ಲಿ ನಾವು ಸಿಂಹದ್ವಾರದ ಮೆಟ್ಟಿಲು ಹತ್ತಿದ್ದೇ ತಡ ನನ್ನಪ್ಪ ಶ್ರೀರಾಮನನ್ನು ಆ ಅಲೌಕಿಕ ಸುಂದರನನ್ನು ಇವೇ ಕಣ್ಣುಗಳಿಂದ ಕಣ್ತುಂಬಿಸಿಕೊಂಡೆ.

80 ಅಡಿ ದೂರದಿಂದಲೇ ಮನಸ್ಸು ರಾಮನ ಪಾದಕ್ಕೆ ಮಂಡಿಯೂರಿತ್ತು, ಬಲಗೈಯಲ್ಲಿ ದಿ.ಕೇಶವ ಹೆಗಡೆಯವರ ಭಾವಚಿತ್ರವನ್ನು ಹಿಡಿದಿದ್ದೆ. ಅವರೂ ದರ್ಶನ ಪಡೆದರೆಂಬ ಸಮಾಧಾನ ನನಗಾಯಿತು. ಸಮೀಪಕ್ಕೆ ಸಾಗಿದಾಗಲಂತೂ ಕಣ್ಣಾಲಿಗಳು ತೋಯ್ದು ಹೋದವು. ಮನಸ್ಸು ಅತೀತ ಆನಂದದಿಂದ ಮಿಂದೆದ್ದು ಕಣ್ತುಂಬಿ ತದೇಕಚಿತ್ತದಿಂದ ನನ್ನ ಆರಾಧ್ಯ ದೈವದ ಸಾಕ್ಷಾತ್ಕಾರವನ್ನು ದೇಹ, ಮನಸ್ಸು, ಹೃದಯಗಳಲ್ಲಿ ತುಂಬಿಕೊಂಡೆ. ಜೀವನಕ್ಕೆ ಮೋಕ್ಷ ಪ್ರಾಪ್ತವಾದ ಅನುಭವ, ಅಪೂರ್ವ ದರ್ಶನದ ನಂತರ ಪುಲಕಿತನಾಗಿ ಹೊರಗೆ ಬಂದ ನಂತರವೂ ಅದೇ ಬಾಲರಾಮನ ಭಂಗಿ ಮನಸ್ಸಿನಲ್ಲಿ ಅಚ್ಚು ಹೊತ್ತು ಅನೂಹ್ಯ ಬೆಳಕಾಗಿ ರೂಪತಾಳಿತ್ತು. ಯಲ್ಲಾರೆಡ್ಡಿಯವರೂ ಸಹ ತಮ್ಮ ಕಣ್ಣಾಲಿಯನ್ನು ಒರೆಸುತ್ತಿದ್ದರು. ಆ ದಿನ ಶ್ರೀರಾಮನ ಶೃಂಗಾರ ಬೆಂಗಳೂರಿನ ಹೂವುಗಳಿಂದ ಆಗಿತ್ತು.

ಪ್ರಭು ಶ್ರೀರಾಮನ ದರ್ಶನ ಪಡೆಯುವ ಆಸೆ ಇಂಗದು. ಮತ್ತೆ ದರ್ಶನದ ಸಾಲಿಗೆ ಸೇರಿಕೊಂಡೆವು. 20 ನಿಮಿಷದಲ್ಲೇ ಪುನರ್ದರ್ಶನವು ಪ್ರಾಪ್ತವಾಯಿತು. ಆಗಲೇ ನಾನು ಮಂದಿರದ ಒಳನೋಟ. ಸೌಂದರ್ಯಗಳ ದೃಶ್ಯಗಳನ್ನು ನೀರಿಕ್ಷೀಸಿದುದು. ಅದ್ಭುತವಾದ ವಾಸ್ತುಶಿಲ್ಪ, ಸೂಕ್ಷ್ಮ ಕೆತ್ತನೆಗಳೆಲ್ಲವನ್ನು ಗಮನಿಸಿದೆ. ಶ್ರೀರಾಮನು ನನ್ನಲ್ಲಿ ನೆಲೆ ನಿಂತು ಮನಸ್ಸಲ್ಲಿಯೂ ಪೂರ್ಣ ಪ್ರತಿಷ್ಠೆಗೊಂಡ ದಿವ್ಯ ಅನುಭವವು ನನಗಾಯಿತು. ಓ ದೇವದೇವನೇ ನನ್ನ ಜನ್ಮ ಪುನೀತವಾಯಿತು. ಸಾರ್ಥಕವಾಯಿತು.

ಪಾವನ ಸರಯೂ ನದಿಯ ಸ್ನಾನವೂ ಆಯಿತು ವಿಸ್ತಾರವಾದ ನದಿ. ಇಲ್ಲೇ ರಾಮನು ತನ್ನ ತಮ್ಮಂದಿರೊಂದಿಗೆ ನೀರಾಟ ಆಡಿರಬಹುದು. ಆಟ ಆಡಿರಬಹುದು. ಅದು ಯಾವ ಭಾಗ್ಯವೋ ಇಂದು ಅವನ ಪದತಲದಲ್ಲಿ ನಾವೆಲ್ಲ ಹಿಂದು ಸಹೋದರರು ಒಂದಾದೆವು. ಸರಯೂ ಆರತಿಯ ಅತ್ಯಂತ ಪವಿತ್ರ ದೃಶ್ಯವು ನಮಗಾಯಿತು. ತಾಯಿ ಸರಯೂ ತನ್ನ ತೋಳಲ್ಲಿ ಬಾಲರಾಮನನ್ನು ಆಡಿಸಿದಾಕೆ, ಆಕೆಯ ಆರತಿ ನಡೆಯುವಾಗ ಮನಸ್ಸು ರಾಮಾಯಣದ ಪ್ರಸಂಗಗಳಲ್ಲಿ ಮಗ್ನವಾಯಿತು. ಪಕ್ಕದಲ್ಲೆ ನಡೆವ ರಾಮ ಕುಂಜದ ಮೇಲೆ ಬೆಳಕಿನ ಪ್ರತಿಫಲನದಲ್ಲಿ ರಾಮಾಯಣ ಕಥಾ ಪ್ರದರ್ಶನದ ಅದ್ಭುತ ತಂತ್ರಜ್ಞಾನ, ಲೇಸರ್ ಬೆಳಕಿನಲ್ಲಿ ರಾಮಗೀತೆಗಳಿಗೆ ಕಾರಂಜಿಯ ನರ್ತನವು ಮನಸ್ಸು ಕೂಡಾ ಕುಣಿಯುವಂತೆ ಮಾಡಿತು, ವಯೋಭೇಧವಿಲ್ಲದೆ ಎಲ್ಲರೂ ಅಲ್ಲಿ ನರ್ತಿಸಿದರು. ಕುಣಿದು ಕುಪ್ಪಳಿಸಿದರು. ನಂತರ ದಶರಥ ಮಹಲ್, ಕನಕ ಭವನ, ಲಕ್ಷ್ಮಣ ಕುಂಜ, ಗುಪ್ತಘಾರ್ಟ್ ಹೀಗೆ ಅನೇಕ ಮಹಾತ್ಮೆಯು ಪುಣ್ಯ ಸ್ಥಳಗಳ ದರ್ಶನವಾಯಿತು.

ಅಯೋಧ್ಯೆಯು ರಾಮನ ಬರುವಿನಿಂದ ಲೋಕಕ್ಕೆ ಈವರೆಗೂ ಕಾಣದ ವಿಶ್ವದ ಆಧ್ಯಾತ್ಮಿಕ ಕೇಂದ್ರವಾಗಿ ವಿಜೃಂಬಿಸುತ್ತಿದೆ. ಹೀಗೆ 6 ದಿನದ ಪ್ರವಾಸವು ಅರ್ಧ ದಿನದ ಪ್ರವಾಸದಂತೆ, ಕಣ್ಣುಮುಚ್ಚಿ, ತೆರೆಯುವುದರೊಳಗೆ ಎನ್ನುವಂತೆ ಮಂಗಳಕರವಾಗಿ ಸಂಪನ್ನಗೊಂಡಿತು. ಎಲ್ಲರಲ್ಲೂ ರಾಮನಾಮ, ರಾಮಗಾನ, ರಾಮನ ದರ್ಶನದಿಂದ ಪುಳಕಿತರಾದ ಧನ್ಯಭಾವ ಕಾಣುತ್ತಿತ್ತು. ಎಲ್ಲರು ಕ್ಷೇಮವಾಗಿ 22 ರ ಬೆಳಗ್ಗೆ ಬೆಂಗಳೂರಿಗೆ ಬಂದು ತಲುಪಿದೆವು.

ಶ್ರೀರಾಮನೇ ನಿನ್ನ ದರ್ಶನದಿಂದ ಹೃದಯ ತುಂಬಿದೆ. ಮನಸ್ಸು ಪುಲಕಿತವಾಗಿದೆ. ಪ್ರಭುವೇ ನಿನ್ನ ಸಾನ್ನಿಧ್ಯದಿಂದ ದೇಶ ಸುಭಿಕ್ಷವಾಗಲಿ. ಭಾರತ ವಿಶ್ವಗುರುವಾಗಲಿ, ಜಗತ್ತು ಸುಖಕರವಾಗಿರಲಿ. ನೀನು ಅಂದು ಆಳಿದ ರಾಮರಾಜ್ಯವು ನಮ್ಮ ಮುಂದೆ ಪ್ರತ್ಯಕ್ಷವಾಗಲಿ.

# ಯಾನ್ ಮಿರಾ ಎನ್ನುವ ಹೊಸದನಿ



ಇಂಗ್ಲೆಂಡಿನ ಸಂಸತ್ತು ಆಚರಿಸುತ್ತಿರುವ 'ಸಂಕಲ್ಪ ದಿವಸ'ದ ಪ್ರಮುಖ ಅಭ್ಯಾಗತೆಯಾಗಿ ಆಗಮಿಸಿ ಮಾತನಾಡಿದಾಕೆ ಕಾಶ್ಮೀರದ ಪತ್ರಕರ್ತೆಯಾದ ಯಾನ್ ಮಿರಾ. ಆಕೆ ಅಲ್ಲಿ ಆಡಿದ ಮಾತು ಪಾಕಿಸ್ತಾನದ ಭಾರತ ವಿರೋಧಿ ಅಪಪ್ರಚಾರಕ್ಕೆ ಸಮರ್ಥವಾದ ಪ್ರತ್ಯುತ್ತರವಾಗಿ ಪರಿಣಮಿಸಿತು. ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವೆಂದೂ ಮತ್ತು ಆಕೆಯು ಕಾಶ್ಮೀರದಲ್ಲಿ ಸುರಕ್ಷಿತಳಾಗಿಯೂ ಸ್ವತಂತ್ರಳಾಗಿಯೂ ಇರುವಳೆಂದೂ ಅಲ್ಲಿ ಆಕೆ ಸಾರಿದಳು.

ತನ್ನ ಮಾತಿನ ಪ್ರಾರಂಭದಲ್ಲೇ ಯಾನ್‌ಮಿರಾ ಪಾಕಿಸ್ತಾನಿ ತಾಲಿಬಾನಿಗಳಿಂದ ಕೊಲೆಯ ಪ್ರಯತ್ನದಲ್ಲಿ ಗಾಯಗೊಂಡು ಈಗ ಇಂಗ್ಲೆಂಡಿನಲ್ಲಿ ವಾಸಿಸುತ್ತಿರುವ ಪಾಕಿಸ್ತಾನಿ ಶಿಕ್ಷಣ ರಂಗದ ಕಾರ್ಯಕರ್ತೆ ಮತ್ತು ನೋಬೆಲ್ ಪ್ರಶಸ್ತಿ ವಿಜೇತೆ ಮಲಾಲಾ ಯೂಸುಫ್ ಜಾಯಿಯ ಹೆಸರನ್ನು ಉಲ್ಲೇಖಿಸಿದರು. "ನನಗೆ ಭಯೋತ್ಪಾದಕರ ಬೆದರಿಕೆಯಿಂದ ಪಾಕಿಸ್ತಾನದ ನೆಲದಿಂದ ಪಲಾಯನ ಮಾಡಿರುವ ಮಲಾಲಾ ಯೂಸುಫ್ ಜಾಯಿಯ ಸ್ಥಿತಿಯು ಬರಲಾರದು. ಏಕೆಂದರೆ ನಾನು ಭಾರತದ ಭಾಗವಾದ, ನನ್ನ ನೆಲವಾದ ಕಾಶ್ಮೀರದಲ್ಲಿ ಭಯಮುಕ್ತಳಾಗಿ ಸುರಕ್ಷಿತಳಾಗಿ ಮತ್ತು ಸ್ವತಂತ್ರಳಾಗಿಯೂ ಬದುಕುತ್ತಿದ್ದೇನೆ. ಆಕೆ ಪಾಕಿಸ್ತಾನ ಬಿಟ್ಟು ಹೋದಂತೆ ಭಾರತವನ್ನು ಬಿಟ್ಟು ನಿಮ್ಮ ದೇಶದಲ್ಲಿ ನಿರಾಶ್ರಿತಳಾಗಿ ಬದುಕಲು ಬೇಡಿಕೊಳ್ಳುವ ಸ್ಥಿತಿಯು ನನಗೆ ಒದಗಿ ಬಂದಿಲ್ಲ. ಅಷ್ಟೇ ಅಲ್ಲ. ನನ್ನ ದೇಶವನ್ನು ಅವಮಾನಿಸುವ ಭಾರತದಂತಹ ಪ್ರಗತಿಪರ ಭೂಮಿಯನ್ನು ದಮನಕಾರಿ ದೇಶವೆಂದು ದೂಷಿಸುವ ಅವಳನ್ನು ನಾನು ಖಂಡಿಸುತ್ತೇನೆ. ಇದರೊಂದಿಗೆ ಭಾರತದೇಶವನ್ನು ದ್ವೇಷಿವುದನ್ನೇ ಉದ್ಯೋಗವಾಗಿಸಿಕೊಂಡು, ಭಾರತ ಅಥವಾ ಕಾಶ್ಮೀರಕ್ಕೆ ಭೇಟಿಯನ್ನೇ ಕೊಡದೆ ಇಂಗ್ಲೆಂಡಿನಲ್ಲಿ ಕೂತು ಕಾಶ್ಮೀರದಲ್ಲಿ ಎಲ್ಲಕ್ಕೂ ಪ್ರತಿಬಂಧವಿದೆ. ಅಲ್ಲಿ ಎಲ್ಲಕ್ಕೂ ಎಲ್ಲರ ಮೇಲೂ ದಬ್ಬಾಳಿಕೆಯು ನಡೆಯುತ್ತಿದೆ ಎಂಬ ಕಟ್ಟುಕತೆಗಳಿಂದ ಅಪಪ್ರಚಾರ ಮಾಡುವವರನ್ನು ವಿರೋಧಿಸುತ್ತೇನೆ.

ಧರ್ಮದ ಹೆಸರನ್ನು ಎತ್ತಿ ಭಾರತೀಯರಲ್ಲಿ ಒಬ್ಬರ ವಿರುದ್ಧ ಇನ್ನೊಬ್ಬರನ್ನು ಎತ್ತಿ ಕಟ್ಟುವುದನ್ನು ತಡೆಯಲು ನಾನು ನಿಮ್ಮನ್ನು ಆಗ್ರಹಿಸುತ್ತೇನೆ. ನಮ್ಮನ್ನು ಒಡೆದು ಬಿಡುವ ನಿಮ್ಮ ಪ್ರಯತ್ನವನ್ನು ನಾವು ವಿಫಲಗೊಳಿಸುವೆವು. ಈ ವರ್ಷವನ್ನು ನೀವು 'ಸಂಕಲ್ಪದಿವಸ'ದ ವರ್ಷವನ್ನಾಗಿ ಆಚರಿಸುತ್ತಿದ್ದೀರಿ. ಈ ಸಂದರ್ಭದಲ್ಲಾದರೂ ನನ್ನ ದೇಶವನ್ನು ಅಂತರಾಷ್ಟ್ರೀಯ ಮಾಧ್ಯಮಗಳ ಮೂಲಕವಾಗಲೀ ಅಂತರಾಷ್ಟ್ರೀಯ ಮಾನವಾಧಿಕಾರಗಳ

ವೇದಿಕೆಗಳಲ್ಲಾಗಲೀ ದೂಷಿಸುವುದನ್ನು ಈ ಭಾರತ ದ್ವೇಷಿಗಳು ನಿಲ್ಲಿಸುವರೆಂದು ಭಾವಿಸುವೆ. ಅನಾವಶ್ಯವಾದ ಕೆಲವೊಂದು ಅತಿ ಪ್ರಸಂಗಗಳನ್ನು ಆರಿಸಿಕೊಂಡು ಭಾರತವನ್ನು ವಿಭಜಿಸುವ ಪ್ರಯತ್ನಗಳು ನಿಮ್ಮ ನೆಲದಿಂದ ನಡೆಯುತ್ತಿದೆ.

ಇದನ್ನು ಪ್ರತಿಬಂಧಿಸಿಬಿಡಿ, ಭಯೋತ್ಪಾದನೆಯಿಂದಾಗಿ ಸಾವಿರಾರು ತಾಯಂದಿರು ಈಗಾಗಲೇ ತಮ್ಮ ಮಕ್ಕಳನ್ನು ಕಳೆದುಕೊಂಡಿರುವರು. ಇನ್ನು ನಮ್ಮ ಬೆನ್ನ ಹಿಂದೆ ಕತ್ತಿ ಹಿಡಿಯ ಬೇಡಿರಿ. ನಮ್ಮ ಕಾಶ್ಮೀರ ಸಮೂಹವು ಶಾಂತಿಯಿಂದ ಬಾಳಲು ಬಿಟ್ಟು ಬಿಡಿರಿ. ಧನ್ಯವಾದಗಳು. ಜೈಹಿಂದ್!!

ಯಾನ್ ಮಿರಾರನ್ನು ವೈವಿಧ್ಯಗಳ ರಾಯಭಾರಿ Diversity Ambassador of World ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಯುವಕರನ್ನು ಮೂಲ ಪ್ರವಾಹಕ್ಕೆ ಬರುವಂತೆ ಮಾಡುತ್ತ ಅವರ ಪ್ರಗತಿಗಾಗಿ ಪ್ರಯತ್ನಿಸುವ ಭಾರತೀಯ ಸೇನೆಯನ್ನೂ ಆಕೆ ಆ ಸಂದರ್ಭದಲ್ಲಿ ಅಭಿನಂದಿಸಿದಳು. ಮಾಧ್ಯಮಗಳ ಋಣಾತ್ಮಕ ವ್ಯಾಖ್ಯಾನಗಳನ್ನು ಎದುರಿಸಿ ಜಮ್ಮು ಕಾಶ್ಮೀರದ ವೈವಿಧ್ಯತೆಗಳ ಸುಂದರ ಚಿತ್ರವನ್ನು ಕಾಣಲು ನೀಡಿದ ಕೊಡುಗೆಗಾಗಿ ಆಕೆಯನ್ನು ಅಲ್ಲಿ ಅಭಿನಂದಿಸಲಾಯಿತು.




ಹಲವು ಗಣ್ಯರನ್ನು ಒಳಗೊಂಡು ಸಂಸದರು, ಸಮಾಜದ ಮುಖಂಡರು. ಪ್ರತಿನಿಧಿಗಳು ಪಾಲ್ಗೊಂಡ ಈ ಸಭೆಯು ಕಾಶ್ಮೀರವು ಭಾರತದ ಅವಿಭಾಜ್ಯ ಭಾಗವೆಂದು ಘೋಷಿಸುವ ಭಾರತದ ನಿಲುವನ್ನು ದೃಢಪಡಿಸಿತು. ಅಷ್ಟೇ ಅಲ್ಲ ಪಾಕಿಸ್ತಾನವು ತನ್ನ ವಶದಲ್ಲಿ ಇಟ್ಟುಕೊಂಡಿರುವ ಮಿರ್‌ಪುರ ಮುಜಾಫರಬಾದ್, ಗಿಲ್ಗಿಟ್, ಬಾಲ್ಟಿಸ್ತಾನ್ ಮೊದಲಾದ ಭಾರತದ ಪ್ರದೇಶಗಳನ್ನು ಮತ್ತೆ ಸ್ವಾಧೀನ ಪಡಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿತು. ಇಂಗ್ಲೆಂಡಿನ ಜಮ್ಮು ಮತ್ತು ಕಾಶ್ಮೀರ ಸ್ಟಡಿಸೆಂಟರ್ ಯೋಜಿಸಿದ ಈ ಕಾರ್ಯಕ್ರಮವು ಕಾಶ್ಮೀರ ಭಾಗದ ಸಮಜೋ ಸಾಂಸ್ಕೃತಿಕ ಮತ್ತು ರಾಜಕೀಯ ಚಿತ್ರಣದ ಸ್ಥೂಲ ಚಿತ್ರವನ್ನು ನೀಡಲೆಂದು ಆಯೋಜಿಸಲಾಗಿದ್ದಿತು.

ಯಾನ್‌ಮಿರಾಳ ಮಾತುಗಳು ಅನುರಣನಗೊಳ್ಳುತ್ತಿದ್ದು. ತನ್ನ ದೇಶದ ಕುರಿತು, ತನ್ನ ಜನರ ಕುರಿತು ಆಕೆಗೆ ಇರುವ ದೃಢ ನಿಷ್ಠೆಯನ್ನು ಪ್ರದರ್ಶಿಸುತ್ತಿದ್ದಿತು. ಆಕೆಯು ಭಯೋತ್ಪಾದನೆಯನ್ನು ವಿರೋಧಿಸುತ್ತಾ ಭಾರತ ವಿರೋಧಿ ಪ್ರಚಾರವನ್ನು ಖಂಡಿಸುತ್ತಾ ಆಡಿದ ಮಾತುಗಳು ಭಾರತದ ಅಖಂಡತೆಯನ್ನು ಆತ್ಮ ವಿಶ್ವಾಸವನ್ನು ಪ್ರತಿಧ್ವನಿಸುತ್ತಿದ್ದಿತು.

# ಸಮರಸತೆಯ ಸಂಕೇತ ಕೆರೆಗೋಡು ಶ್ರೀ ಅರ್ಜುನ ಧ್ವಜಸ್ತಂಭ

– **ವಿರೂಪಾಕ್ಷ,** ತಾಳಮೇಳನ ದೊಡ್ಡಿ, ಮಂಡ್ಯ

ಮಂಡ್ಯ ತಾಲ್ಲೂಕಿನ ಕೆರೆಗೋಡಿನಲ್ಲಿ ಶ್ರೀಹನುಮಂತನ ಭಕ್ತರಾದ ಕೆರೆಗೋಡಿನ ಬಸಂತ್, ಲಾಯರ್ ಯಶ್ವಂತ್, ಕೆ.ಪು.ರಮೇಶ್, ಶ್ರೀನಿವಾಸ್, ಕಾರ್ತಿಕ್, ಅಂಕಣದೊಡ್ಡಿಯ ಸಿದ್ದು, ತಾಳೆಮೇಳನದೊಡ್ಡಿಯ ವಿರುಪಾಕ್ಷರವರು ಸುತ್ತಲಿನ 30 ಗ್ರಾಮಗಳ ಎಲ್ಲಾ ರಾಜಕೀಯ ಪಕ್ಷಗಳ, ಹಿಂದು ಸಮಾಜದ ಎಲ್ಲಾ ಸಮುದಾಯದ, ಎಲ್ಲಾ ಭಾಷೆ ಮತ್ತು ಸಂಪ್ರದಾಯಗಳ ಜನರ ನಿರಂತರ ಭೇಟಿ ಸಮಾಲೋಚನೆಗಳ ನಂತರ ಒಂದು ಒಟ್ಟಾಭಿಪ್ರಾಯವನ್ನು ರೂಪಿಸಿದರು. ಇದಕ್ಕೆ ಒತ್ತಾಸೆಯಾಗಿ ನಿಂತವರು ಕೆರೆಗೋಡಿನ ಶ್ರೀರಾಮ ಭಜನಾ ಮಂಡಳಿ, ಶ್ರೀಗೌರಿ ಶಂಕರ ಸೇವಾಟ್ರಸ್ಟ್, ಮತ್ತು ಶ್ರೀಶ್ರೀಅಯ್ಯಪ್ಪ ಸೇವಾ ಸಮಿತಿ. ಈ ಸಾಮೂಹಿಕ ಉತ್ಸಾಹಕ್ಕೆ ವಿವಿಧ ಸಂಘ ಸಂಸ್ಥೆಗಳೂ ಕೈ ಜೋಡಿಸಿದವು. ಈ ಒಟ್ಟಾಭಿಪ್ರಾಯದಿಂದ ಕೆರೆಗೋಡಿನ ಬಸ್ ನಿಲ್ದಾಣದ ಹತ್ತಿರ ಹಲವು ವರ್ಷಗಳಿಂದ ಇದ್ದು ಶಿಥಿಲಗೊಳ್ಳುತ್ತಿರುವ ಧ್ವಜಸ್ತಂಭದ ಸ್ಥಾನದಲ್ಲಿ ಸುಂದರವಾದ ಹೊಸ ಧ್ವಜಸ್ತಂಭವನ್ನು ನಿರ್ಮಿಸಬೇಕೆಂದು ಸಾರ್ವಜನಿಕ ಸಂಕಲ್ಪವು ಮೂಡಿಬಂದಿತು.



***35 ವರ್ಷಗಳ ಹಿಂದೆ ಇದೇ ಧ್ವಜಸ್ಥಂಭಕ್ಕಾಗಿ ನಡೆದ ಗುದ್ದಲಿ ಪೂಜೆ***

ಊರಿನ ಹಿರಿಯರು, ಊರಿನ ಒಳಿತನ್ನು ಬಯಸುವವರೆಲ್ಲರೂ ಜೊತೆಗೂಡಿದ ಮೇಲೆ ಮೂವತ್ತು ಗ್ರಾಮಗಳ ಜನರ ಸಂಪರ್ಕ ಸುಲಭ ಸಾಧ್ಯವಾಯಿತು. ಈ ಸಂದರ್ಭದಲ್ಲಿ 30 ಗ್ರಾಮಗಳು ಸಮರಸರಾದುದೇ ವಿಶೇಷ ಬೆಳವಣಿಗೆ. 5 ರಿಂದ 6 ಲಕ್ಷರೂಪಾಯಿಗಳ ದೇಣಿಗೆ ಸಂಗ್ರಹವಾಗಬೇಕು. 108 ಅಡಿಗಳ ಎತ್ತರದ ಧ್ವಜ ಸ್ತಂಭದ ನಿರ್ಮಾಣವಾಗಬೇಕು. ಅದನ್ನು ಶ್ರೀಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಶ್ರೀಸಂಚಿಹೊನ್ನಮ್ಮ ರಂಗಮಂದಿರದ ಹತ್ತಿರ ಸ್ಥಾಪಿಸಬೇಕು. ದಸರಾ ಮೆರವಣಿಗೆಯಲ್ಲಿ ನಾಡದೇವತೆ ಶ್ರೀಚಾಮುಂಡೇಶ್ವರಿ ದೇವಿಯನ್ನು ಹೊರುತ್ತಿದ್ದ ಆನೆ ಅರ್ಜುನನ ನೆನಪಲ್ಲಿ ಧ್ವಜಸ್ತಂಭಕ್ಕೂ ಅದೇ ಹೆಸರಿಡಬೇಕೆಂದೂ ಸಮಾಲೋಚನೆಯಲ್ಲಿ ನಿರ್ಧಾರವಾಯಿತು. ಅದರ ಬಹ್ವಂಶಗಳು ಈಗಾಗಲೇ ಕಾರ್ಯರೂಪಕ್ಕೆ ಬಂದಿವೆ.

ಇನ್ನು ಲೌಕಿಕ ವ್ಯವಹಾರಗಳನ್ನು ಗಮನಿಸಬೇಕು ತಾನೆ? ಅದಕ್ಕಾಗಿ 27–11–2023ರಂದು

ಕೆರೆಗೋಡು ಗ್ರಾಮ ಪಂಚಾಯಿತಿಯ ಅಧ್ಯಕ್ಷರಿಗೂ ಅಭಿವೃದ್ಧಿ ಅಧಿಕಾರಿಗಳಿಗೂ ಸೇರಿ ಅನುಮತಿಯನ್ನು ಕೋರಿದ ಅರ್ಜಿ ಸಲ್ಲಿಸಲಾಯಿತು. ಊರಿನ ಸಜ್ಜನರೇ ಇದ್ದ ಪಂಚಾಯಿತಿಯು 29–11–2023ರ ತನ್ನ ಸಾಮಾನ್ಯ ಸಭೆಯಲ್ಲಿ ಅದಕ್ಕೆ 6/4 ಬಿಂದುವಿನ ವಿಷಯವಾಗಿ ಅನುಮೋದನೆಯನ್ನು ನೀಡಿತು. ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮವೆಂದೂ ಗ್ರಾಮ ಗ್ರಾಮಗಳ ಸಾಮರಸ್ಯವನ್ನು ಬೆಳೆಸಲು ಮಾದರಿ ಪ್ರಯೋಗವೆಂದೂ ಕಂಡು ಕೊಂಡ ಎಲ್ಲಾ 22 ಸದಸ್ಯರು ಸರ್ವಾನುಮತದಿಂದ ಈ ಕಾರ್ಯಕ್ರಮವನ್ನು ಹರಸಿದರು.

28–12–2023ರಂದು ಯೋಗಿಶ್ ಬಿನ್ ಲಿಂಗೇಗೌಡ ಮರಲಿಂಗನದೊಡ್ಡಿಯವರು ಹನುಮಾನ್ ಅರ್ಜುನ ಸ್ತಂಭದ ಅನುಮತಿಗಾಗಿ ಇದೇ ಪಂಚಾಯಿತಿಗೆ ಇನ್ನೊಂದು ಅರ್ಜಿಸಲ್ಲಿಸಿದರು. 29–12–2023ರಂದು ನಡೆದ ಸಾಮಾನ್ಯ ಸಭೆಯಲ್ಲಿ 7/6ನೇ ವಿಷಯವಾಗಿ ಅದಕ್ಕೆ ಅನುಮೋದನೆಯು ದೊರಕಿತು. ಎಲ್ಲಾ 22 ಸದಸ್ಯರು ಸರ್ವಾನುಮತಿಯಿಂದ ಬಸ್‌ಸ್ಟ್ಯಾಂಡ್ ಬಳಿ ಈ ಅರ್ಜುನ ಸ್ತಂಭವನ್ನು ನಿರ್ಮಿಸಲು ಅನುಮೋದಿಸಿದರು. ಮುಂದುವರಿದು 29–12–2023ರಂದು 7/6ರ ವಿಚಾರವಾಗಿ ಮಂಡ್ಯ ಶಾಸಕರಾದ ಪಿ. ಗಣಿಗ ರವಿಕುಮಾರ್‌ರವರನ್ನು ಎರಡು ಬಾರಿ ಭೇಟಿ ಮಾಡಲಾಯಿತು. ತಾಲ್ಲೂಕಿನ ಮೊದಲ ಪ್ರಜೆಯಂತಿರುವ ಅವರ ಸಹಕಾರವೂ ದೇಣಿಗೆಯೂ ಬೇಕು ತಾನೆ. ಅವರಂತೂ ಎರಡು ಬಾರಿಯೂ ತನ್ನ ಸಂಪೂರ್ಣ ಬೆಂಬಲವನ್ನು ಘೋಷಿಸಿದರು. ತಾವೂ ಧ್ವಜಸ್ಥಾನವನ್ನು ನೋಡಲು ಉತ್ಸುಕನಾಗಿರುವೆನು ಎಂದು ಹೇಳಿದರು.

ಒಮ್ಮೆ ಅವರ ಅನೌಪಚಾರಿಕ ಭೇಟಿಗಾಗಿ ಕೆರೆಗೋಡಿಗೆ ಬಂದಿದ್ದರು. ಆಗ ಶ್ರೀರಾಮ ಭಜನಾ ಮಂಡಳಿಯ ಹನುಮಭಕ್ತರು ಅವರನ್ನು ಭೇಟಿಯಾಗಿ ಧ್ವಜಸ್ಥಾನವನ್ನು ಒಮ್ಮೆ ನೋಡಿ ಆಶೀರ್ವದಿಸಲು ಕೇಳಿಕೊಂಡರು. ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದ ಹತ್ತಿರ ಬಸ್ ನಿಲ್ದಾಣವನ್ನು ಕಟ್ಟುವ ಉದ್ದೇಶವಿದ್ದುದರಿಂದ ಅದರ ಬದಲು ಸಂಚಿ ಹೊನ್ನಮ್ಮ ರಂಗಮಂದಿರದ ಬಳಿಯೇ ಈಗ ಶಿಥಿಲಗೊಂಡ ಧ್ವಜಸ್ತಂಭದ ಸ್ಥಾನದಲ್ಲೇ ಅರ್ಜುನ ಸ್ತಂಭವನ್ನು ನಿಲ್ಲಿಸಿ ಹನುಮ ಧ್ವಜವನ್ನು ಹಾರಿಸಿ ಎಂದರು. ಅವರ ಕಳಕಳಿಯು ಎಷ್ಟಿತ್ತು ಎಂದರೆ ಸಂಬಂಧಿಸಿದ ಅಧಿಕಾರಿಗಳಿಗೂ ಈ ಯೋಚನೆಗೆ ಅನುಮತಿ ನೀಡಲು ಸೂಚಿಸುವುದಾಗಿ ತಿಳಿಸಿದರು.

ಸಾರ್ವಜನಿಕ ಅಭಿಪ್ರಾಯಗಳಿಗೂ ಅದನ್ನು ಕಾರ್ಯರೂಪಕ್ಕೂ ತರುವಲ್ಲೂ ಒಂದಿಷ್ಟು ವ್ಯತ್ಯಾಸವಿರುತ್ತದೆ. ಅದರ ನಡುವೆ ಸುವರ್ಣ ಮಾಧ್ಯಮವೊಂದು ಇರುತ್ತದೆ. ಎಂದು ಮನಗಾಣಿಸಿದವರು ಪಿ. ಡಿ. ಒ ಗಳಾದ ಜೀವನ್‌ರವರು. ಶ್ರೀರಾಮ ಭಜನಾ ಮಂಡಳಿಯ ಸದಸ್ಯರು 29–12–2023ರ ನಡಾವಳಿಯ ಪ್ರತಿಯನ್ನು ಪಡೆಯಲು ಅವರನ್ನು ಭೇಟಿಯಾಗಿದ್ದರು. ಆಗ ಅವರು ಈ ಮೊದಲಿನ ತಾಂತ್ರಿಕ ವಿಚಾರಗಳನ್ನು ಹೇಳುತ್ತ; ನಡಾವಳಿಗಳನ್ನು ಇನ್ನೂ ಬರೆದಿಟ್ಟಿಲ್ಲ. ಆದುದರಿಂದ ಈಗ ನೀವು ಮತ್ತೊಮ್ಮೆ ನೋಂದಾಣಿಯಾದ ಟ್ರಸ್ಟ್ ಅಥವಾ ಸಂಘ ಸಂಸ್ಥೆಗಳ ಹೆಸರಿನಲ್ಲಿ ಇನ್ನೊಂದು ಅರ್ಜಿಯನ್ನು ನೀಡಿರಿ. ಅದರಲ್ಲಿ ತ್ರಿವರ್ಣ ಧ್ವಜವನ್ನು ಮತ್ತು ಕನ್ನಡ ಬಾವುಟವನ್ನು ಮಾತ್ರ ಧ್ವಜಸ್ತಂಭದಲ್ಲಿ ಹಾರಿಸುತ್ತೇವೆ ಎಂದು ಪ್ರಮುಖರೆಲ್ಲ ಸೇರಿ ಸಹಿಮಾಡಿ ಹೊಸ ಅರ್ಜಿಯನ್ನು ಕೊಡಿ ಎಂದು ಹೇಳಿದರು. ಇದು ಕೇವಲ ಅನುಮತಿಯ ಪ್ರಕ್ರಿಯೆಗಾಗಿ

ಮಾತ್ರವೇ ಇದ್ದು ನಂತರ ನೀವು ನಿಮಗಿಷ್ಟವಾದ ಧ್ವಜವನ್ನು ಹಾರಿಸಿಕೊಳ್ಳಬಹುದೆಂದು ಅವರು ಬಂದವರನ್ನು ಮನಗಾಣಿಸಿದರು.

ಈ ಹೊಸ ಸೂಚನೆಯನ್ನು ನಂಬಿದ ಶ್ರೀಗೌರಿ ಶಂಕರ ಸೇವಾಟ್ರಸ್ಟ್‌ನವರು ತ್ರಿವರ್ಣಧ್ವಜ ಮತ್ತು ಕನ್ನಡ ಬಾವುಟವನ್ನು ಹಾರಿಸಲು ಒಪ್ಪಿರುತ್ತೇವೆ ಹಾಗೂ ನಿಮ್ಮ ಷರತ್ತುಗಳಿಗೆ ಒಪ್ಪಿ ಸಹಿಮಾಡಿರುತ್ತೇವೆ ಎಂದು 03–01–2024ರಂದು ಮನವಿಯನ್ನು ಸಲ್ಲಿಸಿದರು. ಆದರೆ ನಂತರ ಪರಮಾಶ್ಚರ್ಯವೊಂದು ಜರುಗಿತು. ಗೌರಿಶಂಕರ ಸೇವಾಟ್ರಸ್ಟ್‌ನ 03–01–2024ರ ಅರ್ಜಿಯನ್ನು 29–12–2023ರ ಸಭೆಯಲ್ಲಿ 7/1 ವಿಷಯವಾಗಿ ತೆಗೆದುಕೊಂಡು ಸಾಮಾನ್ಯ ಸಭೆಯಲ್ಲಿ ಮಂಡಿಸಿ ಷರತ್ತುಗಳನ್ನು ಹಾಕಿ ಸರ್ವಾನುಮತದಿಂದ ತೀರ್ಮಾನಿಸಿದಂತಹ ನಡಾವಳಿಯನ್ನು ನಮೂದಿಸಲಾಯಿತು. ನಂತರ ಯೋಚಿಸಿ ಬರೆದ ಈ ನಡಾವಳಿಯಲ್ಲಿ

1) ಧ್ವಜಸ್ತಂಭದಲ್ಲಿ ರಾಷ್ಟ್ರಧ್ವಜ ಮತ್ತು ಕನ್ನಡಬಾವುಟ ಬಿಟ್ಟು ಬೇರೆ ಯಾವುದೇ ಧಾರ್ಮಿಕ, ರಾಜಕೀಯ ಪಕ್ಷಗಳ ಭಾವುಟವನ್ನು ಹಾರಿಸುವಂತಿಲ್ಲ.
2) ಧ್ವಜಾರೋಹಣವು ಬೆಳಿಗ್ಗೆ 7ರಿಂದ 8ಘಂಟೆಗೆ ನಡೆದು ಸಂಜೆ 5–30ರಿಂದ 5–45ರೊಳಗೆ ಅದನ್ನು ಇಳಿಸಬೇಕು.
3) ಈ ಕುರಿತು ಸರ್ಕಾರವು ಮಾಡುವ ಮಾರ್ಪಾಡಿಗೆ ಮತ್ತು ಸುತ್ತೋಲೆಗಳಿಗೆ ಬದ್ಧರಾಗಿರಬೇಕು.
4) ಯಾವುದೇ ಗಲಭೆಗಳಿಗೆ ಅವಕಾಶ ಕೊಡಬಾರದು.
5) ಧ್ವಜಾರೋಹಣ ಮಾಡುವ 6, 7 ದಿನಗಳಿಗೆ ಮುಂಚಿತವಾಗಿ ಪಂಚಾಯಿತಿ ಹಾಗೂ ಕೆರೆಗೋಡು ಪೊಲೀಸ್ ಠಾಣೆಗೆ ಮಾಹಿತಿ ನೀಡುವುದು ಎಂದು ಸಾಮಾನ್ಯ ಸಭೆಯ ವಿಚಾರವನ್ನು ನಡಾವಳಿಯಲ್ಲಿ ಹೊಸದಾಗಿ ನಮೂದಿಸಲ್ಪಟ್ಟಿತು.

ಗ್ರಾಮ ಪಂಚಾಯಿತಿಯು 05–01–2024ರ ಅನುಮತಿ ಪತ್ರದಲ್ಲಿ 29–12–2023ರ ಸಾಮಾನ್ಯ ಸಭೆಯ 7/1ರ ತೀರ್ಮಾನದಂತೆ ಮತ್ತು 05–01–2024ರಂದು ಮಾಡಿದ ಸ್ಥಳದ ಮಹಜರ್ ವರದಿಯಂತೆ ಧ್ವಜಸ್ತಂಭ ನಿರ್ಮಾಣ ಮಾಡಬಹುದು. ಆದರೆ ಮೇಲ್ಕಂಡ ಷರತ್ತುಗಳನ್ನು ಪಾಲಿಸಬೇಕು. ಎನ್ನುವ ಅನುಮತಿ ಪತ್ರವನ್ನು ಪಂಚಾಯಿತಿ ಸಿದ್ಧಪಡಿಸಿಕೊಂಡಿದೆ. (ನಂತರ 16–01–2024ರ ಪಂಚಾಯಿತಿ ನೋಟಿಸಿನಲ್ಲಿ ಶ್ರೀಗೌರಿಶಂಕರ ಸೇವಾಟ್ರಸ್ಟ್ (ರಿ) ನ ಅಧ್ಯಕ್ಷರಾದ ರಾಮಚಂದ್ರರಿಗೆ ನೀಡಿದ ಮಾಹಿತಿ ಪತ್ರದಲ್ಲಿ ಈ ಕೆಳಗಿನ ವಕ್ಕಣೆಯು ಇದ್ದಿತು.

'ತಾವುಗಳು 29–12–2023ರಂದು (ಆದರೆ ಮೂಲ ಅರ್ಜಿಯ ದಾಖಲಾತಿಯು 03–01–2024 ಎಂದು ಇದೆ) ಧ್ವಜಸ್ತಂಭ ನಿರ್ಮಿಸಲು ಅನುಮತಿ ಪತ್ರವನ್ನು ಕೇಳಿ ಅರ್ಜಿಸಲ್ಲಿಸಲಾಗಿದ್ದು 05–01–2024ರಂದು ಸ್ಥಳ ಪರಿಶೀಲಿಸಲಾಗಿ, ಗ್ರಾಮ ಪಂಚಾಯಿತಿಗೆ ಮುಚ್ಚಳಿಕೆ ಪತ್ರನೀಡಿ ಅನುಮತಿ ಪತ್ರ ಪಡೆಯಲು ತಿಳಿಸಲಾಗಿದ್ದರೂ ಸಹಾ ತಾವು ಕಾಮಗಾರಿಯನ್ನು ಪ್ರಾರಂಭಿಸಿರುವುದು ಕಂಡು ಬಂದಿರುತ್ತದೆ. ಹೀಗಾಗಿ ನೀವು ಗ್ರಾಮ ಪಂಚಾಯಿತಿಯಿಂದ ಅನುಮತಿ ಪಡೆದ ನಂತರ ಕಾಮಗಾರಿಯನ್ನು ಪ್ರಾರಂಭಿಸಬೇಕು. ಅಲ್ಲಿಯವರೆಗೆ ಕಾಮಗಾರಿಯನ್ನು ನಿಲ್ಲಿಸುವಂತೆ ಈ ಮೂಲಕ ನೋಟಿಸ್ ನೀಡಲಾಗಿದೆ.

ಇದು ಪಂಚಾಯಿತಿ ಡೆವಲಪ್‌ಮೆಂಟ್ ಆಫೀಸರ್ ಜೀವನ್ ಅವರು ಸೃಷ್ಟಿಸಿದ ನೋಟಿಸು. ಇದನ್ನು ಕೂಡಾ ಬರೆದು ಸಿದ್ಧಮಾಡಿಟ್ಟುಕೊಂಡಿರುವರು. ಜಾರಿಗೊಳಿಸದೆ ಇಟ್ಟಿರುವರು. ಇವರೇನೇ 17–01–2024ರಂದು 50ರೂ ಮೌಲ್ಯದ ಸ್ಟಾಂಪಿನ ಅಫಿಡೆವಿಟ್‌ನ್ನು ತಂದಿದ್ದು, ಅದರ ಖಾಲಿ ಹಾಳೆಗೆ ಶ್ರೀಗೌರಿಶಂಕರ ಸೇವಾಟ್ರಸ್ಟ್‌ನ ಪ್ರಮುಖರ ಸಹಿಯನ್ನು ಪಡೆದು ನಂತರ ಪಂಚಾಯಿತಿ ಕಛೇರಿಯಲ್ಲಿ ಮುಚ್ಚಳಿಕೆಯ ಪತ್ರದ ಭಾಗವನ್ನು ಮುದ್ರಿಸಿರುತ್ತಾರೆ.

ಕೆರೆಗೋಡು ಗ್ರಾಮ ಪಂಚಾಯಿತಿಯ ದಿನಾಂಕ 19–01–2024ರ ಅನುಮತಿ ಪತ್ರದಲ್ಲಿ ಮೇಲೆ ಹೇಳಿದ 1ರಿಂದ 5ರ ವರಗಿನ ಷರತ್ತಿಗಳಿಗೆ ಒಳಪಟ್ಟು ಧ್ವಜಸ್ತಂಭ ನಿರ್ಮಿಸಲು ಅನುಮತಿ ಪತ್ರನೀಡಲಾಗಿದೆ ಎನ್ನುವಂತಹ ಅನುಮತಿ ಪತ್ರವೊಂದು ಕೂಡ ಸಿದ್ಧವಾಗಿಟ್ಟುಕೊಳ್ಳಲಾಗಿದೆ ಎಂದು ಹೇಳಲಾಗಿದೆ.

ಇನ್ನು ಮುಂದಿನ ಭಾಗವು ಮತ್ತಷ್ಟು ಕುತೂಹಲಕಾರಿಯಾಗಿದೆ. ಅದನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

## ನಿಷೇಧಾತ್ಮಕ ಕಲ್ಪನೆಯ ದುರಂತ

ನಮ್ಮ ಜೀವನದಲ್ಲಿರಬೇಕಾದ ಶುದ್ಧ ರಾಷ್ಟ್ರೀಯ ಅಸ್ಮಿತೆಯು ಕಣ್ಮರೆಯಾಗಿರುವುದೇ ನಮ್ಮ ಇಂದಿನ ದುರವಸ್ಥೆಗೆ ಕಾರಣ. ಇದು ಕೇವಲ ಕಳೆದ 20 ವರ್ಷಗಳ ಕಥೆಯಲ್ಲ: ಅದಕ್ಕೂ ಹಿಂದಿನದು, ಬ್ರಿಟಿಷರು ಇಲ್ಲಿದ್ದಾಗ ಬ್ರಿಟಿಷ್ ವಿರೋಧವೇ ದೇಶಭಕ್ತಿ' ಎಂಬ ನಿಷೇಧಾತ್ಮಕ ಕಲ್ಪನೆಯನ್ನೇ ಜನಗಳಿಗೆ ಅರೆದು ಕುಡಿಸಲಾಗಿತ್ತು. ರಾಷ್ಟ್ರದ ಬಗೆಗೆ ಭಾವಾತ್ಮಕ ದೃಷ್ಟಿಕೋಣವೇ ಆಗಿರಲಿಲ್ಲ. "ರಾಷ್ಟ್ರದ ಕಲ್ಪನೆ ಇರುವ ಅಗತ್ಯವೇನು? ಅದಿಲ್ಲದೆಯೇ ನಾವು ಜೊತೆಗೂಡಿ ಕೆಲಸಮಾಡಬಲ್ಲೆವಲ್ಲ" ಎಂದು ಒಬ್ಬ ಮಹನೀಯರು ನನ್ನೊಡನೆ ಒಮ್ಮೆ ಹೇಳಿದರು. "ನಾವು ಒಂದು ರಾಷ್ಟ್ರದ ಅಂಗಗಳಾಗಿರದೆಯೇ ಜೊತೆಗೂಡಿ ಜೀವನ ನಡೆಸುವುದಾದರೂ ಹೇಗೆ?" ಎಂದು ಅವರನ್ನು ನಾನು ಕೇಳಿದೆ. ಅದಕ್ಕವರು 'ನಾವು ಸುಮ್ಮನೆ ಪರಸ್ಪರ ಸಹಕರಿಸಬಹುದು" ಎಂದು ಉತ್ತರವಿತ್ತರು. "ನಾವು ಪರಸ್ಪರ ಏಕೆ ಸಹಕರಿಸಬೇಕು?" ಎಂಬ ನನ್ನ ಮರುಪ್ರಶ್ನೆಗೆ ನಾವೆಲ್ಲರೂ ಹಿಂದುಸ್ಥಾನದಲ್ಲೇ ವಾಸಿಸುವುದರಿಂದ ಎಂದು ಅವರು ಉತ್ತರಿಸಿದರು. "ಹಿಂದುಸ್ಥಾನ ಎಂದರೆ ಏನು? ಕೇವಲ ನೆಲವೇ, ಪರ್ವತಗಳೇ, ನದಿಯ?" ಎಂದು ನಾನು ಮತ್ತೆ ಕೇಳಿದೆ. ಆದರೆ ಅವರ ವಿಚಾರಸರಣಿ ಅಲ್ಲಿಗೇ ನಿಂತಿತು. "ಹಿಂದುಸ್ಥಾನದಲ್ಲಿ ವಾಸಿಸುವ ಜನರು" ಎಂದು ಯಾರನ್ನು ಕುರಿತು ತಾನು ಹೇಳಿದೆ ಎಂಬುದು ಅವರಿಗೆ ಸ್ಪಷ್ಟವಿರಲಿಲ್ಲ. ಈ ದೇಶದಲ್ಲಿ ಯಾವ ರೀತಿಯ ಅಥವಾ ಯಾವ ಗುಂಪಿನ ಜನಗಳು ರಾಷ್ಟ್ರ ಆಗಬಲ್ಲರು?" ಎಂಬುದನ್ನು ಅವರು ಅರಿತಿರಲಿಲ್ಲ. ನಮ್ಮ ಜನಗಳು ನಂಬಿದ್ದ 'ಕೇವಲ ಬ್ರಿಟಿಷರನ್ನೇ ಹೊರಗಟ್ಟುವ ನಿಷೇಧಾತ್ಮಕ ರಾಷ್ಟ್ರೀಯ ಕಲ್ಪನೆಯೇ ಈ ಎಲ್ಲ ಗೊಂದಲಗಳಿಗೆ ಕಾರಣ.

– ಹೊ.ವೆ. ಶೇಷಾದ್ರಿ

## ಹಿಂದುವಾಣಿ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ
## ಪ್ರಾರೂಪ 4 (ವಿಧಿ 8)

| | | | |
|---|---|---|---|
| 1. | ಪ್ರಕಟಣೆಯ ಸ್ಥಳ | – | ಬೆಂಗಳೂರು |
| 2. | ಪ್ರಕಟಣೆಯ ನಿಯತಕಾಲಿಕತೆ | – | ಮಾಸಿಕ |
| 3. | ಮುದ್ರಕರ ಹೆಸರು | – | ಎನ್. ಪಿ. ಮುನಿರಾಜು |
| | ಭಾರತ ಪ್ರಜೆಯೇ? | – | ಹೌದು |
| | ವಿಳಾಸ | – | 91 ಧರ್ಮಶ್ರೀ, ಶಂಕರಪುರ, ಬೆಂಗಳೂರು–560 004 |
| 4. | ಪ್ರಕಾಶಕರ ಹೆಸರು | – | ಎನ್. ಪಿ. ಮುನಿರಾಜು |
| | ಭಾರತ ಪ್ರಜೆಯೇ? | – | ಹೌದು |
| | ವಿಳಾಸ | – | 91 ಧರ್ಮಶ್ರೀ, ಶಂಕರಪುರ, ಬೆಂಗಳೂರು–560 004 |
| 5. | ಗೌ ॥ ಸಂಪಾದಕರ ಹೆಸರು | – | ಟಿ.ಎ.ಪಿ. ಶೆಣೈ |
| | ಭಾರತ ಪ್ರಜೆಯೇ? | – | ಹೌದು |
| | ವಿಳಾಸ | – | 91 ಧರ್ಮಶ್ರೀ, ಶಂಕರಪುರ, ಬೆಂಗಳೂರು–560 004 |
| 6. | ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಗಳ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳದ ಶೇ. 1ಕ್ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರಾದವರ ಹೆಸರು/ ವಿಳಾಸ | – | ವಿಶ್ವ ಹಿಂದು ಪರಿಷದ್ ಕರ್ನಾಟಕ ಟ್ರಸ್ಟ್ (ರಿಜಿಸ್ಟರ್ಡ್ ಸಂಸ್ಥೆ) 91 ಧರ್ಮಶ್ರೀ, ಶಂಕರಪುರ ಬೆಂಗಳೂರು–560 004 |

**ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು ನಾನು. ಎನ್.ಪಿ. ಮುನಿರಾಜು ಘೋಷಿಸುತ್ತೇನೆ.**

ಬೆಂಗಳೂರು
ದಿನಾಂಕ : 29.02.2024

ಪ್ರಕಾಶಕ ಸಹಿ/–
ಎನ್. ಪಿ. ಮುನಿರಾಜು,
ಬೆಂಗಳೂರು – 560 004

# ಶಕ್ತಿಯಿದ್ದಾಗ ದೇಶದ್ರೋಹ; ಅಶಕ್ತಳಾದಾಗ ಶರಣಾಗತಿ

ಶಮೀಮಾಬೇಗಮ್ ಬ್ರಿಟಿಷ್ ಪ್ರಜೆಯಾಗಿದ್ದಳು. ಆಗ ಆಕೆಗೆ 15ವರ್ಷ ವಯಸ್ಸು. ಇಸ್ಲಾಮಿ ಜಗತ್ತನ್ನು ಸೃಷ್ಟಿಮಾಡಲು ಹೊರಟ ಸಿರಿಯಾದ ಐ. ಎಸ್, ಪ್ರಚಾರದಿಂದ ಆಕರ್ಷಿತಳಾದ ಆಕೆ 9 ವರ್ಷಗಳ ಹಿಂದೆ ಇಸ್ಲಾಂ ಯೋಧೆಯಾಗಿ ಸಿರಿಯಾಗೆ ಹೋದಳು. 2015ರ ಫೆಬ್ರವರಿಯಲ್ಲಿ ಆಕೆಯೊಂದಿಗೆ ಇನ್ನಿಬ್ಬರು ಹುಡುಗಿಯರೂ, ಲಂಡನ್‌ನಿಂದ ನಾಪತ್ತೆಯಾಗಿ ನಂತರ ಸಿರಿಯಾದಲ್ಲಿ ಇರುವರೆಂದು ತಿಳಿದುಬಂದಿತು. ಇಸ್ಲಾಮಿಗಾಗಿ ಹೋರಾಡುವ ತರುಣರನ್ನು ಮದುವೆಯಾಗಿ ತಮ್ಮ ನೈಜ ಇಸ್ಲಾಂ ಪ್ರೀತಿಯನ್ನು ಜಗತ್ತಿಗೆ ತೋರಿಸಿಕೊಡುವ ಹುಚ್ಚು ಹಿಡಿದು ಮನೆಬಿಟ್ಟು ದೇಶ ಬಿಟ್ಟು ಹೋಗುವಂತೆ ಮಾಡಿತು. ಈ ಶಮೀಮ್ ಬೇಗಂ; ಸಿರಿಯಾದಲ್ಲಿ ಐ. ಎಸ್ ಭಯೋತ್ಪಾದಕರಲ್ಲಿ ಒಬ್ಬ ಹಾಲೆಂಡ್ ದೇಶದವನನ್ನು ಮದುವೆಯಾದಳು. ಮೂರು ಮಕ್ಕಳನ್ನು ಹೆತ್ತಳು. ಆ ಮೂವರೂ ಬಾಲ್ಯದಲ್ಲೇ ಸಾವನಪ್ಪಿದವು.

2019ರಲ್ಲಿ ಆಕೆಯು ಸಿರಿಯಾದಲ್ಲಿರುವುದು ತಿಳಿದು ಬಂದಿತು. ಆ ಕೂಡಲೇ ಬ್ರಿಟನ್ ದೇಶವು ಆಕೆಯ ಬ್ರಿಟಿಷ್ ಪೌರತ್ವವನ್ನು ಹಿಂತೆಗೆದುಕೊಂಡಿತು. ಈಗ ಆಕೆಯು ಸಿರಿಯಾದ ನಿರಾಶ್ರಿತ ಶಿಬಿರದಲ್ಲಿದ್ದು ಮತ್ತೆ ಬ್ರಿಟನ್ನಿಗೆ ಮರಳಬೇಕೆಂದಿರುವಳು. ಆದರೆ ಕಳೆದ ವರ್ಷ ಬ್ರಿಟಿಷ್ ಟ್ರೆಬ್ಯೂನಲ್ ದೇಶದ ಭದ್ರತೆಯ ಕಾರಣದಿಂದ ಆಕೆಯು ಬ್ರಿಟನ್ನಿಗೆ ಮರಳುವುದನ್ನು ನಿರ್ಬಂಧಿಸಿತು. ಈ ತೀರ್ಪಿನ ವಿರುದ್ಧ ಮಾಡಿದ ಮೇಲ್ಮನವಿಯನ್ನು ನ್ಯಾಯಾಲಯವು ಈಗ ತಳ್ಳಿಹಾಕಿದೆ. ತಮ್ಮ ತೀರ್ಪು ಕಠಿಣವೋ ಅಥವಾ ಅತಿ ಕಠಿಣವೋ ಎಂಬುದನ್ನು ತಾವು ಗಣನೆಗೆ ತೆಗೆದುಕೊಳ್ಳುವುದಿಲ್ಲವೆಂದೂ ಅವರು ಹೇಳುತ್ತಾ ದೇಶಕ್ಕೆ ಎರಡು ಬಗೆದವರ ಬಗ್ಗೆ ತೀರ್ಪು ಕಠಿಣವಿರಲೇ ಬೇಕೆಂದು ಪರೋಕ್ಷವಾಗಿ ಸಾರಿದರು. ತಾರುಣ್ಯದಲ್ಲಿ ದೇಶದ ವಿರುದ್ಧ ವಿದ್ರೋಹವನ್ನು ಸಾರಿದವರು ಕೈಲಾಗದ ಹಂತದಲ್ಲಿ ದೇಶದ ಪ್ರಜೆಯಾಗಲು ಬಯಸಿ ಮತ್ತೆ ಸಮಯ ಸಾಧಿಸುವುದು ಎಂದೆಂದೂ ಸಾಧ್ಯವಾಗಬಾರದೆಂದು ಬ್ರಿಟಿಷ್ ನ್ಯಾಯಾಲಯವು ಹೇಳಿದೆ.



# ಎನ್.ಜಿ.ಓ. ಮತ್ತು ವಿದೇಶಿ ದೇಣಿಗೆಗಳು

ಕಳೆದ ತಿಂಗಳು ಸಿ.ಬಿ.ಐ.ಯು ಹರ್ಷಮಂದರ್ ಎನ್ನುವ ಮಾನವಾಧಿಕಾರ ರಕ್ಷಣಾ ಕಾರ್ಯಕರ್ತರ ವಿರುದ್ಧ ವಿದೇಶಿ ದೇಣಿಗೆ (ಎಫ್.ಸಿ.ಆರ್.ಎ.) ನಿಯಮಗಳ ಉಲ್ಲಂಘನೆಗಾಗಿ ಪ್ರಾಥಮಿಕ ಮಾಹಿತಿ ವರದಿ (ಎಫ್.ಐ.ಆರ್.) ಯನ್ನು ನೀಡಿತು. ಅವರ ಸೆಂಟರ್ ಫಾರ್ ಇಕ್ವಿಟಿ ಸ್ಟಡೀಸ್ ಎನ್ನುವ ಸರ್ಕಾರೇತರ ಸೇವಾ ಸಂಸ್ಥೆ (ಎನ್.ಜಿ.ಓ.) ಯು ಈ ಕಾನೂನು ಬಾಹಿರ ಕೃತ್ಯದಲ್ಲಿ ಭಾಗಿಯಾಗಿದ್ದಿತು. ಅವರ ಈ ಎನ್.ಜಿ.ಓ. ಕಾನೂನಿಗೆ ವಿರುದ್ಧವಾಗಿ ಕೆಲವು ವ್ಯಕ್ತಿಗಳಿಗೆ ಅವರ ಸಂಬಳ ಭತ್ಯೆಗಳೊಂದಿಗೆ ಇನ್ನಷ್ಟು ಮೊತ್ತವನ್ನು ನೀಡಿದ್ದಿತು. ಈ ಎನ್.ಜಿ.ಓ. ಅಲ್ಲದೆ ಕಳೆದ ತಿಂಗಳು ದೆಹಲಿಯ ಸೆಂಟರ್ ಫಾರ್ ಪಾಲಿಸಿ ರೀಸರ್ಚ್ ಮತ್ತು ವರ್ಲ್ಡ್ ವಿಜನ್ ಇಂಡಿಯಾ ಎನ್ನುವ ಸಂಸ್ಥೆಗಳ ವಿದೇಶಿ ದೇಣಿಗೆಯನ್ನು ಸ್ವೀಕರಿಸುವ ಅನುಮತಿಯನ್ನು ಕೂಡಾ ಹಿಂದೆಗೆದುಕೊಂಡಿತ್ತು. 2023ರಲ್ಲಿ ಓಕ್ಸ್‌ಫಾಮ್ ಇಂಡಿಯಾ ಎನ್ನುವ ಸಂಸ್ಥೆಯ ವಿಚಾರಣೆಯನ್ನು ಕೂಡಾ ಸಿ.ಬಿ.ಐ. ಇದೇ ಕಾನೂನಿನನ್ವಯ ಮಾಡಿದ್ದಿತು. 2023 ದಶಂಬರದಲ್ಲಿ ನ್ಯೂಸ್‌ಕ್ಲಿಕ್ ಎನ್ನುವ ವಾರ್ತಾ ವೇದಿಕೆಯ ಬಗ್ಗೆಯೂ ವಿಚಾರಣೆಯನ್ನೂ ಪರಿಶೋಧನೆಯನ್ನೂ ಸಿ.ಬಿ.ಐ ನಡೆಸಿದ್ದಿತು.

ಎನ್.ಜಿ.ಓ.ಗಳು ಸ್ವೀಕರಿಸುವ ದೇಣಿಗೆಗಳ ಬಗ್ಗೆ ಸರ್ಕಾರವು ಈ ಕಾನೂನಿನ ಮೂಲಕ ಅವು ಸಕ್ರಮವಾಗಿರುವುದನ್ನು ದೃಢಗೊಳಿಸುತ್ತದೆ. ರಾಷ್ಟ್ರದ ಹಿತಾಸಕ್ತಿಗಳಿಗೆ ವಿರುದ್ಧವಾದ ಕಾರ್ಯಕ್ರಮಗಳಿಗೆ ಇಂತಹ ವಂತಿಗೆಯ ಹಣವು ವಿನಿಯೋಗಗೊಳ್ಳಬಾರದೆನ್ನುವುದೇ ಇದರ ಹಿಂದಿನ ಉದ್ದೇಶವಾಗಿರುತ್ತದೆ. ಇಂತಹ ಸಂಘ ಸಂಸ್ಥೆಗಳು ವಿದೇಶಿ ಹಣವನ್ನು ಸ್ವೀಕರಿಸಲು ಇಚ್ಛಿಸುವುದಾದರೆ ಈ ಕಾನೂನಿನ ಅಡಿಯಲ್ಲಿ ನೊಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಈ ನಿಯಮಗಳನ್ನು ಉಲ್ಲಂಘಿಸಿದ ಕಾರಣದಿಂದಾಗಿಯೇ ಈ ವರೆಗೆ 20ಸಾವಿರ ಸಂಘ ಸಂಸ್ಥೆಗಳ ಅನುಮತಿಯನ್ನು ಸ್ಥಗಿತಗೊಳಿಸಲಾಗಿದೆ.

ಕೆಲವು ಸಂಸ್ಥೆಗಳ ಅನುಮತಿಯನ್ನು ಈ ಕಾನೂನಿನ ನಿಯಮಗಳ ಉಲ್ಲಂಘನೆಗಾಗಿ ಹಿಂತೆಗೆದುಕೊಂಡಿದ್ದರೆ ಇನ್ನು ಕೆಲವು ಸಂಸ್ಥೆಗಳು ತಮ್ಮ ಸಂಸ್ಥೆಗಾಗಿ ಹಲವು ಕಡೆ ನೋಂದಾಯಿಸಿರುವುದಕ್ಕಾಗಿ ಈ ಕ್ರಮವನ್ನು ಜರಗಿಸಲಾಗಿದೆ. ಈ ಅನುಮತಿಯನ್ನು ಐದು ವರ್ಷಗಳಿಗೊಮ್ಮೆ ನವೀಕರಿಸಲೇ ಬೇಕಾಗಿದೆ. 2019 ಮತ್ತು 2021ರ ನಡುವೆ ಈ ನವೀಕರಣದ ಅನುಮತಿಯನ್ನು 783 ಸಂಸ್ಥೆಗಳಿಗೆ ನಿರಾಕರಿಸಲಾಗಿದೆ. 2015ರಲ್ಲಿ ವಿವಿಧ ಉಲ್ಲಂಘನೆಗಳಿಗಾಗಿ 10ಸಾವಿರ ಸಂಸ್ಥೆಗಳ ಅನುಮತಿಯನ್ನು ಹಿಂದೆಗೆದುಕೊಳ್ಳಲಾಗಿದ್ದಿತು.

ಅತಿ ಹೆಚ್ಚು ನಿರ್ಬಂಧಗಳನ್ನು ವಿಧಿಸಿದ ಸಂಸ್ಥೆಗಳು ತಮಿಳುನಾಡಿನವಾಗಿವೆ. ಅಲ್ಲಿಯ 2580 ಸಂಘಸಂಸ್ಥೆಗಳು ಈ ನಿರ್ಬಂಧಗಳಿಗೆ ಒಳಗಾಗಿವೆ. 1576 ಸಂಸ್ಥೆಗಳ ಅನುಮತಿಯು ನವೀಕರಣವಾಗದೆ ಉಳಿದಿವೆ. ಇಷ್ಟಾಗಿಯೂ ತಮಿಳುನಾಡಿನಲ್ಲಿ 2500ಕ್ಕು ಹೆಚ್ಚು ಸಂಸ್ಥೆಗಳು ಇಂತಹ ದೇಣಿಗೆಯನ್ನು ಸ್ವೀಕರಿಸುತ್ತಿದ್ದು ಇದು ಕೂಡಾ ದೇಶದಲ್ಲಿ ಅತಿ ಹೆಚ್ಚಿನ ಸಂಖ್ಯೆಯಾಗಿದೆ. ಎಫ್.ಸಿ.ಆರ್.ಎ. ಅನುಮತಿಯಲ್ಲಿ ಶೇಕಡಾ 50ರಷ್ಟು ಸ್ಥಗಿತಗೊಂಡ ಸಂಸ್ಥೆಗಳು ಉತ್ತರ ಪ್ರದೇಶಕ್ಕೆ ಸೇರಿದುದಾಗಿವೆ. ಪಶ್ಚಿಮ ಬಂಗಾಳದ 40% ಸಂಸ್ಥೆಗಳು ಈ

ಕ್ರಮಕ್ಕೆ ಒಳಗಾಗಿವೆ. ಶಿಕ್ಷಣ ಮತ್ತು ಸಾಮಾಜಿಕ ಸಂಸ್ಥೆಗಳ ಸಂಖ್ಯೆ ಗಮನಾರ್ಹವಾಗಿದ್ದು; ದಾರ್ಮಿಕ ಸಂಸ್ಥೆಗಳಲ್ಲಿ ಕ್ರೈಸ್ತಮತಕ್ಕೆ ಸಂಬಂಧಪಟ್ಟವು ಬಹು ಸಂಖ್ಯೆಯಲ್ಲಿವೆ.

ಹಣಪಡೆಯುವ ಮೊತ್ತವನ್ನು ಗಮನಿಸಿದರೆ ತಮಿಳುನಾಡಿನ ಸಂಸ್ಥೆಗಳು ಇಲ್ಲಿ ಮೂರನೆ ಸ್ಥಾನವನ್ನು ಪಡೆಯುತ್ತವೆ. 2022ರಲ್ಲಿ ಅವು 2507 ಕೋಟಿ ರೂಪಾಯಿಗಳನ್ನು ಪಡೆದಿವೆ. ದೆಹಲಿಯ ಸಂಘ ಸಂಸ್ಥೆಗಳು ಈ ಕಾಲದಲ್ಲಿ 5809 ಕೋಟಿ ರೂಪಾಯಿಗಳನ್ನು ಪಡೆದು ದೇಶದಲ್ಲಿ ಮೊದಲ ಸ್ಥಾನದಲ್ಲಿವೆ. ಎರಡನೆ ಸ್ಥಾನವು ಕರ್ನಾಟಕದ್ದಾಗಿದ್ದು ಅದು 3140 ಕೋಟಿ ರೂಪಾಯಿಗಳನ್ನು ಪಡೆದಿದೆ. ಗುಜರಾತ್ ಮತ್ತು ತೆಲಂಗಾಣಗಳೂ 100 ಕೋಟಿ ರೂಪಾಯಿಗಳನ್ನು ಸ್ವೀಕರಿಸಿವೆ. ಧಾರ್ಮಿಕ ಕಾರ್ಯಕ್ಕಾಗಿ ಕ್ರೈಸ್ತ ಸಂಸ್ಥೆಗಳು 2700 ಕೋಟಿಗಳಷ್ಟು ದೇಣಿಗೆಯನ್ನು ಪಡೆದಿದ್ದರೆ ಕ್ರೈಸ್ತೇತರ ಸಂಸ್ಥೆಗಳು 600ಕೋಟಿ ರೂಪಾಯಿಗಳನ್ನು ಪಡೆದಿವೆ.

## ಹಿಂದುತ್ವ – ರಾಷ್ಟ್ರೀಯತ್ವದ ಅಳತೆಗೋಲು

ಸ್ವಾತಂತ್ರ್ಯ ಬಂದ ನಂತರ ನಾವು ಹೇಗೆ ಜೀವಿಸಬೇಕು ಎಂಬ ಭವಿಷ್ಯದ ಚಿತ್ರ ನಮಗಿರಲಿಲ್ಲ. ಸ್ವರಾಜ್ಯ ಪದದ ಪೂರ್ಣಾರ್ಥ ತಿಳಿಯದೆಯೇ ನಾವು ಅದನ್ನು ನಮ್ಮ ಗುರಿಯಾಗಿ ಇಟ್ಟುಕೊಂಡಿದ್ದೆವು. ಮುಸಲ್ಮಾನರು ಅದನ್ನು ಮುಸ್ಲಿಂಲೀಗಿನ ರಾಜ್ಯ ಎಂದು ಅರ್ಥಮಾಡಿಕೊಂಡು 'ಪಾಕಿಸ್ತಾನ' ಬೇಕೆಂದು ಹಟ ಹಿಡಿದರು. ಹಿಂದುಗಳಾದರೋ ಆಗ ತಮ್ಮೆಲ್ಲರ ಐಕ್ಯತೆಯ ಸೂತ್ರವನ್ನೇ ಮರೆತಿದ್ದರು. ಅದಕ್ಕಾಗಿ ನಮ್ಮೆಲ್ಲರನ್ನೂ ಒಂದಾಗಿ ಸೇರಿಸಬಲ್ಲ ಒಂದು ಧ್ಯೇಯವಾಕ್ಯ ನಮಗೀಗ ಅವಶ್ಯಕವಿದೆ. ಅದು ಅತಿವ್ಯಾಪ್ತಿಯೂ ಆಗಿರಬಾರದು, ಅವ್ಯಾಪ್ತಿಯೂ ಆಗಿರಬಾರದು. ನಮ್ಮ ಗತ ಇತಿಹಾಸವನ್ನು ಹೊಕ್ಕು ನೋಡಿದಲ್ಲಿ "ಹಿಂದು' ಎನ್ನುವ ಹೆಸರು ಈ ವ್ಯಾಖ್ಯೆಗೆ ಒಪ್ಪುತ್ತದೆ. ಸ್ವಾತಂತ್ರ್ಯ ಹೋರಾಟ ಸಮಯದಲ್ಲಿನ ನಮ್ಮ ನಾಯಕರು 'ಹಿಂದು–ಮುಸ್ಲಿಂ' ಐಕ್ಯ ಎಂಬ ಘೋಷಣೆಯನ್ನು ಸೃಷ್ಟಿಸಿದರಷ್ಟೆ. 'ಹಿಂದು–ಮುಸ್ಲಿಂ' ಐಕ್ಯಕ್ಕೆ ಪೂರ್ವಭಾವಿ ಅವಶ್ಯಕತೆಯಾಗಿ 'ಹಿಂದುಗಳ ಐಕ್ಯತೆ ಇರಬೇಕು ಎಂಬಂಶವೇ ಅವರಿಗೆ ಮರೆಯಾಗಿತ್ತು.

## ಕಾರ್ಯಕರ್ತರ ಗಮನಕ್ಕಾಗಿ

ಹಿಂದುವಾಣಿಗಾಗಿ ಪರಿಷತ್ತಿನ ಕಾರ್ಯಕ್ರಮಗಳ ಭಾವಚಿತ್ರಗಳನ್ನು ಕಳುಹಿಸುವಾಗ:

1. ಭಾವಚಿತ್ರಗಳು ಜೆ.ಪಿ.ಜಿ. ಸ್ವರೂಪ (jpg Format) ದಲ್ಲಿರಬೇಕು.
2. ಭಾವಚಿತ್ರಗಳನ್ನೆಲ್ಲಾ ಒಂದು ಕಡೆ ಸೇರಿಸಿ (Combined) ಕಳುಹಿಸಬಾರದು. ಪ್ರತ್ಯೇಕವಾಗಿ ಕಳುಹಿಸಬೇಕು.
3. ಚಲಿಸುವ ಚಿತ್ರಗಳಾಗಿರದೆ (Vidio), ನಿಶ್ಚಲ (Still Photo) ಭಾವಚಿತ್ರಗಳಾಗಿರಲಿ.

# ಬುದ್ಧಿ ಬಂದಿತು

ನಾಯಿ ಮರಿಯ ಬಾಯಿಯಲ್ಲಿ
ರೊಟ್ಟಿ ಚೂರು ಇದ್ದಿತು...

ಕಚ್ಚಿಕೊಂಡು ಓಡಿ ಓಡಿ
ನದಿಯ ಬಳಿಗೆ ಬಂದಿತು...


ಸೇತುವೆಯ ದಾಟುವಾಗ
ಬಾಗಿ ನೀರು ನೋಡಿತು...

ತನ್ನ ನೆರಳ ಕಂಡು ಬೇರೆ
ನಾಯಿಯೆಂದುಕೊಂಡಿತು...

ಅದನ್ನು ಕಂಡು ಬೊಗಳಿದಾಗ
ರೊಟ್ಟಿ ನದಿಗೆ ಬಿದ್ದಿತು...

ದುಃಖದಿಂದ, ಹಸಿವೆಯಿಂದ
ನಾಯಿ ಮರಿಯು ಅತ್ತಿತು...

ಹೊಟ್ಟೆ ಕಿಚ್ಚು ಕೆಟ್ಟದೆಂದು
ತಿಳಿದುಕೊಂಡು ಬದುಕಿತು...



**ಇಂದಿರಾ ಹಾಲಂಬಿ**
ಕನ್ನಡ ಮಕ್ಕಳ ಕಂಠಾಭರಣ ಸಂಕಲನದಿಂದ
ಸಂದೀಪ ಸಾಹಿತ್ಯ, ಅತ್ರಾಡಿ (ಉಡುಪಿ ಜಿಲ್ಲೆ)

# ಅನಾವಶ್ಯಕ ಮಾತು ಅಪಾಯಕಾರಿ

ಒಂದು ಕೊಳದಲ್ಲಿ ಎರಡು ಹಂಸಗಳಿದ್ದವು. ಅಲ್ಲೇ ಇದ್ದ ಆಮೆಯು ಅವುಗಳ ಸ್ನೇಹಿತನಾಗಿದ್ದಿತು. ಬೇಸಿಗೆಯಲ್ಲಿ ಕೊಳದ ನೀರು ಬತ್ತಿಹೋಗಲು ಶುರುವಾಯಿರತು. ಅದನ್ನು ಕಂಡ ಹಂಸಗಳು 'ನಾವಿನ್ನು ಇಲ್ಲಿ ಇರುವುದು ಬೇಡ. ಹಿಮಾಲಯದ ಕಡೆ ಹೋಗೋಣ. ಅಲ್ಲಿ ನೀರು ಯಾವಾಗಲೂ ಇರುತ್ತದೆ; ಬತ್ತುವುದೇ ಇಲ್ಲ. ನಾವು ಅಲ್ಲಿ ಈಜಾಡಿಕೊಂಡು ಇರಬಹುದು' ಎಂದು ಮಾತಾಡಿಕೊಂಡವು.

ಅದನ್ನು ಕೇಳಿದ ಆಮೆಯು 'ನಿಮ್ಮೊಡನೆ ನಾನು ಬರುತ್ತೇನೆ ನನಗೆ ಒಬ್ಬನೇ ಇರಲು ಬೇಸರ' ಎಂದು ಹೇಳಿತು. ಅದಕ್ಕೆ ಹಂಸಗಳು ನಿನ್ನನ್ನು ನಾವು ಎತ್ತಿಕೊಂಡು ಹೋಗಬೇಕು. ಅಷ್ಟೇ ಅಲ್ಲ ನೀನು ಬಹಳ ಮಾತನಾಡುತ್ತೀಯ. ನಿನ್ನ ಮಾತು ಕೇಳುತ್ತಾ ನಾವು ದಾರಿ ತಪ್ಪಬಹುದು. ನೀನು ಬರುವುದು ಬೇಡವೇ ಬೇಡ ಎಂದವು.

ಆಮೆಯು 'ಇಲ್ಲ, ಇಲ್ಲ.' ನಾನು ತುಟಿ ಬಿಚ್ಚದೆ ಸುಮ್ಮನೆ ಇರುತ್ತೇನೆ. ದಯವಿಟ್ಟು ನನ್ನನ್ನು ಕರೆದುಕೊಂಡು ಹೋಗಿ ಎಂದು ಅಳುತ್ತಾ ಬೇಡಿಕೊಂಡಿತು. 'ಅಯ್ಯೋ' ಎಂದುಕೊಂಡು ಹಂಸಗಳು ಒಪ್ಪಿಕೊಂಡವು. ಅವು ಒಂದು ಕೋಲನ್ನು ತಂದು ಅದರ ಎರಡು ತುದಿಗಳನ್ನು ತಾವು ಕಚ್ಚಿಕೊಂಡು ಹಾರುತ್ತೇವೆ. ನೀನು ಅದರ ನಡುವೆ ಕೋಲನ್ನು ಕಚ್ಚಿಕೊಂಡು ಸುಮ್ಮನೆ ಇದ್ದು ಬಿಡು. ಬಾಯಿಬಿಟ್ಟರೆ ನೀನು ಕೆಳಗೆ ಬೀಳುತ್ತೀಯಾ ಜಾಗ್ರತೆ' ಎಂದವು.

ಹೀಗೆ ಕೋಲಿನೊಟ್ಟಿಗೆ ಹಂಸಗಳು ಅವುಗಳ ನಡುವೆ ಆಮೆ ಆಕಾಶ ಮಾರ್ಗದಲ್ಲಿ ಹೋಗುತ್ತಿದ್ದವು. ಒಂದು ಊರಿನಲ್ಲಿ ಇದನ್ನು ನೋಡಿದ ಒಬ್ಬನು 'ಇದೇನು? ಆಮೆಯನ್ನು ಹಂಸಗಳು ಕರೆದುಕೊಂಡು ಹೋಗುತ್ತವೆ. ನೋಡ್ರೋ' ಎಂದು ಎಲ್ಲರನ್ನೂ ಕರೆಯುತ್ತಿದ್ದನು. ಆಮೆಗೆ ಸಿಟ್ಟು ಬಂದಿತು. 'ನಾವು ಹಾರಿದರೆ' ನಿಮಗೇನು ಎಂದು ಹೇಳಲು ಬಾಯಿತೆಗೆಯುತ್ತಿದ್ದಂತೆ ಡಬ್ ಎಂದು ನೆಲಕ್ಕೆ ಬಿದ್ದಿತು.




# ನಿಮಗೆಷ್ಟು ಗೊತ್ತು

– ಬಿ.ಈ. ಸೀತಾಲಕ್ಷ್ಮೀ, ಯು.ಎಸ್.ಎ.

1) 'ಗ್ರ್ಯಾಂಡ್ ಓಲ್ಡ್ ಮ್ಯಾನ್ ಆಫ್ ಇಂಡಿಯಾ' ಎಂಬ ಬಿರುದು ಪಡೆದವರು ಯಾರು?
2) ಸೀಮೆಸುಣ್ಣದಲ್ಲಿರುವ ರಾಸಾಯನಿಕ ವಸ್ತು ಯಾವುದು?
3) 'ನಾಡೋಜ' ಬಿರುದು ಪಡೆದ ಹಳೆಗನ್ನಡದ ಕವಿ ಯಾರು?
4) ಅರ್ಜುನನ ರಥದ ಹೆಸರೇನು?
5) ಭಾರತದ ಕಲ್ಲಿದ್ದಲು ನಗರ ಯಾವುದು?
6) ಯಾವ ನದಿಯ ತಟದಲ್ಲಿ ಅಂತರರಾಷ್ಟ್ರೀಯ ರಾಮಕಥಾ ಮ್ಯೂಸಿಯಂ ನಿರ್ಮಾಣಗೊಳ್ಳಲಿದೆ?
7) 'ಗೀತ ಗೋವಿಂದ' ಕೃತಿಯ ರಚನಾಕಾರರು ಯಾರು?
8) ಚಿರತೆಗಳನ್ನು ಪರಿಚಯಿಸಿದ ಕುನೋ ರಾಷ್ಟ್ರೀಯ ಉದ್ಯಾನವನವು ಯಾವ ರಾಜ್ಯದಲ್ಲಿದೆ?
9) ವಿಶ್ವ ಹವಾಮಾನ ದಿನವನ್ನು ಎಂದು ಆಚರಿಸಲಾಗುತ್ತದೆ?
10) ಭಾರತದಲ್ಲಿ ದ್ವಿಶತಕ ಬಾರಿಸಿದ ಮೊದಲ ಮಹಿಳಾ ಕ್ರಿಕೆಟರ್ ಯಾರು?








**ಉತ್ತರಗಳು**

1) ದಾದಾ ಭಾಯಿ ನವರೋಜಿ
2) ಕ್ಯಾಲ್ಸಿಯಂ ಕಾರ್ಬೋನೇಟ್
3) ಪಂಪ
4) ನಂದೀ ಘೋಷ
5) ಧನಬಾದ್ (ಜಾರ್ಖಂಡ್)
6) ಸರಯೂ ನದಿ
7) ಜಯದೇವ
8) ಮಧ್ಯ ಪ್ರದೇಶ
9) ಮಾರ್ಚ್ 23 ರಂದು
10) ಮಿಥಾಲಿ ರಾಜ್

(9–10 ಉತ್ತರಗಳು ಸರಿಯಾದರೆ ಅತ್ಯುತ್ತಮ, 7–8 ಉತ್ತಮ)

# ಶಬ್ದಶೋಧ–195

**ರಚನೆ:** *ಉಮಾ.ಎಂ.ಎಸ್., ಬನಶಂಕರಿ, ಬೆಂಗಳೂರು*




## ಮೇಲಿನಿಂದ ಕೆಳಗೆ

2. ವಿದೇಹರಾಜನ ಮಗಳು (3)
3. ಸೂರ್ಯನ ಸಾರಥಿ (3)
5. ಮಂಗಳವಾರಕ್ಕೆ ಹೀಗೂ ಹೇಳಬಹುದು (4)
7. ಕೇರಳದ ನೃತ್ಯ ಶೈಲಿ (4)
9. ರುದ್ರಭೂಮಿ (3)
10. ಸ್ವಂತದ್ದು / ವೈಯಕ್ತಿಕ (3)

## ಎಡದಿಂದ ಬಲಕ್ಕೆ

1. ಶಿವರಾಮಕಾರಂತರ ಜೀತದಾಳಿನ ಕಾದಂಬರಿಯ ನಾಯಕ (2)
4. "ಕುಸುಮಬಾಲೆ" ಕೃತಿಯ ಕರ್ತೃವಿನ ಹೆಸರಿನ ಪೂರ್ವಾರ್ಧ (4)
5. ಕುರಿ ಮೇಯಿಸುವವ (4)
6. ತಡೆಹಾಕುವುದು / ಹತೋಟಿಯಲ್ಲಿಡುವುದು ಎಂಬರ್ಥದ ಪದ ಹಿಂದುಮುಂದಾಗಿದೆ (4)
8. ಹಿಂದುಮುಂದಾದ ದುಂಬಿ (4)
10. ಉತ್ತರ ಕರ್ನಾಟಕದ ಹೋಟೆಲ್ (4)
11. ಒಡನಾಟ
12. ಭಕ್ತಕುಂಬಾರ ಚಿತ್ರದಲ್ಲಿ ಕುಂಬಾರನಾಗಿ ರಾಜ್‌ಕುಮಾರ್‌ನ ಹೆಸರು (2)

# ಶಬ್ದಶೋಧ–194 ಉತ್ತರ

**ರಚನೆ:** *ಉಮಾ.ಎಂ.ಎಸ್., ಬನಶಂಕರಿ, ಬೆಂಗಳೂರು*

| | | | | | | | | | |
|---|---|---|---|---|---|---|---|---|---|
| | | | 1 ವೀ | ರ | ಭ | 2 ದ್ರ | | | |
| | 3 ಫಾ | ಲಾ | ಕ್ಷ | | | 4 ಷ್ಟಾ | ಪ್ತೇ | 5 ಆ | |
| | ಲ | | 6 ಕ | ಟ್ಟೋ | ಗ | ರ | | ಪ | |
| | | 7 ಮೃ | | | | | 8 ಪಾ | | |
| 9 ಕೋ | ಡ | ಗ | | | | | 10 ರಿ | ವಾ | 11 ಜು |
| ಳ | | ಜ | | | | | ಜಾ | | ಮು |
| 12 ವ | 13 ಲ | ಲ | | | | | 14 ತ | 15 ವ | ಕಿ |
| | ಲಿ | | 16 ನೀ | ಲಾಂ | ಜ | 17 ನ | | ರ್ತ | |
| | 18 ತೆ | ಪ | ರ | | | 19 ವ | ಲ್ಮೀ | ಕ | |
| | | | 20 ದ | ತ್ತಾ | ತ್ರೇ | ಯ | | | |

## ರಾಷ್ಟ್ರದೇವೋಭವ

ನಾವು ಮುಟ್ಟಬೇಕಾದ ಅಂತಿಮ ಗುರಿ ಯಾವುದೆಂದು ಒಮ್ಮೆ ನಿರ್ಧಾರ ಆಯಿತೆಂದರೆ ದಾರಿ ಯಾವುದಾದರೂ ಸರಿಯೆ, ಗುರಿಯನ್ನು ಹೋಗಿ ಮುಟ್ಟಬಹುದು. ಬೆಟ್ಟದ ತುದಿಯಲ್ಲಿರುವ ದೇವರ ದರ್ಶನ ಮಾಡುವುದೇ ಗುರಿ ಆಗಿದ್ದಲ್ಲಿ ಭಕ್ತರು ಬೆಟ್ಟದ ಶಿಖರವನ್ನು ಯಾವ ರೀತಿಯಾದರೂ ತಲಪಬಲ್ಲರು. ಕೆಲವರು ಹಾಡುತ್ತ ಹೋಗಬಹುದು, ಕೆಲವರು ನಡೆದೇ ಹೋಗಬಹುದು, ಮತ್ತೆ ಕೆಲವರು ಮೋಟಾರ್ ವಾಹನದಲ್ಲಿ ಹೋಗಬಹುದು. ಹಲವರು ಉದ್ದಕ್ಕೂ ನಮಸ್ಕಾರ ಹಾಕುತ್ತಲೇ ಹೋಗಬಹುದು. ಹೇಗೆ ಹೋದರೂ ಕಡೆಗೆ ಎಲ್ಲರೂ ಶಿಖರ ಮುಟ್ಟುವುದಂತೂ ನಿಶ್ಚಿತ. ಆದರೆ ಬೆಟ್ಟದ ತುದಿಯಲ್ಲಿರುವ ದೇವಸ್ಥಾನವೇ ಕಣ್ಣಿಗೆ ಕಾಣಿಸದೆ. ತಾನು ಅಲ್ಲಿಗೆ ಏಕೆ ಬಂದನೆಂಬುದನ್ನೇ ಮರೆತವನು ಜೀವನಪೂರ್ತಿ ಬೆಟ್ಟದ ಸುತ್ತ ಸುತ್ತುತ್ತಲೇ ಇರುವನೇ ಹೊರತು ಎಂದಿಗೂ ಅವನು ದೇವಸ್ಥಾನವನ್ನು ತಲಪಲಾರನು. ನಮಗಾದರೋ ರಾಷ್ಟ್ರವೇ ದೇವರು– 'ರಾಷ್ಟ್ರದೇವೋಭವ !' ಒಮ್ಮೆ ಈ ಜೀವನಗುರಿಯ ಅರಿವಾಯಿತೆಂದರೆ ಉಳಿದೆಲ್ಲ ನಮ್ಮ ಸಮಸ್ಯೆಗಳೂ ತಮಗೆ ತಾವೇ ಅದೃಶ್ಯವಾಗುತ್ತವೆ.


*– ಹೊ.ವೆ. ಶೇಷಾದ್ರಿ*

# ದ್ವಾದಶ ಜ್ಯೋತಿರ್ಲಿಂಗಗಳು

## ಸೌರಾಷ್ಟ್ರದ ಸೋಮನಾಥ

**– ಕುಲದೀಪ್ ರಾವಲ್**

ದ್ವಾದಶ ಜ್ಯೋತಿರ್ಲಿಂಗಗಳೆಂದರೆ, ಶಿವನನ್ನು ಜ್ಯೋತಿರ್ಲಿಂಗಗಳ ರೂಪದಲ್ಲಿ ಪ್ರತಿಷ್ಠಾಪಿಸಿದ ಹನ್ನೆರಡು ದೇವಾಲಯಗಳು. ದಕ್ಷಿಣದ ಜ್ಯೋತಿರ್ಲಿಂಗವು ರಾಮೇಶ್ವರದಲ್ಲಿದ್ದರೆ ಉತ್ತರದಲ್ಲಿ ಅದು ಕೇದಾರದಲ್ಲಿದೆ. ಪ್ರಾತಃಕಾಲದಲ್ಲಿ ಜ್ಯೋತಿರ್ಲಿಂಗಗಳ ಸ್ಮರಣೆಯನ್ನು ಮಾಡಿದರೆ ಏಳೇಳು ಜನ್ಮಗಳ ಪಾಪಗಳು ನಾಶವಾಗುವುದೆಂದು ಆಸ್ತಿಕರು ನಂಬುತ್ತಾರೆ.



ಸೌರಾಷ್ಟ್ರೇ ಸೋಮನಾಥಂಚ ಶ್ರೀಶೈಲೇ ಮಲ್ಲಿಕಾರ್ಜುನ
ಉಜ್ಜಯಿನ್ಯಾಂ ಮಹಾಕಾಲ ಓಂಕಾರೇ ಮಮಲೇಶ್ವರಂ॥
ಪರಲ್ಯಾಂ ವೈದ್ಯನಾಥಂ ಚ ಡಾಕಿನ್ಯಾಂ ಭೀಮಶಂಕರಂ
ಸೇತು ಬಂಧೇತು ರಾಮೇಶಂ ನಾಗೇಶಂ ದಾರುಕಾವನೇ॥
ವಾರಾಣಾಸ್ಯಾಂತು ವಿಶ್ವೇಶ್ವಂ ತ್ರ್ಯಂಬಕಂ ಗೌತಮೀತಟೇ
ಹಿಮಾಲಯೇತು ಕೇದಾರಂ ಘಶ್ಮೇಶಂ ಚ ಶಿವಾಲಯೇ॥
ಏತಾನಿ ಜ್ಯೋತಿರ್ಲಿಂಗಾನಿ ಸಾಯಂ ಪ್ರಾತಃ ಪಠೇನ್ನರಃ
ಸಪ್ತಜನ್ಮ ಕೃತಂ ಪಾಪಂ ಸ್ಮರಣೇನ ವಿನಶ್ಯತಿ॥

ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಮೊದಲು ಸ್ಮರಿಸುವುದು ಸೋಮನಾಥನನ್ನು. ಗುಜರಾತಿನ ಸೌರಾಷ್ಟ್ರಭಾಗದ ಪ್ರಭಾಸ ಪಟ್ಟಣದಲ್ಲಿ ಸೋಮನಾಥವಿದೆ. ಗಜನಿ ಮಹಮ್ಮದನಿಂದ ಪ್ರಾರಂಭವಾಗಿ ಉಲಗ್‌ಖಾನ್, ಅಲಾವುದೀನ್ ಖಿಲ್ಜಿ, ಮುಜಫರ್ ಶಾ, ಔರಂಗಜೇಬರೇ ಮೊದಲಾದ ಮುಸ್ಲಿಂ ಮತಾಂಧ ಧಾಳಿಕೋರರು ಸೋಮನಾಥ ದೇವಸ್ಥಾನವನ್ನು ಉರುಳಿಸಲು ಪ್ರಯತ್ನಿಸಿದರು. ಆದರೆ ಪ್ರತಿಬಾರಿಯೂ ದೇವಾಲಯವನ್ನು ಮತ್ತೆ ನಿರ್ಮಿಸಿದ ಛಲವನ್ನು ನಾವು ಇತಿಹಾಸದಲ್ಲಿ ಕಾಣಬಹುದು.


ವಲ್ಲಭಿ ವಂಶದ ರಾಜರು ಸೋಮನಾಥವನ್ನು ಮೊದಲು ನಿರ್ಮಿಸಿದರೆಂದು ಸಂಶೋಧನೆಯಿಂದ ತಿಳಿದು ಬಂದಿದೆ. ಇತಿಹಾಸಕಾರರು ಪುರಾತತ್ತ್ವ ಪಂಡಿತರು. ಪ್ರತಿ ಬಾರಿಯೂ ದೇವಸ್ಥಾನವು ಮಸೀದಿಯಾಗುತ್ತ ಮತ್ತೆ ದೇವಸ್ಥಾನವಾಗುವುದನ್ನು ತಮ್ಮ ಅಧ್ಯಯನದಿಂದ ಕಂಡುಹಿಡಿದರು. ಭಾರತವು ಸ್ವಾತಂತ್ರ್ಯವನ್ನು ಪಡೆಯುತ್ತಲೇ ಸರ್ದಾರ್ ಪಟೇಲರು. ಸೋಮನಾಥನನ್ನು ಜನರ ದೇಣಿಗೆಯ ಮೂಲಕ ನಿರ್ಮಿಸಲು ನಿರ್ಧರಿಸಿದರು. ಇದಕ್ಕೆ ಮಹಾತ್ಮಾಗಾಂಧಿಯವರ ಒಪ್ಪಿಗೆಯೂ ಇದ್ದಿತು. ಗುರ್ಜರ ವಾಸ್ತು ಶೈಲಿಯಲ್ಲಿ ನಿರ್ಮಿಸಿದ ಈ ದೇವಾಲಯದ ಶಿಲ್ಪಿಗಳ ವಂಶದವರೇ ಈಗ ಅಯೋಧ್ಯೆಯ ಮಂದಿರವನ್ನೂ ಕಟ್ಟುತ್ತಿರುವರು. ರಾಷ್ಟ್ರಾಧ್ಯಕ್ಷರಾದ ರಾಜೇಂದ್ರ ಪ್ರಸಾದ್ 11–05–1951ರಂದು ಹೊಸ ಸೋಮನಾಥ ದೇವಸ್ಥಾನದಲ್ಲಿ ಸೋಮನಾಥಲಿಂಗ ಪ್ರತಿಷ್ಠಾಪನೆಯನ್ನು ಮಾಡಿದರು. ಆಕ್ಟೋಬರ್‌ನಿಂದ ಮಾರ್ಚ್‌ವರೆಗೆ ಜನಸಂದಣಿಯಿದ್ದರೂ ಯಾತ್ರೆಗೆ ಪ್ರಶಸ್ತವಾದ ದಿನಗಳು.

# ಉಪಕಾರ ಮಾಡಿದವನಿಗೆ ಅಪಕರಿಸಬಾರದು

ಒಬ್ಬ ಬೇಟೆಗಾರನು ಬೇಟೆಯಾಡಲು ಒಂದು ಕಾಡಿಗೆ ಹೋಗಿದ್ದನು. ಅಲ್ಲಿ ಅಕಸ್ಮಾತ್ತಾಗಿ ಒಂದು ಪೊದೆಯ ಹಿಂದೆ ಅಡಗಿಕೊಂಡು ಇದ್ದ ಹುಲಿಯೊಂದು ಅವನನ್ನು ಅಟ್ಟಿಸಿಕೊಂಡು ಬಂದಿತು. ಹೆದರಿ ಓಡುತ್ತಿದ್ದ ಬೇಡನು ಬೇರೆ ದಾರಿ ಕಾಣದೆ ಅಲ್ಲೇ ಇದ್ದ ಒಂದು ಬಾವಿಗೆ ಹಾರಿದನು. ಹುಲಿಯು ಕೂಡಾ ಓಡುವ ರಭಸವನ್ನು ತಡೆಯಲಾಗದೆ ಅದೇ ಬಾವಿಗೆ ನೆಗೆದು ಬಿದ್ದಿತು. ಅಷ್ಟರಲ್ಲಿ ಅಲ್ಲಿಗೆ ಬಾಯಾರಿದ ಕೋತಿಯೊಂದು ಬಂದಿತು. ನೀರು ಕುಡಿಯಲು ಬಾವಿಗೆ ಇಳಿಯಬೇಕಲ್ಲವೇ? ಬಾವಿಯ ಒಳಗೆ ಬೆಳೆದುಕೊಂಡ ಬಳ್ಳಿಗಳನ್ನು ಹಿಡಿದು ಆಧರಿಸಿಕೊಳ್ಳುತ್ತಾ ನೀರಿಗಾಗಿ ಕೆಳಗೆ ಇಳಿಯುತ್ತಾ ಹೋಯಿತು. ಆದರೆ ಅದು ಬಳ್ಳಿಯೆಂದುಕೊಂಡು ಬಾವಿಯ ಒಳಗೆ ಹರಿದಾಡುತ್ತಿದ್ದ ಒಂದು ಹಾವನ್ನು ಹಿಡಿದುಕೊಂಡಿದ್ದಿತು. ಕೋತಿಯ ಭಾರವನ್ನು ಹಾವು ಹೇಗೆ ತಡೆದುಕೊಳ್ಳಲು ಸಾಧ್ಯ? ಹಾವು ಮತ್ತು ಅದನ್ನು ಹಿಡಿದಿದ್ದ ಕೋತಿ, ಎರಡೂ ಕೂಡಾ ಬಾವಿಯೊಳಗೆ ಬಿದ್ದವು. ಈಗ ಬಾವಿಯೊಳಗೆ ಬೇಡನೊಂದಿಗೆ, ಹುಲಿ, ಅವರಿಬ್ಬರೊಂದಿಗೆ ಕೋತಿ ಹಾಗೂ ಹಾವು ಹೀಗೆ ನಾಲ್ಕೂ ಮಂದಿ ಇದ್ದರು. ಅದು ದೊಡ್ಡ ಬಾವಿ. ಬಹಳ ಆಳ.

ಅಲ್ಲಿಗೆ ಯಾತ್ರೆ ಮಾಡಲು ಹೊರಟ ಶಿವಭೂತಿಯೆನ್ನುವ ಯಾತ್ರಿಕನು ಬಂದನು. ಬಾವಿಯನ್ನು ನೋಡಿದ ಅವನು ಒಂದಿಷ್ಟು ನೀರು ಕುಡಿದು ಒಂದಿಷ್ಟು ನೀರನ್ನು ಜೊತೆಯಲ್ಲಿ ಕೊಂಡೊಯ್ಯಬೇಕೆಂದುಕೊಂಡನು. ಅದಕ್ಕಾಗಿ ತಾನು ತಂದ ನೀರಿನ ದೊಡ್ಡ ತಂಬಿಗೆಯನ್ನು ಬಾವಿಗೆ ಇಳಿಸಿ ಮೇಲೆ ಎತ್ತುತ್ತಿದ್ದಂತೆ, ಏನೋ ಬಹಳ ಭಾರವಿದೆ ಎಂದು ಅವನಿಗೆ ಅನಿಸಿತು. ಹೌದು! ತಂಬಿಗೆಯೊಂದಿಗೆ ಬಾವಿಗೆ ಬಿದ್ದ ಹುಲಿಯು ಕೂಡಾ ಅದನ್ನು ಗಟ್ಟಿಯಾಗಿ ಹಿಡಿದುಕೊಂಡು ಮೇಲೆ ಬಂದಿದ್ದಿತು.

ಹುಲಿಯು ಹೊರಗೆ ಬಂದು ಶಿವಭೂತಿಗೆ ನಮಸ್ಕರಿಸಿತು. ತನ್ನೊಂದಿಗೆ ಬೇಡನೂ, ಕೋತಿಯೂ, ಮತ್ತು ಹಾವು ಬಾವಿಯಲ್ಲಿದ್ದ ಕತೆಯನ್ನು ಅವನಿಗೆ ವಿವರಿಸಿತು. “ನಿಮ್ಮಿಂದ ನಾನು ಬದುಕಿದೆ, ನೀವು ನನ್ನೊಂದಿಗೆ ನಾನು ಇರುವ ಗುಹೆಗೆ ಬಂದುಬಿಡಿ. ನನ್ನ ಬಳಿ ನಿಮಗೆ ಬೇಕಾದ ಚಿನ್ನ ಆಭರಣಗಳು ಇವೆ.  ಅವನ್ನೆಲ್ಲಾ ನಿಮಗೆ ಕೊಡುತ್ತೇನೆ ಎಂದಿತು.



ಅದಕ್ಕೆ ಶಿವಭೂತಿಯು "ಮೊದಲು ಬಾವಿಗೆ ಬಿದ್ದ ಉಳಿದ ಮೂವರನ್ನು ಹೊರ ತೆಗೆಯುತ್ತೇನೆ. ಆಮೇಲೆ ನನ್ನ ತೀರ್ಥಯಾತ್ರೆಯನ್ನು ಮುಗಿಸುವೆ. ಹಿಂದಿರುಗುವಾಗ ನಿನ್ನನ್ನು ಭೇಟಿಯಾಗುವೆ" ಎಂದನು. ಅದಕ್ಕೆ ಹುಲಿಯು "ಸರಿ, ಆದರೆ ಆ ಕೆಟ್ಟ ಮನುಷ್ಯನಾದ ಬೇಡನನ್ನು ಮಾತ್ರ ಹೊರಗೆ ತೆಗೆಯಬೇಡಿ" ಎಂದು ಹೇಳಿ ತನ್ನ ಗುಹೆಯ ಕಡೆ ಹೋಯಿತು.

ಇನ್ನು ಶಿವಭೂತಿಯು ಹಗ್ಗವನ್ನು ಇಳಿಬಿಟ್ಟು ಕೋತಿಯನ್ನು ಮೇಲೆ ಎಳೆದನು. ಕೋತಿಯು ಕೂಡಾ ಶಿವಭೂತಿಗೆ ನಮಸ್ಕರಿಸಿತು. "ನೀವು ಕಾಡಿಗೆ ಬಂದಾಗ ಅಥವಾ ಹೋಗುವಾಗ ನನ್ನನ್ನು ಗಟ್ಟಿಯಾಗಿ ಕರೆದುಬಿಡಿ. ನಿಮಗೆ ಹೊಟ್ಟೆ ತುಂಬುವಷ್ಟು ಹಣ್ಣು, ಜೇನುತುಪ್ಪವನ್ನು ಕೊಡುತ್ತೇನೆ. ನಿಮಗೊಂದು ಮಾತು ಹೇಳುತ್ತೇನೆ. ಬಾವಿಯಲ್ಲಿ ಬಿದ್ದ ಆ ಕೆಟ್ಟ ಮನುಷ್ಯನನ್ನು ಮಾತ್ರ ಮೇಲೆತ್ತಬೇಡಿ" ಎಂದು ಹೇಳಿ ತನ್ನ ಪಾಡಿಗೆ ಅದು ಕಾಡಿನೊಳಗೆ ಹೋಯಿತು.

ಶಿವಭೂತಿಯು ನಂತರ ಬಾವಿಗೆ ಬಿದ್ದ ಹಾವನ್ನು ಮೇಲೆತ್ತಿದನು. ಅದು ಕೂಡಾ ಅವನ ಉಪಕಾರವನ್ನು ಮರೆಯಲಾರೆ ಎಂದಿತು "ನಿಮಗೆ ನನ್ನ ನೆನಪಾದರೆ ಸಾಕು ನಾನು ನಿಮ್ಮ ಬಳಿ ಬರುತ್ತೇನೆ. ಹೋಗಿ ಬನ್ನಿ, ಆದರೆ ಒಂದು ಮಾತು, ಬಾವಿಯಲ್ಲಿರುವ ಆ ಮನುಷ್ಯನನ್ನು ಮಾತ್ರ ಮೇಲೆತ್ತಬೇಡಿ, ಅವನು ಬಹಳ ಕೆಟ್ಟವನು" ಎಂದು ಜಾಗ್ರತೆ ಹೇಳಿ ಹೋಯಿತು.

ಶಿವಭೂತಿಯು ಇಷ್ಟನ್ನೆಲ್ಲ ಕೇಳಿದ ಮೇಲೂ "ಈ ಬೇಡನನ್ನು ನಾನು ಉಳಿಸದೆ ಹೋದರೆ ನಾನೆಂಥ ಮನುಷ್ಯ?" ಎಂದುಕೊಳ್ಳುತ್ತ ಅವನನ್ನೂ ಮೇಲೆತ್ತಿದನು. ಮೇಲೆ ಬಂದ ಆ ಬೇಡನು "ನಿಮ್ಮಿಂದ ನಾನು ಬದುಕಿದೆ. ನೀವೇನಾದರೂ ನನ್ನ ಪೇಟೆಗೆ ಬಂದರೆ ನನ್ನನ್ನು ನೋಡಿ ಹೋಗಿ" ಎಂದು ಶಿವಭೂತಿಗೆ ಹೇಳಿ ಹೋದನು.

ಶಿವಭೂತಿಯು ಬಹಳಷ್ಟು ದೇವಸ್ಥಾನಗಳಲ್ಲಿ ದೇವರ ದರ್ಶನ ಮಾಡಿಕೊಂಡು ತನ್ನ ಊರಿಗೆ ಹೊರಟನು. ದಾರಿಯಲ್ಲಿ ಆ ಕಾಡನ್ನು ದಾಟುವಾಗ ಅವನಿಗೆ ತಾನು ರಕ್ಷಿಸಿದ ಹುಲಿಯ ನೆನಪಾಯಿತು. ಹುಲಿಯು ಅವನನ್ನು ಬಹಳ ಉಪಚಾರ ಮಾಡಿತು. ತಾನು ಸಂಗ್ರಹಿಸಿಟ್ಟ ಚಿನ್ನಾಭರಣಗಳನ್ನು ಅವನಿಗೆ ಕೊಟ್ಟಿತು. ಆ ನಂತರ ಅವನು ಅದೇ ಕಾಡಿನಲ್ಲಿ ಆ ಕೋತಿಯನ್ನು ಕರೆದು ಮಾತನಾಡಿಸಿದನು. ಅದು ಬಹಳ ಸಂತೋಷದಿಂದ ಅವನನ್ನು ಹಲವು ಅಪರೂಪದ ಸಿಹಿ ಸಿಹಿ ಹಣ್ಣುಗಳನ್ನು ಕೊಟ್ಟು ಸತ್ಕರಿಸಿತು.

ಶಿವಭೂತಿಯು ಈಗ ಪೇಟೆಗೆ ಬಂದನು. ಬೇಡನ ಮನೆಯನ್ನು ಹುಡುಕಿಕೊಂಡು ಹೋದನು. ಅವನ ಬಳಿ ತನಗೆ ಹುಲಿಯು ಕೊಟ್ಟ ಆಭರಣಗಳನ್ನು ಕೊಟ್ಟು ಅವನ್ನು ಮಾರಿ ತನಗೆ ಹಣ ಹೊಂದಿಸಿಕೊಡು ಎಂದು ಕೇಳಿಕೊಂಡನು. ಆ ಚಿನ್ನವನ್ನು ನೋಡಿದ ಬೇಡನಿಗೆ ಅವು ಅರಮನೆಯ ಆಭರಣಗಳೆಂದು ತಿಳಿಯಿತು. ಅರಮನೆಗೆ ಸೇರಿದವರು ಕಾಡಿಗೆ ಹೋದಾಗ ಹುಲಿಯು ಅವರನ್ನು ಕೊಂದುಬಿಟ್ಟಿದ್ದಿರಬಹುದೇನೋ? ಅವರ ಆಭರಣಗಳನ್ನು ಹುಲಿಯು ತನ್ನ ಗುಹೆಯಲ್ಲಿ ಇಟ್ಟುಕೊಂಡಿದ್ದಿತು. ಅದನ್ನೇ ಶಿವಭೂತಿಗೆ ಹುಲಿಯು ಕೊಟ್ಟಿತ್ತು.

ಬೇಡನಿಗೆ ದುರಾಶೆಯಾಯಿತು. ಶಿವಭೂತಿಯನ್ನು ರಾಜನಿಗೆ ಒಪ್ಪಿಸಿದರೆ ತನಗೆ ಲಾಭವಿದೆಯೆಂದು ತೋರಿತು. ಮೆಲ್ಲಗೆ ಹಿಂದಿನ ಬಾಗಿಲಿನಿಂದ ಅರಮನೆಗೆ ಹೋದ ಬೇಡನು ರಾಜನಿಗೆ "ಪ್ರಭೂ ನಿಮ್ಮ ಅರಮನೆಯ ಆಭರಣಗಳನ್ನು ಕದ್ದವನು ನನಗೆ ಸಿಕ್ಕಿದ್ದಾನೆ, ಅವನನ್ನು ಬಂಧಿಸಿ ಸೆರೆಮನೆಯಲ್ಲಿ ಇಟ್ಟುಬಿಡಿ" ಎಂದು ದೂರುಕೊಟ್ಟನು. ರಾಜನು ಹಿಂದು ಮುಂದು ನೋಡದೆ ಶಿವಭೂತಿಯನ್ನು ಸೆರೆಯಲ್ಲಿಟ್ಟನು.

ಸೆರೆಮನೆಯಲ್ಲಿದ್ದ ಶಿವಭೂತಿಯು ಬಹಳ ಭಯಪಟ್ಟನು. "ನಿನಗೆ ಕಷ್ಟಬಂದಾಗ ನನ್ನನ್ನು ನೆನೆಪಿಸಿಕೊಳ್ಳು ಎಂದು ಹೇಳಿದ ಹಾವಿನ ನೆನಪಾಯಿತು. ಅವನು ಹಾವನ್ನು ನೆನಪಿಸಿಕೊಳ್ಳುತ್ತಲೇ ಹಾವು ಅವನ ಬಳಿ ಹರಿದುಕೊಂಡು ಬಂದಿತು. ಶಿವಭೂತಿಯು ಅದಕ್ಕೆ ತನ್ನ ಕಷ್ಟವನ್ನೆಲ್ಲ ಹೇಳಿಕೊಂಡನು. "ನಾನು ಆ ದಿನವೇ ಹೇಳಿದ್ದೆ. ಅ ಮನುಷ್ಯನನ್ನು ನಂಬಬಾರದು" ಎಂದು ಹೇಳಿದ ಹಾವು "ಇರಲಿ, ನಾನೀಗ ಹೋಗಿ ರಾಜಕುಮಾರನನ್ನು ಕಚ್ಚಿಬಿಡುತ್ತೇನೆ. ಅವನು ಮೂರ್ಛೆ ತಪ್ಪಿ ಬೀಳುತ್ತಾನೆ. ಯಾರಿಂದಲೂ ಅವನನ್ನು ಎಚ್ಚರಿಸಲು ಸಾಧ್ಯವಾಗುವುದಿಲ್ಲ. ಆಗ ನೀವು, ನಾನು ರಾಜಕುಮಾರನನ್ನು ಬದುಕಿಸಬಲ್ಲೆ ಎಂದು ಹೇಳಿ ಕಳುಹಿಸಿ. ನೀವು ಕರೆದಕೂಡಲೇ ನಾನು ಬಂದು ವಿಷವನ್ನು ಹೀರಿ ರಾಜಕುಮಾರನು ಎದ್ದು ಕುಳಿತುಕೊಳ್ಳುವಂತೆ ಮಾಡುವೆ" ಎಂದು ಹೇಳಿತು.

ಹಾಗೆಯೇ ಆಯಿತು. ಯಾವ ವೈದ್ಯರಿಗೂ ಹಾವು ಕಚ್ಚಿದ ರಾಜಕುಮಾರನ ಮೂರ್ಛೆ ಕಳೆಯುವಂತೆ ಮಾಡಲು ಸಾಧ್ಯವಾಗಲಿಲ್ಲ. ಸೆರೆಮನೆಯಲ್ಲಿರುವ ಶಿವಭೂತಿ ಎನ್ನುವವನು ರಾಜಕುಮಾರನಿಗೆ ಔಷಧಿ ಕೊಡುವನಂತೆ ಎಂದು ರಾಜನಿಗೆ ಸೆರೆಮನೆಯ ಅಧಿಕಾರಿಗಳು ಬಂದು ಹೇಳಿದರು. ಅದರಂತೆ ಶಿವಭೂತಿಯನ್ನು ಸೆರೆಮನೆಯಿಂದ ಅರಮನೆಗೆ ಕರೆದು ತಂದರು. ಹಾವು ಹೇಳಿದಂತೆ ರಾಜಕುಮಾರನು ಸ್ವಸ್ಥಗೊಂಡನು. ರಾಜನು ಸಂತುಷ್ಟನಾದನು. ಶಿವಭೂತಿಯು ತನ್ನ ಕುರಿತು ಹೇಳಿದುದನ್ನು ಕೇಳಿದ ರಾಜನಿಗೆ ಅದು ಸತ್ಯವೆಂದು ಕಂಡಿತು. ಅವನನ್ನು ಬಿಡುಗಡೆಗೊಳಿಸಿದನು. ಉಪಕಾರ ಮರೆತ ಬೇಡನನ್ನು ಸೆರೆಮನೆಗೆ ತಳ್ಳಿದನು.


**ಹಿಂದುವಾಣಿಗೆ ಚಂದಾದಾರರಾಗಲು**

**ವಾರ್ಷಿಕ ಚಂದಾ ರೂ. 130/– ಅಥವಾ ದ್ವೈವಾರ್ಷಿಕ ಚಂದಾ ರೂ. 250/–ರ ಎಂ.ಓ./ಡಿ.ಡಿ.ಗಳನ್ನು "ಹಿಂದುವಾಣಿ" ಹೆಸರಿನಲ್ಲಿ ಕಳುಹಿಸಬಹುದು**

**ಅಥವಾ**

**ಕರ್ನಾಟಕ ಬ್ಯಾಂಕ್, ಚಾಮರಾಜಪೇಟೆ ಶಾಖೆ, ಬೆಂಗಳೂರು.**
**ಖಾತೆ ಹೆಸರು : "ಹಿಂದುವಾಣಿ" A/c No: 0582500102391901ಕ್ಕೆ ವರ್ಗಾಯಿಸಬಹುದು.**

**I.F.S.C Code : KARB0000058**

**ನಂತರ 9663881653 ಮೊಬೈಲಿಗೆ ಅಥವಾ ದೂರವಾಣಿ 080–26604641ಕ್ಕೆ ಕರೆ ಮಾಡಿ ತಮ್ಮ ಪೂರ್ಣ ವಿಳಾಸವನ್ನು ತಿಳಿಸಬೇಕು.**

# ಬೆಳಗಾವಿಯ ಶ್ರೀ ಕಪಿಲೇಶ್ವರ ದೇಗುಲ

– ಪಾರಿಜಾತ ಬಿ.ಎಸ್., ಬೆಂಗಳೂರು

**ದಶಬಾಹುಸ್ಸನಿಮಿಷೋ ನೀಲಕಂಠ ಉಮಾಪತಿ ॥**
**ವಿಶ್ವರೂಪಃ ಸ್ವಯಂಶ್ರೇಷ್ಠೋ ಬಲವೀರೋಬಲೋ ಗಣ ॥**



ಋಗ್ವೇದದ ಕಾಲದಲ್ಲಿ "ರುದ್ರ" ಎಂಬ ಹೆಸರಿನಿಂದ ಪರಶಿವನನ್ನು ಕರೆಯಲಾಗಿದೆ. ಶಿವ ಶಿವ ಎಂದರೆ ಎಲ್ಲವೂ ಶುಭದಾಯಕ, ಎಲ್ಲಾ ಜಂಜಾಟಗಳಿಂದಲೂ ಮುಕ್ತಿ. ಅಂತೆಯೇ ಶಿವ ಎಂದರೆ ಮುಕ್ತಿ, ವಿಮೋಚನೆ ಎಂದು ನಂಬಲಾಗಿದೆ. ಅವನನ್ನು ಮಹಾದೇವನೆಂದೂ ಕರೆಯಲಾಗಿದೆ. ನಂದಿ, ಋಷಿ ಪಿಪ್ಪಲಾದ, ದುರ್ವಾಸ, ಹನುಮಾನ್, ವೃಷಭ, ಯತಿನಾಥ, ಭೈರವ, ಅಶ್ವತ್ಥಾಮ, ಶರಭ, ಕಿರಾತ ಇತ್ಯಾದಿಗಳು ಪರಶಿವನ ಪ್ರಮುಖ ಅವತಾರಗಳು ರುದ್ರ, ಕಾಲಭೈರವ, ವೀರಭದ್ರ, ಭೈರವ, ಬೇತಾಳ, ಭೂತನಾಥ, ನಟರಾಜ, ಕಿರಾತ ಎಂಬುದು ಪರಶಿವನ ವಿವಿಧ ರೂಪಗಳು.

ಬೆಳಗಾವಿಯು ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿದೆ. ಉತ್ತರ ಕರ್ನಾಟಕದ ವಿಭಾಗೀಯ ಕೇಂದ್ರವಾಗಿ ಅಭಿವೃದ್ಧಿಯ ಹಾದಿಯಲ್ಲಿ ಸಾಗುತ್ತಿದೆ. ಮೂರು ವಿಶ್ವವಿದ್ಯಾಲಯಗಳು, ವೈದ್ಯಕೀಯ, ಇಂಜಿನಿಯರಿಂಗ್, ದಂತ ವೈದ್ಯಕೀಯದಂತಹ ಕಾಲೇಜುಗಳನ್ನು ಹೊಂದಿದ್ದು ಶೈಕ್ಷಣಿಕ ಕೇಂದ್ರಗಳ ಪ್ರಮುಖ ಸ್ಥಾನವಾಗಿದೆ. ಕೃಷ್ಣ, ಘಟಪ್ರಭ, ಮಲಪ್ರಭ, ಮಹದಾಯಿ ವೇದಗಂಗಾ, ಪಂಡರಿ, ದೂದಗಂಗಾ ದಂತಹ ಪ್ರಮುಖ ನದಿಗಳು ಹರಿಯುವ, ಜಲಪಾತಗಳು ಧುಮ್ಮಿಕ್ಕುವ ಸುಂದರ ಭೂಮಿಯಾಗಿದೆ. ಹಿಂದೆ ಇದು "ವೇಣು ಗ್ರಾಮ"ವೆಂದು ಇದು ಕರೆಯಲ್ಪಡುತ್ತಿತ್ತು. ಹಲಸಿ, ಕಿತ್ತೂರು, ಸೌಂದತ್ತಿ, ಗೋಕಾಕ್ ನಂತಹ ಇತಿಹಾಸ ಪ್ರಸಿದ್ಧ ಪ್ರದೇಶಗಳು ಬೆಳಗಾವಿ ಜಿಲ್ಲೆಯಲ್ಲಿವೆ. 'ಕುಂದಾ" ಎಂಬ ಸಿಹಿಪದಾರ್ಥದ ಸವಿಯನ್ನು ಪ್ರಪಂಚಾದ್ಯಂತ ಹಂಚುತ್ತಿರುವ ವಿಶೇಷ ಸ್ಥಳವಾಗಿದೆ.

ಪರಶಿವನ ಸಾನ್ನಿಧ್ಯವಿರುವ ಜೋತಿರ್ಲಿಂಗಗಳ ದರ್ಶನ ಪಡೆದ ಭಕ್ತರ ಯಾತ್ರೆ ಸಂಪೂರ್ಣಗೊಂಡು, ಪುಣ್ಯ ಲಭಿಸಲು ಪವಿತ್ರ ಸ್ಥಳವಾದ ಶ್ರೀ ಕಪಿಲೇಶ್ವರನ ಕ್ಷೇತ್ರಕ್ಕೆ ಭೇಟಿ ನೀಡಲೇ ಬೇಕು ಎಂಬ ಪ್ರತೀತಿ ಇದೆ. ಇಂತಹ ಪ್ರಮುಖ ಸ್ಥಾನ ಪಡೆದಿರುವ ಶ್ರೀ ಕಪಿಲೇಶ್ವರ ದೇಗುಲವು ಕರ್ನಾಟಕದ ಬೆಳಗಾವಿಯ ನಗರದಲ್ಲಿದೆ. ಇದು ಬೆಂಗಳೂರಿನಿಂದ

ಸುಮಾರು 627 ಕಿ.ಮೀ ದೂರದಲ್ಲಿದೆ. ಈ ಕ್ಷೇತ್ರವು "ದಕ್ಷಿಣ ಕಾಶಿ" ಎಂದೇ ಹೆಸರು ಪಡೆದಿದೆ. ಕಾಶಿಯಲ್ಲಿನ ಶಿವನ ದರ್ಶನ ಪಡೆದಷ್ಟೇ ಇಲ್ಲಿನ ಶ್ರೀ ಕಪಿಲೇಶ್ವರನ ದರ್ಶನವು ಮಹತ್ವದಾಗಿದೆ. ಹರಿಹರರು ಅಭಿಮುಖರಾಗಿರುವ ಪವಿತ್ರ ದೇಗುಲವಿದು.

## ಐತಿಹಾಸಿಕ ಹಿನ್ನೆಲೆ

ಕ್ಷೇತ್ರವು ರಾಷ್ಟ್ರಕೂಟರು, ಚಾಲುಕ್ಯರು, ಕದಂಬರು, ವಿಜಯನಗರದ ಅರಸರು, ಬಹಮನಿ ಸುಲ್ತಾನರು  ಇತ್ಯಾದಿ ರಾಜಮನೆತನಗಳ ಹಾಗು ಬ್ರಿಟಿಷರ ಕಾಲದಲ್ಲಿ ಅವರ ಆಡಳಿತಕ್ಕೆ ಒಳಪಟ್ಟು ಕಾಲಾನಂತರದಲ್ಲಿ ಕ್ರಮೇಣ ಅಭಿವೃದ್ಧಿಯನ್ನು ಕಂಡಿದೆ. 8ನೇ ಶತಮಾನದಲ್ಲಿ ಶ್ರೀ ಶಂಕರಾಚಾರ್ಯರು, ನಂತರದ ಕಾಲದಲ್ಲಿ, ತಿಲಕ್, ಗಾಂಧೀಜಿ, ವಿವೇಕಾನಂದರು ಇಲ್ಲಿಗೆ ಭೇಟಿ ನೀಡಿದ್ದರೆಂದು ತಿಳಿದು ಬರುತ್ತದೆ.

## ಪೌರಾಣಿಕ ಹಿನ್ನೆಲೆ

ಹಿಂದೆ ಈ ಕ್ಷೇತ್ರದಲ್ಲಿ ಮಹಾ ಋಷಿ ಶ್ರೀ ಕಪಿಲ ಮುನಿಯು ನೆಲೆನಿಂತಿದ್ದು ಈ ಕ್ಷೇತ್ರವನ್ನು ಪಾವನಗೊಳಿಸಿದ್ದಾರೆ. ಅವರು ಇಲ್ಲಿ ಉದ್ಭವವಾದ ಶಿವಲಿಂಗವನ್ನು ಇಲ್ಲಿಯೇ ಪ್ರತಿಷ್ಠಾಪಿಸಿ ಪೂಜಿಸಿದರು. "ಕಮಲ ಬಸ್ತಿ"ಯ ಶಾಸನವೊಂದರಲ್ಲಿ ಈ ಕ್ಷೇತ್ರದ ಕುರಿತು ಉಲ್ಲೇಖವಿದೆ. ಅಂತೆಯೇ ಶಿವನು ಇಲ್ಲಿ ಕಪಿಲೇಶ್ವರನಾಗಿ ನೆಲೆನಿಂತಿದ್ದಾನೆ. ಪರಶಿವನ ದ್ವಾದಶ ಜ್ಯೋತಿರ್ಲಿಂಗಗಳ ದರ್ಶನದ ಯಾತ್ರೆಯು ಸಂಪೂರ್ಣವಾಗಲು ಈ ಕಪಿಲೇಶ್ವರನ ದರ್ಶನವನ್ನು ಮಾಡಲೇಬೇಕೆಂಬ ನಂಬಿಕೆ ಭಕ್ತರದು.

## ಶ್ರೀ ಕಪಿಲೇಶ್ವರ ದೇಗುಲ

ಬೆಳಗಾವಿಯ ಪವಿತ್ರ ಹಾಗು ಪ್ರಸಿದ್ಧ ದೇಗುಲಗಳಲ್ಲಿ ಶ್ರೀ ಕಪಿಲೇಶ್ವರ ದೇಗುಲ ಪ್ರಮುಖವಾದದ್ದು. ಸುಂದರ ಪ್ರಕೃತಿಯ ನಡುವಿನಲ್ಲಿ ಆಕರ್ಷಕ ಕಂಬಗಳ ಕಟ್ಟಡದೊಂದಿಗೆ ಎತ್ತರವಾದ ಗೋಪುರ ಹೊಂದಿರುವ ಸುಂದರ ದೇಗುಲವಿದು. ವಿಶಾಲವಾದ ಪ್ರಾಂಗಣ, ಕಂಬಗಳಿಂದ ಸುತ್ತುವರೆದ ಪ್ರದಕ್ಷಿಣಾ ಆವರಣ, ಗರ್ಭಗೃಹದಲ್ಲಿ ಅಲಂಕೃತವಾದ ಮಂಟಪದೊಳಗೆ ಸ್ವಯಂಭೂ ಲಿಂಗರೂಪಿಯಾಗಿ ಶ್ರೀ ಕಪಿಲೇಶ್ವರನು ನೆಲೆನಿಂತಿದ್ದಾನೆ. ಗರ್ಭಗೃಹದ ಮುಂದೆ ನಂದಿಕೇಶ್ವರನು ಮಂಡಿಯೂರಿ ಕುಳಿತ್ತಿದ್ದಾನೆ. ಪ್ರಾಂಗಣದ ಸುತ್ತಲೂ  ಗಣಪತಿ, ವೀರಭದ್ರ, ಪಾರ್ವತಿ, ದತ್ತಾತ್ರೇಯ, ನಾಗದೇವರು ಇತ್ಯಾದಿ ದೇವಾನು ದೇವತೆಗಳು ಪೂಜೆಗೊಳ್ಳುತ್ತಿರುವರು. ದೇಗುಲದ ಹೊರಾಂಗಣದಲ್ಲಿ ಸುತ್ತಲೂ ಅಲ್ಲಲ್ಲಿ ಪುಟ್ಟ ಮಂಟಪಗಳಿದ್ದು 16 ಕಂಬದ ಮಂಟಪವು ಆಕರ್ಷಕವಾಗಿವೆ. ಪಶ್ಚಿಮಾಭಿಮುಖದ ಗರ್ಭಗೃಹದಲ್ಲಿ 11ನೇ ಶತಮಾನದ ನಿಂತ ಭಂಗಿಯಲ್ಲಿ ಕಾಳಭೈರವ ವಿಗ್ರಹವಿದೆ. ಆವರಣದಲ್ಲಿ ಮಹಾವಿಷ್ಣುವಿನ ದೇಗುಲವಿದ್ದು ಅಭಿವೃದ್ಧಿಗೊಂಡಿದೆ. ಎಡ ಭಾಗದಲ್ಲಿ ನವಗ್ರಹಗಳಿವೆ. ಚಪ್ಪಟೆಯಾದ ಮೇಲ್ಛಾವಣಿಯನ್ನು ಹೊಂದಿದ 13ನೇ ಶತಮಾನಕ್ಕೆ ಸೇರಿದ ಹಜಾರ ಮಂಟಪವು ಪ್ರಮುಖವಾಗಿದೆ. ಆವರಣದ ಸುತ್ತಲೂ ಶಿವನ ಮಹಿಮೆಯನ್ನು ಸಾರುವ ಚರಿತ್ರೆಯನ್ನು ಪ್ರತಿಬಿಂಬಿಸುವ ಫಲಕಗಳು ಆಕರ್ಷಿತವಾಗಿವೆ. ಆಕರ್ಷಕ ಮೆಟ್ಟಿಲುಗಳುಳ್ಳ ಸುಂದರ ಕೊಳವು ಮನಸೆಳೆಯುತ್ತದೆ. ಹೊರ ಆವರಣದಲ್ಲಿ ಕಾರಂಜಿಯ ಪುಟ್ಟ ಕೊಳದಲ್ಲಿನ ಶಿವನ ವಿಗ್ರಹವು ಮನಮೋಹಕವಾಗಿದೆ.




ಶ್ರಾವಣ ಮಾಸ ಹಾಗು ನಾಗರ ಪಂಚಮಿ, ಮಹಾ ಶಿವರಾತ್ರಿಯ ದಿನಗಳಲ್ಲಿ ವಿಶೇಷ ಪೂಜೆ ಅಭಿಷೇಕ, ದೀಪಾರಾಧನೆಗಳು ಜರುಗುತ್ತವೆ. ಪ್ರತೀ ಸೋಮವಾರ ವಿಶೇಷ ಪೂಜಾ ಕೈಂಕರ್ಯ ಮತ್ತು ಮಹಾ ರುದ್ರಾಭಿಷೇಕ ನಡೆಸಲಾಗುತ್ತದೆ. ದೇಶದ ವಿವಿಧೆಡೆಗಳಿಂದ ಇಲ್ಲಿಗೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ.

### ಯಾತ್ರಿಕರಿಗೆ ವಿಶೇಷ ಮಾಹಿತಿ

- ಇಲ್ಲಿಗೆ ಸರ್ಕಾರಿ ಬಸ್ಸುಗಳು, ಖಾಸಗೀ ಬಸ್ಸುಗಳ ವ್ಯವಸ್ಥೆ ಇದೆ.
- ರೈಲು ಸಂಪರ್ಕವೂ ಇದೆ. ಇತ್ತೀಚೆಗೆ ವಿಮಾನ ವ್ಯವಸ್ಥೆಯೂ ಆಗಿದೆ.
- ಈ ದೇಗುಲವು ಬೆಳಿಗ್ಗೆ 5 ರಿಂದ ರಾತ್ರಿ 8.30 ರವರೆಗೂ ತೆರೆದಿರುತ್ತದೆ.
- ರಾತ್ರಿ ಬರುವ ಭಕ್ತರಿಗೆ ವಸತಿ ವ್ಯವಸ್ಥೆ, ದಾಸೋಹ ಕಾರ್ಯಗಳು ನಡೆಯುತ್ತವೆ.
- ಇಲ್ಲಿನ ಅಥಣಿ, ಹಲಸಿ, ಗೋಕಾಕ್, ಸೌಂದತ್ತಿ, ಘಟಪ್ರಭ ಅಣೆಕಟ್ಟು, ನವಿಲು ತಿರ್ಥ, ಕಿತ್ತೂರು, ಬೈಲಹೊಂಗಲ ಪ್ರವಾಸಿ ಸ್ಥಳಗಳು.
- ಕಮಲ ಬಸದಿ, ಸೋಗಲ್ ಕ್ಷೇತ್ರ, ರಾಜಹಂಸಗಡ, ಗೋಕಾಕ ಜಲಪಾತ, ಸಾದ ಜಲಪಾತಗಳು ಇಲ್ಲಿಯ ಪ್ರೇಕ್ಷಣೀಯ ಸ್ಥಳಗಳು.

# ಮತ್ತೆ ಬರುವಳೇ

– ಶಾರದಾ ವಿ. ಮೂರ್ತಿ
ಮೈಕೋ ಬಡಾವಣೆ, ಬೆಂಗಳೂರು

ಕೃಶಕಾಯದ, ಲವಲವಿಕೆಯ ಇಪ್ಪತ್ತಾರರ ಯುವತಿ ಸಂಗೀತ, ನಮ್ಮ ಮನೆಯ ಕೆಲಸದವಳು. ಬೆಳಗಿನ ಏಳಕ್ಕೆ ನಮ್ಮ ಮನೆಯಲ್ಲಿ ಪ್ರತ್ಯಕ್ಷವಾಗಿ ಬಿಡುತ್ತಿದ್ದಳು. ನಮ್ಮ ಅವಳ ಪರಿಚಯ ಏಳೆಂಟು ತಿಂಗಳಿನದು. ಇಷ್ಟು ಸಣಕಲಾಗಿರುವ ಇವಳು ಏನು ಕೆಲಸ ಮಾಡಿಯಾಳು ಎಂಬ ನಮ್ಮ ಸಂದೇಹವನ್ನು ಒಂದೆರಡು ದಿನಗಳಲ್ಲಿ ಆಕೆ ದೂರ ಮಾಡಿದ್ದಳು. ವಿಪರೀತ ಚುರುಕು. ನಮ್ಮ ನಿರೀಕ್ಷೆಯಷ್ಟು ಅಲ್ಲದಿದ್ದರೂ ಸಾಕಷ್ಟು ಚೆನ್ನಾಗಿಯೇ ಮನೆ ಸ್ವಚ್ಛ ಮಾಡುತ್ತಿದ್ದಳು. ಯಾವುದೇ ಮನೆಯಾದರೂ ಕೆಲಸದವರು ಮಾಡಿದ್ದನ್ನು ಪೂರ್ಣ ಮೆಚ್ಚಿಕೊಳ್ಳುತ್ತಾರೆಯೇ! ಆದರೆ ಕೆಲಸದ ಬಗ್ಗೆ ಈಕೆಗೆ ಮತ್ತೆ ಮತ್ತೆ ಹೇಳಬೇಕಾದ ಅವಶ್ಯಕತೆ ಇರಲಿಲ.

ಸಂಗೀತಾ ತನ್ನ ಮಗ ಹಾಗೂ ಮಗಳನ್ನು ಆಂಧ್ರದ ತನ್ನ ತವರು ಮನೆಯಲ್ಲಿ ಬಿಟ್ಟು ದುಡಿಮೆಗಾಗಿ ಪತಿಯೊಂದಿಗೆ ಬೆಂಗಳೂರಿನಲ್ಲಿದ್ದಾಳೆ. ಇಲ್ಲಿ ಏಳೆಂಟು ಮನೆಗಳ ಕೆಲಸ ಮಾಡುತ್ತಾ ಆದಷ್ಟು ಹಣ ಕೂಡಿಡುತ್ತಾ. ಮಕ್ಕಳಿಗೆ ಉತ್ತಮ ಭವಿಷ್ಯವನ್ನು ರೂಪಿಸುವ ಕನಸು ಕಾಣುತ್ತಾ ಉತ್ಸಾಹದಿಂದಲೇ ಕೆಲಸ ಮಾಡುತ್ತಿದ್ದಳು. ಊರಿಗೆ ಹೋದರೆ ಮಾತ್ರ ಬರುವುದು ತಡವಾಗುತ್ತಿತ್ತು. ಅವಳು ಹೇಳಿದ ದಿನಗಳು ಮೀರಿ ಹೋಗುತ್ತಿದ್ದವು. ತವರ ಮೋಹ ಯಾರನ್ನು ಬಿಟ್ಟೀತು ಅದರಲ್ಲೂ ಹೆತ್ತ ಮಕ್ಕಳು ಅಲ್ಲಿರುವಾಗ.. “ಮಗಳು ಹೋಗ್ಬೇಡಮ್ಮ ಅಂತ ಹೇಳ್ತಾಳೆ ಆದ್ರೆ ಏನು ಮಾಡೋದು.. ಆ ಸಣ್ಣ ಮಕ್ಕಳು ಇಲ್ಲಿ ನಮ್ಮ ಜೊತೆ ಇದ್ರೆ ನನಗೆ ಕೆಲಸ ಮಾಡೋಕಾಗತ್ತಾ? ಬೆಳಗ್ಗೆ 5.30ಕ್ಕೆ ಮನೆ ಬಿಟ್ಟರೆ ನಾನು ಹೋಗುವಾಗ 3:00 ಆಗಿರುತ್ತದೆ. ಅವಳ ಒಳ್ಳೆಯದಕ್ಕಾಗಿಯೇ ಅಲ್ಲವಾ, ನಾನು ಕಷ್ಟ ಪಡುತ್ತಿರುವುದು. ನನಗೂ ಬೇಜಾರಾಗುತ್ತೆ, ಬೇರೆ ದಾರಿಯಿಲ್ಲ. ಅಲ್ಲಿ ಅಪ್ಪ ಅಮ್ಮ ತಂಗಿ ಎಲ್ಲರೂ ಚೆನ್ನಾಗಿ ನೋಡಿಕೊಳ್ತಾರೆ”. ಎಂದು ನಮ್ಮ ಹತ್ತಿರ ಹೇಳುವಾಗ ಅವಳ ಕಣ್ಣು ತುಂಬಿ ಬರುತ್ತಿತ್ತು.

ಏನಾದರೂ ವಿಚಾರಿಸಿಕೊಳ್ಳಲು ಪತಿಯ ಫೋನ್ ನಂಬರನ್ನು ಕೊಟ್ಟಿದ್ದಳು. ಒಮ್ಮೊಮ್ಮೆ ಸಂಗೀತಳಿಗೆ ಅನಾರೋಗ್ಯ ಕಾಡಿದಾಗ ಬೆಳಿಗ್ಗೆ ಪತಿಯಿಂದಲೇ ಫೋನ್ ಬರುತ್ತಿತ್ತು. ನಮ್ಮ ಮೊಮ್ಮಗಳು ಅವಳ ಮಕ್ಕಳಿಗೆ ತುಸುವೇ ದೊಡ್ಡವಳು. ಪ್ರಾಯಶಃ ಇವಳನ್ನು ನೋಡಿದರೆ ಮಗಳ ನೆನಪಾಗುತ್ತೇನೋ. ಆಗೀಗ ಅವಳ ಬಳಿ ಒಂದಿಷ್ಟು ಮಾತನಾಡಿ ಮತ್ತೆ ಹೊತ್ತಾಗುತ್ತದೆಂದು ಓಡಿ ಬಿಡುತ್ತಿದ್ದಳು.

ಆಗಾಗ ಹಬ್ಬವೆಂದು, ಪೂಜೆಯೆಂದು ಚೆನ್ನಾಗಿ ಅಲಂಕರಿಸಿಕೊಂಡು ಒಳ್ಳೆಯ ಸೀರೆಯುಟ್ಟು ಹೂ ಮುಡಿದುಕೊಂಡು ಬರುತ್ತಿದ್ದಳು. ಲಕ್ಷಣದ ಯುವತಿ.. ಗಮನವಿಟ್ಟು ಅಲಂಕರಿಸಿಕೊಂಡರೆ ಮತ್ತಷ್ಟು ಚೆನ್ನಾಗಿ ಕಾಣುತ್ತಿದ್ದಳು. ಒಳ್ಳೆಯ ಸೀರೆಯುಟ್ಟು ಬಂದವಳು ಹೇಗೆ ಕೆಲಸ ಮಾಡುತ್ತಾಳೆ ಎಂಬ ಕುತೂಹಲ ನಮಗೆ. ಆದರೆ, ಸ್ವಲ್ಪವೂ ಸೀರೆ

ಮುದುರದಂತೆ, ಕೊಳೆಯಾಗದಂತೆ, ಒದ್ದೆಯಾಗದಂತೆ, ಅವಳು ಕೆಲಸ ಮಾಡುವ ಪರಿಗೆ ಆಶ್ಚರ್ಯವಾಗುತ್ತಿತ್ತು.

ಒಂದು ದಿನ ರಜೆ ಬೇಕೆಂದು ಹೇಳಿದವಳು; ಮರುದಿನ ತುಸು ತಡವಾಗಿ ಬಂದಿದ್ದಳು. ಸಮಾರಂಭಕ್ಕೆ ಹೋಗುವಂತೆ ಅಲಂಕರಿಸಿಕೊಂಡಿದ್ದ ಅವಳನ್ನು ಆ ಬಗ್ಗೆ ಪ್ರಶ್ನಿಸಿದಾಗ ತುಸು ನಾಚುತ್ತಲೇ ಉತ್ತರಿಸಿದಳು. ಅವಳ ಹುಟ್ಟಿದ ಹಬ್ಬ ಇತ್ತೆಂದು. ಪತಿ ಹೊಸ ಸೀರೆ, ಹೂವು ಹಣ್ಣು ಕೇಕ್ ಎಲ್ಲವನ್ನು ತಂದು ಆಚರಿಸಿದ್ದಾರೆಂದೂ, ರಾತ್ರಿ 10–12 ಮಂದಿಯನ್ನು ಮನೆಗೆ ಕರೆದಿದ್ದರೆಂದು ತಿಳಿಸಿದ್ದಳು.

ಅಂತೂ ಕೇಕ್ ಸಂಪ್ರದಾಯ ಇಲ್ಲಿಯವರೆಗೂ ಬಂದಿದೆಯಲ್ಲ ಎಂಬ ಕಸಿವಿಸಿಯಾಗಿತ್ತು. ಅದರ ನಡುವೆ ಅವರು ಅಷ್ಟೊಂದು ಅನ್ಯೋನ್ಯವಾಗಿದ್ದಾರಲ್ಲ ಎಂಬ ಸಂತೋಷವಂತು ಆಗಿತ್ತು. “ನಮ್ಮ ಮದುವೆ ಸಂಬಂಧದಲ್ಲೇ ಆಗಿರೋದು. ಒಂದೆರಡು ವರ್ಷ ಅತ್ತೆ ಮಾವನವರ ಜೊತೆಯಲ್ಲಿದ್ದಾಗ ತುಂಬಾ ಗೋಳಾಡಿಸುತ್ತಿದ್ದರಮ್ಮ. ಅದನ್ನು ನೋಡಿ ಯಜಮಾನ್ರು ಬೇರೆ ಮನೆ ಮಾಡಿದ್ರಮ್ಮ. ಚಿಕ್ಕ ಮನೆಯಾದ್ರೂ ಸುಖವಾಗಿದ್ದೀವಿ. ಯಜಮಾನ್ರು ಡ್ರೈವಿಂಗ್ ಕೆಲಸ ಮಾಡುತ್ತಾರೆ. ಕುಡಿತದ ಚಟ ಇಲ್ಲ. ಹೊಡೆದು ಬಡಿದು ಮಾಡಲ್ಲ ಎಂದು ಸಂತೋಷದಿಂದಲೇ ಹೇಳಿಕೊಂಡಿದ್ದಳು. ಅವಳು ಹಾಗೆ ಮಾತನಾಡುತ್ತಾ ನಿಲ್ಲುತ್ತಿದ್ದುದೇ ಅಪರೂಪ. ಗಡಿಯಾರದ ಮುಳ್ಳುಗಳಂತೆ ಚಕಚಕನೆ ಕೆಲಸ ಮುಗಿಸಿ ಮತ್ತೊಂದು ಮನೆಗೆ ಹೋಗುವ ಧಾವಂತ. ಕೆಲಸದಲ್ಲಿ ಚುರುಕಿದ್ದಂತೆ ವ್ಯವಹಾರದಲ್ಲಿಯೂ ಬಲು ಚುರುಕು “ಅವರ ಮನೆಯಲ್ಲಿ ನನ್ನನ್ನು ಎಷ್ಟು ಚೆನ್ನಾಗಿ ನೋಡಿಕೊಳ್ಳುತ್ತಾರಮ್ಮ. ರೇಷನ್ ಸಾಮಾನೆಲ್ಲಾ ಕೊಡಿಸ್ತಾರೆ”. ಎಂದೆಲ್ಲ ಬಣ್ಣಿಸುತ್ತಿದ್ದಳು.

“ನೀವು ಯಾವ ಸೀರೆ ಕೊಟ್ಟರೂ ಖುಷಿಯಿಂದ ಉಡ್ತೀನಮ್ಮ”. ಎನ್ನುತ್ತಿದ್ದವಳು ನಾನು ಕೊಟ್ಟ ಸೀರೆಗಳನ್ನು ಉಟ್ಟಿರಲೇ ಇಲ್ಲ, ಆ ಬಗ್ಗೆ ವಿಚಾರಿಸಿದಾಗ, “ಅದನ್ನು ಊರಿಗೆ ಹೋದಾಗ ತಗೊಂಡು ಹೋದೆ ಅಮ್ಮ”. ಎಂದು ನಕ್ಕು ಬಿಟ್ಟಿದ್ದಳು. ಇವಳು ಹೀಗೆ ಎಂದೂ ನಗುನಗುತ್ತಿರಲಿ ಎಂದು ಹಾರೈಸುವಾಗ ತಾಯಿ ತಂದೆಯರನ್ನು ಬಿಟ್ಟು ದೂರವಿರಬೇಕಾದ ಮಕ್ಕಳ ಬಗ್ಗೆ ಪಿಚ್ಚೆನಿಸುತ್ತಿತ್ತು. ತವರಿನವರು ಪ್ರೀತಿಯಿಂದ ನೋಡಿಕೊಳ್ಳುವುದರಿಂದಲೇ ಅಲ್ಲವೆ ಅವಳು ಹಾಗೆ ವ್ಯವಸ್ಥೆ ಮಾಡಿಕೊಂಡಿರುವುದು; ಅದು ಅವರ ಸಂಸಾರದ ವೈಯಕ್ತಿಕ ವಿಷಯ ಎಂದುಕೊಂಡು ಅವಳಲ್ಲಿ ಅದರ ಪ್ರಸ್ತಾಪವೆತ್ತುತ್ತಿರಲಿಲ್ಲ.

ಒಟ್ಟಾರೆ ದಿನದ 45 ನಿಮಿಷಗಳು ಮಾತ್ರವೇ ನಮ್ಮಲ್ಲಿರುತ್ತಿದ್ದ ಸಂಗೀತ ಮನೆಯಲ್ಲಿ ಎಲ್ಲರ ಮೆಚ್ಚುಗೆ ಗಳಿಸಿಬಿಟ್ಟಿದ್ದಳು. ಇಂತಹ ಸಂಗೀತ ಒಂದು ದಿನ ಬೆಳಗ್ಗೆ ಏಳು ಗಂಟೆಯ ಹೊತ್ತಿಗೆ ಕೆಲಸಕ್ಕೆ ಬಾರದೆ ಫೋನ್ ಮಾಡಿದ್ದಳು. ಅನಾರೋಗ್ಯವಿರಬಹುದೆ.. ಹಾಗಾದಾಗ ಅವಳ ಪತಿಯೇ ಫೋನ್ ಮಾಡುತ್ತಿದ್ದರಲ್ಲವೇ? “ಏನು ಸಂಗೀತ ಕಾಯುತ್ತಾ ಇದ್ದೇವೆ. ಎಲ್ಲಿಂದ ಫೋನ್ ಮಾಡುತ್ತಿದ್ದೀಯಾ” ಎಂದು ವಿಚಾರಿಸಿದಾಗ, ಅವಳ ಅಳುವಿನ ಸ್ವರ ಕೇಳಿ ದಿಗಿಲಾಗಿತ್ತು. ಮತ್ತಷ್ಟು ಕಳವಳದಿಂದ ಅಳು ನಿಲ್ಲಿಸಿ ವಿಚಾರ ತಿಳಿಸುವಂತೆ ಆತುರ ಪಡಿಸಿದ್ದೆ. ಅವಳು ಅಳುತ್ತಲೇ ಹೇಳಿದ್ದಿಷ್ಟು. ಏನೋ ಹಣದ ವಿಷಯಕ್ಕೆ ಮನೆಯಲ್ಲಿ ಗಲಾಟೆ ಯಾಗಿದೆಯಂತೆ. ಅತ್ತೆ ಮತ್ತು ಪತಿ ಈಗ ಒಂದಾಗಿದ್ದಾರಂತೆ, ಬೇರೆಬೇರೆ ಮನೆಯಲ್ಲಿರುವ ಬದಲು ಎಲ್ಲರೂ ಒಟ್ಟಿಗೆ ಒಂದೇ ಮನೆಯಲ್ಲಿರಬೇಕಂತೆ, ಬೇರೆ ಬೇರೆ ಕಾರಣಕ್ಕಾಗಿ ಮಾಡಿದ್ದ ಸಾಲವನ್ನು ಎಲ್ಲರೂ ಒಟ್ಟಿಗೆ ದುಡಿದು ತೀರಿಸಬೇಕಂತೆ.

ಅತ್ತೆ, ಪತಿ ಇಬ್ಬರೂ ಹೀಗೆ ಹೇಳಿದೊಡನೆ ಸಂಗೀತಳಿಗೆ ಮಕ್ಕಳ ಭವಿಷ್ಯ ಧುತ್ತನೆ ಅವಳೆದುರು ನಿಂತಿತ್ತು. ಎಷ್ಟೆಲ್ಲಾ ಕಷ್ಟಪಟ್ಟು ಹಣ ಕೂಡಿಡುವ ಕನಸು ನುಚ್ಚು ನೂರಾಗುವುದಿಲ್ಲವೇ? ಒಮ್ಮೆ ಒಪ್ಪಿಕೊಂಡುಬಿಟ್ಟರೆ ಮತ್ತೆ ಎಲ್ಲವೂ ಅಯೋಮಯ ಎಂದೆನಿಸಿತು. ಇವಳು ಪ್ರಬಲವಾಗಿ ಅವರ ಮಾತನ್ನು ವಿರೋಧಿಸಿದ್ದಾಳೆ. ಪರಿಣಾಮವಾಗಿ ಇಬ್ಬರೂ ಚೆನ್ನಾಗಿ ಇವಳನ್ನು ಹೊಡೆದಿದ್ದಾರೆ. ಇವಳು ಕೂಗಿಕೊಂಡು ಪ್ರತಿಭಟಿಸುತ್ತಿದ್ದಾಗ ನೆರೆಯವರು ಬಂದು ರಕ್ಷಿಸಿದ್ದಾರೆ. ಅತ್ತೆ ಪತಿ ಇಬ್ಬರೂ ಹೊರಗೆ ಹೋದ ನಂತರ ಅಳುತ್ತಲೇ ರಾತ್ರಿ ಕಳೆದು ಬೆಳಗಾಗುತ್ತಲೇ ಎಲ್ಲರ ಮನೆಗೆ ಫೋನ್ನಲ್ಲಿ ಸುದ್ದಿ ತಿಳಿಸಿದ್ದಾಳೆ. ನಂತರ ತವರೂರು ಹಾದಿ ಹಿಡಿಯುವುದು ಅವಳ ತೀರ್ಮಾನವಾಗಿತ್ತು.

"ಮೈಕೈ ಎಲ್ಲಾ ನೋವಮ್ಮ. ಇಷ್ಟು ವರ್ಷಗಳವರೆಗೂ ಹೊಡೆದು ಬಡಿದು ಮಾಡ್ತಾ ಇರಲಿಲ್ಲ. ಈಗ ತಾಯಿ ಮಗ ಸೇರಿಕೊಂಡು ಹೇಗೆ ಮಾಡ್ತಾ ಇದ್ದಾರೆ". ಎಂದು ದುಃಖ ತೋಡಿಕೊಂಡಿದ್ದಳು. ಹೇಳಿದಂತೆ ಅವಳು ತವರಿಗೆ ಹೋಗಿದ್ದು ಆಯಿತು. ಪತಿ ಅಲ್ಲಿಗೆ ಬಂದು ತನ್ನನ್ನು ಕರೆದುಕೊಂಡು ಬರುತ್ತಾನೆಂಬ ವಿಶ್ವಾಸದಿಂದ ಕಾಯುತ್ತಿದ್ದಾಳೆ. ತಂದೆ ಸರಿಯಾಗಿ ಮಾತನಾಡಿ ಕರಾರುಗಳನ್ನು ಹಾಕಿ ಕಳುಹಿಸಿಕೊಡುವುದಾಗಿ ಸಮಾಧಾನ ಪಡಿಸುತ್ತಿದ್ದಾರೆ. ಆದರೆ ಬರಬರುತ್ತಾ ಅವಳ ನಂಬಿಕೆ ಕುಸಿಯುತ್ತಿದೆ. ಭರವಸೆ ಹುಸಿಯಾಗುತ್ತಿದೆ.

ನಾನು ಎಷ್ಟೋ ಬಾರಿ ಫೋನ್ ಮಾಡಿದರೆ ಒಮ್ಮೆ ತೆಗೆದುಕೊಳ್ಳುತ್ತಿದ್ದಳು. "ನಮ್ಮ ಯಜಮಾನ್ರು ಫೋನ್ ಮಾಡಿಲ್ಲ ಇಲ್ಲಿಗೆ ಬರಲೂ ಇಲ್ಲ. ನನಗೆ ದಿಕ್ಕು ತೋಚ್ತಾನೇ ಇಲ್ಲ. ಆದ್ರೆ ನಾನಾಗಿಯೇ ಅಲ್ಲಿಗೆ ಬರುವುದಿಲ್ಲ. ಆ ಅತ್ತೆಯ ಜೊತೆಗಂತೂ ಇರೋಕೆ ಆಗೋದೇ ಇಲ್ಲ, ಎಷ್ಟೆಲ್ಲಾ ಕಷ್ಟಪಟ್ಟು ಮನೆ ಕೆಲಸ ಮಾಡಿ ನಾನ್ಯಾಕಮ್ಮ ಇವರು ಮಾಡಿರೋ ಸಾಲ ತೀರಿಸ್ಬೇಕು. ಎಂದು ಮನಸ್ಸಿನಲ್ಲಿದ್ದುದನ್ನು ಹೇಳಿಕೊಂಡಿದ್ದಳು.

"ನೀನೇ ತಾನೆ ಮನೆಬಿಟ್ಟು ಹೋಗಿದ್ದು.. ನೀನೇ ಬಂದ್ಬಿಡು. ಅದು ನಿನ್ನ ಮನೆಯೇ ಅಲ್ಲವಾ?" ಎಂಬ ನನ್ನ ಮಾತಿಗೆ ಅವಳಿಗೆ ಕೋಪವೇ ಬಂದುಬಿಟ್ಟಿತ್ತು.

"ನಾನಾಗಿ ನಾನೇ ವಾಪಸ್ಸು ಬಂದ್ರೆ ಅವರು ಹೇಳಿದ ಕರಾರುಗಳಿಗೆಲ್ಲ ಒಪ್ಪಿಕೊಳ್ಳಬೇಕು. ನಾನು ಯಾಕೆ ಸೋಲಬೇಕು. ನಾನು ದುಡಿತ್ತಿನಲ್ಲಮ್ಮ? ಅವರೇ ಬಂದು ಇನ್ನು ಮೇಲೆ ನನಗೆ ಹೊಡೆಯಲ್ಲ ಅಂತ ಮಾತು ಕೊಡಬೇಕು." ಎಂದು ನಿಷ್ಠುರವಾಗಿಯೇ ನುಡಿದಿದ್ದಳು.

ಸಂಗೀತಾಳ ಕಥೆ ಅನೇಕರ ಕಥೆಯಾಗಿರಬಹುದು. ನಮಗೆ ಒಬ್ಬಳು ಒಳ್ಳೆಯ ಕೆಲಸದವಳು ಇಲ್ಲವಾದಳು ಎನ್ನುವುದಕ್ಕಿಂತ ಚೆನ್ನಾಗಿ ಏನೆಲ್ಲಾ ಆಸೆಗಳನ್ನಿಟ್ಟುಕೊಂಡು ನಗುನಗುತ್ತಾ ಸಂಸಾರ ನಡೆಸುತ್ತಿದ್ದವಳ ದಾಂಪತ್ಯ ಬದುಕು ಇನ್ನು ಶಾಶ್ವತವಾಗಿಯೇ ಮುರುಟಿ ಹೋದೀತೆ? ಇದಕ್ಕೆ ಕಾರಣರಾರು? ಮಗ ಸೊಸೆಯ ದಾಂಪತ್ಯದಲ್ಲಿ ಹಿರಿಯರು ಮೂಗು ತೂರಿಸುವುದು ಎಷ್ಟು ಸರಿ? ಎರಡೂ ಕಡೆಯವರನ್ನು ವಿಚಾರಿಸಿದಾಗ ಮಾತ್ರವೇ ನಮಗೆ ನಿಜವಾದ ವಿಷಯದ ಅರಿವಾಗುತ್ತದೆ. ಎಲ್ಲರೂ ಅವರವರ ಮೂಗಿನ ನೇರಕ್ಕೆ ಮಾತನಾಡುತ್ತಾರೆ ಅವರು ಅಷ್ಟೊಂದು ಸಾಲ ಮಾಡಿದ್ದಾದರೂ ಏಕಾಗಿ? ಸುಮಾರಾಗಿ ಇಂತಹ ಮನೆ ಕೆಲಸದವರು ಬೇರೆ ಬೇರೆ ಚೀಟಿ ವ್ಯವಹಾರಗಳಲ್ಲಿ ಹಣವನ್ನು ತೊಡಗಿಸುತ್ತಾರೆ. ಇನ್ನು ಹರಕೆ ತೀರಿಸಲು ದೇವರ ಸ್ಥಳಗಳಿಗೆ ಹೋಗಲು ಸಾಲ ಮಾಡುತ್ತಾರೆ. ಚಿಕ್ಕ ಪುಟ್ಟ ಒಡವೆ ಕೊಳ್ಳಲು ಅವರಿಗೆ ಹಣ ಬೇಕು. ಕೆಲವೊಮ್ಮೆ ಬಡ್ಡಿ ವ್ಯವಹಾರ ಮಾಡುವವರ ಹತ್ತಿರ ಇವರು ಹಣ ತೆಗೆದುಕೊಂಡು ಬಿಟ್ಟರಂತೂ ಬಡ್ಡಿಯೇ ಅಸಲನ್ನು ಮೀರಿಸಿ ಬಿಟ್ಟಿರುತ್ತದೆ.

ಸಂಗೀತಳ ಅತ್ತೆಯು ತನ್ನ ವೈಯಕ್ತಿಕ ಕಾರಣಗಳಿಗಾಗಿ ಸಾಲ ಮಾಡಿ ಈಗ ತೀರಿಸುವ ಹೊರೆಯನ್ನು ಹೊರಿಸುತ್ತಿದ್ದಾಳೆಯೇ?

ಸಂಗೀತ ಹೇಳುವುದರಲ್ಲೂ ತರ್ಕವಿದೆ. ಮತ್ತೆ ಮತ್ತೆ ಇದೇ ವಿಷಯ ಪುನರಾವರ್ತನೆಯಾಗಿ ತಾಯಿ ಮಗ ಕಿರುಕುಳ ಕೊಡತೊಡಗಿದ್ದರೆ? ಎಲ್ಲರೂ ಸೌಹಾರ್ದದಿಂದ ಬಾಳಿದರೆ ಒಟ್ಟು ಕುಟುಂಬದಲ್ಲಿ ಸುಖವಿದ್ದೀತು! ಆದರೆ ಅವಳು ಹಿಂದೆ ಹೇಳುತ್ತಿದ್ದಂತೆ ದೊಡ್ಡ ಕುಟುಂಬದ ಕೆಲಸ, ಅಡುಗೆ ಎಂದು ಸಂಗೀತಳಿಗೆ ಬೇರೆ ಮನೆಗಳಿಗೆ ಕೆಲಸಕ್ಕೆ ಹೋಗಲಾಗದಿದ್ದರೆ?

ಇದೀಗ ನನ್ನ ಮನದಲ್ಲಿ ಅದೇ ಯೋಚನೆ ಗಿರಕಿ ಹೊಡೆಯತೊಡಗಿತ್ತು. ಊರಿನಲ್ಲಿ ಮಕ್ಕಳನ್ನು ಬಿಟ್ಟು ಬಂದ ಸಂಗೀತಳ ಪತಿಗಾದರೂ ವಿವೇಚನೆ ಬೇಡವೇ? ಮಾಡಿದ ಸಾಲ ತೀರಿಸಲು ಬೇರೆಯ ಪರಿಹಾರ ಸಾಧ್ಯವಿಲ್ಲವೇ? ಸಂಗೀತಳ ಹಣವೂ ಸಾಲಕ್ಕೆ ಹೋಗಬೇಕೆ? ಮಕ್ಕಳಿಗೆ ವಿದ್ಯಾಭ್ಯಾಸ ಮೊಟಕಾದರೆ ಅವರು ಮುಂದೆ ಕೂಲಿ ನಾಲಿ ಮಾಡಿ ಬದುಕಬೇಕೆ? ಮಧ್ಯಮ ಹಾಗೂ ಶ್ರೀಮಂತ ವರ್ಗಗಳ ಕುಟುಂಬಗಳಲ್ಲಂತೂ ವಿಚ್ಛೇದನ ಅತಿ ಸಾಮಾನ್ಯವಾಗಿಬಿಟ್ಟಿದೆ. ನನಗೊಮ್ಮೆ ಅನಿಸಿದ್ದುಂಟು "ಸಂಗೀತಾಳದ್ದೇ ಹಟವೇ? ತವರಿಗೆ ಹೋದದ್ದಾದರೂ ಏಕೆ? ಅತ್ತೆ ಮಾವಂದಿರೊಂದಿಗೆ ಇರಬಾರದೆ?

ಇವಳಿಗೆ ಇಷ್ಟೊಂದು ಸ್ವಾಭಿಮಾನವೇ? ಹಾಗಿರುವಾಗ ಸಾಫ್ಟವೇರ್ ತರುಣಿಯರ ಬಗ್ಗೆ ಹೇಳಲಾದೀತೆ? ಎಂದು. ಆದರೆ ಮರುಕ್ಷಣವೇ ಎನಿಸಿತು. ಸ್ವಾಭಿಮಾನಕ್ಕೂ ವೃತ್ತಿಗೂ ಎಲ್ಲಿಯ ನಂಟು? ಮಕ್ಕಳನ್ನು ಹೆತ್ತ ತಾಯಿಯಾಗಿ, ಗೃಹಿಣಿಯಾಗಿ, ಭವಿಷ್ಯದ ಚಿಂತೆ ಮಾಡಲು ಅವಳು ಎಲ್ಲಾ ವಿಧದಲ್ಲಿಯೂ ಅರ್ಹಳಲ್ಲವೇ? ಅವಳಿಗೆ ಅವಳ ಕಸುಬಿನಲ್ಲಿ ನಂಬಿಕೆ ಯಿದೆ. ದುಡಿದು ತಿನ್ನುತ್ತೇನೆಂಬ ವಿಶ್ವಾಸವಿದೆ. ಹಾಗೆಂದ ಮಾತ್ರಕ್ಕೆ ಅವಳು ಪತಿಯನ್ನು ಬಿಟ್ಟಿರುವುದು ಸ್ವಾಭಿಮಾನದಿಂದ ಎನ್ನಲಾಗದು. ಹಾಗೆಯೇ ಅವಳ ಪತಿ ಹೊಡೆದಿದ್ದನ್ನು ಹಿಂಸಿಸಿದ್ದನ್ನು ಸಮರ್ಥಿಸಲಾಗದು. ಅಂತಹ ಸಂದರ್ಭಗಳಲ್ಲಿ ಅವಳ ರಕ್ಷಣೆಯನ್ನು ಅವಳು ಮಾಡಿಕೊಳ್ಳಲೇಬೇಕು. ಮುಂದೆಯೂ ಹೀಗಾದರೆ ಎಂಬ ಅವಳ ಭೀತಿಯು ಸಹಜವೇ!

ನಮ್ಮ ಪರಿಚಿತರಾದ ವಿಚ್ಛೇದಿತ ಸತಿ-ಪತಿಗಳಿದ್ದಾರೆ. ಇಬ್ಬರೂ ಬೇರೆಯವರ ದೃಷ್ಟಿಯಲ್ಲಿ ತುಂಬಾ ಒಳ್ಳೆಯವರೆ. ಆದರೆ ಅವರಿಬ್ಬರಿಗೂ ಹೊಂದಾಣಿಕೆಯಾಗದು. ಯಾವುದೋ ಒಂದು ಸಂದರ್ಭದಲ್ಲಿ ಸಿಡಿದ ಮಾತಿನ ಪರಿಣಾಮವಾಗಿ ಇಬ್ಬರು ಬೇರೆಯಾಗಿಯೇ ಬದುಕು ಸಾಗಿಸುತ್ತಿದ್ದಾರೆ. ಇಬ್ಬರೂ ಮರುಮದುವೆಯಾಗಿಲ್ಲ. ಮಕ್ಕಳಿಗೆ ತಂದೆ ಪ್ರೀತಿಯ ಬಗ್ಗೆ ಅದೆಷ್ಟು ಅನಿಸುತ್ತಿರಬಹುದು?

ಪತಿ ಇರುವವರೆಗೂ ಒಂದು ರೀತಿಯ ಗೃಹ ಬಂಧನವನ್ನು ಅನುಭವಿಸುತ್ತಿದ್ದ ನನ್ನ ಒಬ್ಬಳು ಗೆಳತಿ ಇದೀಗ ಸಂಗೀತ, ಸಾಹಿತ್ಯದಲ್ಲಿ ತೊಡಗಿಸಿಕೊಂಡು ತೃಪ್ತಿ ಕಾಣುತ್ತಿದ್ದಾಳೆ. ಇಷ್ಟು ವರ್ಷಗಳವರೆಗೂ ತಮ್ಮೆಲ್ಲಾ ಆಸೆಗಳನ್ನು ತಮ್ಮೊಳಗೆ ಅವಿತಿಟ್ಟುಕೊಂಡು ಪತಿಯೊಡನೆ ಸಂಸಾರ ಮಾಡಿದುದು, ಸಂಸಾರಕ್ಕಾಗಿ, ಮಕ್ಕಳಿಗಾಗಿ ಮಾಡಿದ ತ್ಯಾಗವೇ ಅಲ್ಲವೇ?

ಹಾಂ! ನಾನು ಈ ಲೇಖನ ಬರೆಯುತ್ತಿರುವಂತೆಯೇ ಸುದ್ದಿ ಬಂದಿದೆ. ಊರಿಗೆ ಹೋಗಿ ಪತ್ನಿಯನ್ನು ಸಂಗೀತಳ ಪತಿ ಕರೆ ತಂದಿದ್ದಾನಂತೆ. ಮಕ್ಕಳು ಬಂದಿದ್ದಾರಂತೆ. "ಎರಡು ದಿನ ಬಿಟ್ಟು ಕೆಲಸಕ್ಕೆ ಬರ್ತೀನಮ್ಮ ಆಗ ಎಲ್ಲಾ ಹೇಳ್ತೀನಿ". ಎಂದು ಚುಟುಕಾಗಿ ಹೇಳಿ ಸಂಗೀತ ಫೋನ್ ಇಟ್ಟಾಗ ನನಗೆ ಅತೀವ ಸಮಾಧಾನವಾಗಿತ್ತು.

# ಅಯೋಧ್ಯೆ ಬೈಠಕ್ – ವಿಶ್ವ ಹಿಂದು ಪರಿಷದ್ ಹೊಸ ನಿಯುಕ್ತಿ



ಶ್ರೀ ಅಲೋಕ್ ಕುಮಾರ್
ಅಧ್ಯಕ್ಷರು



ಶ್ರೀ ಮಿಲಿಂದ್ ಪರಾಂಡೆ
ಸಂಘಟನಾ ಕಾರ್ಯದರ್ಶಿ



ಶ್ರೀ ವಿನಾಯಕ ರಾವ್ ದೇಶಪಾಂಡೆ
ಸಹ ಸಂಘಟನಾ ಕಾರ್ಯದರ್ಶಿ



ಶ್ರೀ ಬಜರಂಗಲಾಲ್ ಬಾಗಡಾ
ಮಹಾ ಕಾರ್ಯದರ್ಶಿ



ಕ್ಯಾನ್ಸರ್ ಅಸ್ವಸ್ಥರಿಗೆ ಕೂದಲಿನ ದಾನದ ಟ್ರೆಂಡ್
ಸೃಷ್ಟಿಸಿದ ಮಂಗಳೂರು ಸೇವಾ ವಿಭಾಗ
ಪ್ರಮುಖ ದೀಪಕ್ ಮರೋಲಿಯವರಿಗೆ ಪ್ರಶಂಸಾ ಪತ್ರ



ರಕ್ತದಾನ ಶಿಬಿರ ಪ್ರಾಯೋಜನೆ
ವಿಶ್ವ ಹಿಂದು ಪರಿಷದ್ ಸಾಗರ ಜಿಲ್ಲೆಗೆ
ಪ್ರಶಂಸಾ ಪತ್ರ





ವಿಶೇಷ ಸತ್ಸಂಗ
ಮತ್ತು ಬಾಲಸಂಸ್ಕಾರ ಕೇಂದ್ರ,
ಹೆಬ್ಬಾಳ, ಬೆಂಗಳೂರು



ಮಂಡ್ಯ ಕೋಟೆಬೆಟ್ಟು
ವೆಂಕಟರಮಣ ರಥ
ಬಜರಂಗದಳದ
ಸಹಭಾಗಿತನ



Regd. No. RNP/KA/BGS/636/2024-2026
Post at Bengaluru PSO 560 026 on 6/10 (of every month)
Licenced to Post without pre-payment
WPP No.: PMG/BG/WPP/338/2024-2026

Total Pages 44
RNI No. KARKAN/2002/08081
Date of Publication 01-03-2024









ಕರ್ನಾಟಕದ ಪ್ರತಿನಿಧಿಗಳಲ್ಲಿ ಕೆಲವರು

ವಿಶ್ವ ಹಿಂದು ಪರಿಷದ್ ಕೇಂದ್ರೀಯ ಪ್ರಬಂಧ ಸಮಿತಿ ಮತ್ತು ಪ್ರನ್ಯಾಸಿ ಮಂಡಳಿ ಸಭೆ, ಅಯೋಧ್ಯೆ

ಇಂದ

**ಹಿಂದುವಾಣಿ**
'ಧರ್ಮಶ್ರೀ',
91, ಶಂಕರಪುರ,
ಬೆಂಗಳೂರು – 560 004

ಹಿಂದುವಾಣಿ

Printed and Published by N.P. Muniraju on behalf of and owned by
Vishwa Hindu Parishad and Printed at Rastrotthana Mudranalaya, No. 8 & 8/1, Sathyapramoda Teertha Building
3rd Main, 9th Cross, Chamarajapete, Bengaluru - 560 018, Karnataka.
Published at #91, Dharmashri, Shankarapuram, Bengaluru - 560 004 Karnataka. Editor T.A.P. Shenoy